

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 28 ಭಾನುವಾರ 2022
ಸಂಪುಟ: 43 | ಸಂಚಿಕೆ: 133 | ಪುಟಗಳು: 10
ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com
₹4



8ನೇ ತರಗತಿ ಪಠ್ಯದಲ್ಲಿ ಸಾವರ್ಕರ್ ಪಾಠ




ಬೆಂಗಳೂರು: ಸಾವರ್ಕರ್ ಬಗ್ಗೆ ಪರ–ವಿರೋಧ ಚರ್ಚೆಗಳು ನಡೆಯುತ್ತಿರುವಾಗಲೇ ರಾಜ್ಯ ಸರ್ಕಾರ ಪಠ್ಯ ಪುಸ್ತಕದಲ್ಲಿ ವೀರ ಸಾವರ್ಕರ್ ಕುರಿತಾದ ಪಠ್ಯವನ್ನು ಸೇರ್ಪಡೆ ಮಾಡಿದೆ.

2022 ರಲ್ಲಿ ರೋಹಿತ್ ಚಕ್ರತೀರ್ಥ ಸಮಿತಿ ಮಾಡಿರುವ ಪರಿಷ್ಕರಣೆ ಪಠ್ಯದಲ್ಲಿ ಸಾವರ್ಕರ್ ಅವರ ಕುರಿತಾದ ಪಠ್ಯ ಸೇರ್ಪಡೆ ಮಾಡಲಾಗಿದೆ. 8ನೇ ತರಗತಿ ಕನ್ನಡ ವಿಷಯದಲ್ಲಿ ಕೆ.ಟಿ. ಗಟ್ಟಿ ರಚನೆಯ 'ಕಾಲವನ್ನು ಗೆದ್ದವರು' ಪಠ್ಯವನ್ನು ಸೇರಿಸಲಾಗಿದೆ.

ಈ ಪಠ್ಯದಲ್ಲಿ ಸಾವರ್ಕರ್ ಅವರು ಅಂಡಮಾನ್ ಜೈಲಿನಲ್ಲಿ ಇದ್ದ ವಿವರ, ಅವರಿಗೆ ನೀಡಿದ ಶಿಕ್ಷೆ ಅವರ ಹೋರಾಟಗಳ ಬಗ್ಗೆ ಉಲ್ಲೇಖ ಮಾಡಲಾಗಿದೆ. 2017–18ರಲ್ಲಿ ಬರಗೂರು ರಾಮಚಂದ್ರಪ್ಪ ಸಮಿತಿ ಪಠ್ಯದಲ್ಲಿದ್ದ ವಿಜಯಮಾಲಾ ರಂಗನಾಥ್ ರಚಿತ ಬ್ಲಡ್ ಗ್ರೂಪ್ ಪಠ್ಯವನ್ನು ಕೈ ಬಿಟ್ಟು ಹೊಸದಾಗಿ ಕಾಲವನ್ನು ಗೆದ್ದವರು ಎಂಬ ಸಾವರ್ಕರ್ ಪಠ್ಯ ಸೇರ್ಪಡೆ ಮಾಡಲಾಗಿದೆ.

ಪ್ರಧಾನಿ ಮೋದಿಗೆ ಮಾತು ಕೊಟ್ಟಿದ್ದೇನೆ: ಮುಂದೆಯೂ ಬಿಜೆಪಿ ಅಧಿಕಾರಕ್ಕೆ ತರುತ್ತೇನೆ



ಬೆಂಗಳೂರು: ರಾಜ್ಯದಲ್ಲಿ ಮುಂದೆಯೂ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಪ್ರಧಾನಿ ಮೋದಿ ಅವರಿಗೆ ಈ ಬಗ್ಗೆ ಮಾತು ಕೊಟ್ಟಿದ್ದೇನೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ತಿಳಿಸಿದರು. ಇಂದು ಮಾಧ್ಯಮಗಳ ಜತೆ ಮಾತನಾಡಿದ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಾವು 140 ಸ್ಥಾನವನ್ನು ಗೆಲ್ಲುತ್ತೇವೆ. ಈ ಮೂಲಕ ಮುಂದಿನ ಬಾರಿ ನಾವೇ ಅಧಿಕಾರಕ್ಕೆ ಬರುತ್ತೇವೆ. ಇದನ್ನು ಯಾರೂ ತಡೆಯಲು ಆಗಲ್ಲ ಎಂದರು. ಭ್ರಷ್ಟಾಚಾರ ತೊಲಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಕಾಂಗ್ರೆಸ್‌ನವರು ಉದ್ದೇಶಪೂರ್ವಕವಾಗಿ ಸರ್ಕಾರದ ವಿರುದ್ಧ ಕಮಿಷನ್ ಆರೋಪ ಮಾಡಿಸಿದ್ದಾರೆ. ಇದು ಸುಳ್ಳು ಆರೋಪ ಎಂದು ಜನರಿಗೂ ಗೊತ್ತು ಎಂದರು.

ಮುಡಾ ಕಾರ್ಯಾಚರಣೆ: ಆರು ಎಕರೆ ಪ್ರದೇಶದಲ್ಲಿ ತಲೆಯೆತ್ತಿದ್ದ

4 ಅನಧಿಕೃತ ಬಡಾವಣೆ ತೆರವು

● ಕಂಡಕಂಡಲ್ಲಿ ನಿರ್ಮಾಣವಾಗುತ್ತಿರುವ ಅನಧಿಕೃತ ಬಡಾವಣೆಗಳಿಗೆ ಎಚ್ಚರಿಕೆ ಸಂದೇಶ
● ಹಿಂದೆ ಮುಂದೆ ಯೋಚಿಸದೆ ನಿವೇಶನ ಖರೀದಿಸದಂತೆ ಮುಡಾ ಅಧಿಕಾರಿಗಳ ಎಚ್ಚರಿಕೆ





ಮೈಸೂರು, ಆ.27(ಆರ್‌ಕೆ, ಎಸ್‌ಬಿಡಿ)– ಮೈಸೂರಿನಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ನಾಲ್ಕು ಬಡಾವಣೆಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಶನಿವಾರ ತೆರವುಗೊಳಿಸಿದೆ.

ಮೈಸೂರಿನ ಸಾತಗಳ್ಳಿ ಗ್ರಾಮದ ಸರ್ವೆ ನಂ. 65, 27/3, 2/3 ಹಾಗೂ ದೇವನೂರು ಗ್ರಾಮದ ಸರ್ವೆ ನಂ. 25ರಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿದ್ದ ಬಡಾವಣೆಗಳನ್ನು ಉದಯಗಿರಿ ಠಾಣೆ ಪೊಲೀಸರ ಬಂದೋಬಸ್ತ್‌ನೊಂದಿಗೆ ಮುಡಾ ಅಧಿಕಾರಿಗಳು ಈ ಮಹಾ ಕಾರ್ಯಾಚರಣೆ ನಡೆಸುವ ಮೂಲಕ ಸರ್ಕಾರದ ಕಣ್ಣಿಗೆ ಮಣ್ಣೆರಚುವ ಹಾಗೂ ನಿವೇಶನ ಖರೀದಿದಾರರಿಗೆ ಅನ್ಯಾಯ ಮಾಡುವವರಿಗೆ ಖಡಕ್ ಎಚ್ಚರಿಕೆ ಸಂದೇಶ ನೀಡಿದ್ದಾರೆ. ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗದೆ, ಮುಡಾದಿಂದ ನಕ್ಷೆ ಅನುಮೋದನೆಯನ್ನೂ ಪಡೆಯದೆ ಅನಧಿಕೃತವಾಗಿ ಬಡಾವಣೆ ನಿರ್ಮಿಸಿ, ನಿವೇಶನಗಳನ್ನು ರಚಿಸಲಾಗಿತ್ತು. ಅಲ್ಲದೇ ಸಾತಗಳ್ಳಿ ಗ್ರಾಮದಲ್ಲಿ ಸಾರ್ವಜನಿಕ ರಸ್ತೆ ಜಾಗದಲ್ಲಿ ಅನಧಿಕೃತವಾಗಿ ಶೆಡ್‌ಗಳನ್ನೂ ನಿರ್ಮಿಸಲಾಗಿತ್ತು. ಈ ಸಂಬಂಧ ಸಾರ್ವಜನಿಕರಿಂದ ದೂರುಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಶನಿವಾರ ಬೆಳಗ್ಗೆ 6ರಿಂದ 11 ಗಂಟೆವರೆಗೆ ಅಧಿಕಾರಿಗಳೊಂದಿಗೆ ಕಾರ್ಯಾಚರಣೆ ನಡೆಸಿ, ಅನಧಿಕೃತ ಬಡಾವಣೆಗಳ ನಿರ್ಮಾಣಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿದರಲ್ಲದೆ, ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗಿದ್ದ ರಸ್ತೆಯಲ್ಲಿನ ನಿರ್ಮಾಣಗಳನ್ನೂ ಧ್ವಂಸಗೊಳಿಸಿದರು. ಮುಡಾ ಕಾರ್ಯದರ್ಶಿ ಡಾ.ಎನ್.ಸಿ.ವೆಂಕಟರಾಜು, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಮೋಹನ್, ಸುನಿಲ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮುಡಾ ಕಾರ್ಯದರ್ಶಿ ಡಾ.ಎನ್.ಸಿ. ವೆಂಕಟರಾಜು, ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ (KUDA Act) ಅನ್ವಯ ಭೂಪರಿವರ್ತನೆ ಸೇರಿದಂತೆ ನಿಯಮಬದ್ಧವಾಗಿ ಬಡಾವಣೆ ನಿರ್ಮಾಣ ಮಾಡಬೇಕು. ಮುಡಾಗೆ ಅರ್ಜಿ ಹಾಕಿ, ಅನುಮೋದನೆ ಪಡೆದು ನಿಯಮಾನುಸಾರ ಬಡಾವಣೆಯ ಒಟ್ಟು ವಿಸ್ತೀರ್ಣದ ಶೇ.56ರಷ್ಟು ▶ 8ನೇ ಪುಟಕ್ಕೆ

40ಕ್ಕೂ ಹೆಚ್ಚು ಅನಧಿಕೃತ?

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಈ ರೀತಿಯ 40ಕ್ಕೂ ಹೆಚ್ಚು ಅನಧಿಕೃತ ಬಡಾವಣೆಗಳಿವೆ ಎಂದು ತಿಳಿದುಬಂದಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಮುಡಾ ಕಾರ್ಯದರ್ಶಿ ಡಾ.ಎನ್.ಸಿ.ವೆಂಕಟರಾಜು, ಇಂಜಿನಿಯರ್‌ಗಳು ಕ್ಷೇತ್ರ ಪರಿವೀಕ್ಷಣೆ ಸಂದರ್ಭದಲ್ಲಿ ನಿರ್ಮಾಣ ಹಂತದ ಬಡಾವಣೆಗಳ ಮೇಲೆ ನಿಗಾ ವಹಿಸುತ್ತಾರೆ. ಏನಾದರೂ ವ್ಯತ್ಯಾಸಗಳು ಕಂಡು ಬಂದರೆ ಭೂ ಮಾಲೀಕರು ಅಥವಾ ಬಡಾವಣೆ ನಿರ್ಮಾಣ ಮಾಡುವವರ ಗಮನಕ್ಕೆ ತಂದು ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡುತ್ತಾರೆ. ನಿವೇಶನ ಖರೀದಿದಾರರ ಮಾಹಿತಿ ತಿಳಿದರೆ ಅವರಿಗೂ ತಿಳುವಳಿಕೆ ನೀಡುತ್ತಾರೆ. ಆದರೂ ನಿಯಮಬಾಹಿರವಾಗಿ ನಿರ್ಮಾಣ ಮುಂದುವರೆಸಿದರೆ ಅಂತಹ ಪ್ರಕರಣಗಳ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರುತ್ತಾರೆ. ಹೀಗೆ ಅನಧಿಕೃತವಾಗಿ 42 ಬಡಾವಣೆಗಳು ನಿರ್ಮಾಣವಾಗುತ್ತಿವೆ ಎಂಬ ಮಾಹಿತಿ ಇದೆ. ಈ ಬಗ್ಗೆ ಪರಿಶೀಲನೆ ನಡೆಸಿ ಅನಧಿಕೃತವಾಗಿದ್ದರೆ ಹಂತ ಹಂತವಾಗಿ ನೆಲಸಮಗೊಳಿಸಲಾಗುತ್ತದೆ ಎಂದು ತಿಳಿಸಿದರು.

ರಾಮನಗರದಲ್ಲಿ ಭಾರೀ ಮಳೆ: ಮೂರು ದಿನ ಬೆಂಗಳೂರು–ಮೈಸೂರು ಹೆದ್ದಾರಿ ಬಂದ್



ರಾಮನಗರ, ಆ.27– ರಾಮನಗರ ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ ಧಾರಾಕಾರ ಮಳೆ ಸುರಿದ ಪರಿಣಾಮ ಬೆಂಗಳೂರು ಮತ್ತು ಮೈಸೂರು ಹೆದ್ದಾರಿಯಲ್ಲಿ ಪ್ರವಾಹ ಉಂಟಾಗಿದ್ದು, ಮುಂಜಾಗ್ರತಾ ಕ್ರಮವಾಗಿ ವಾಹನ ಸವಾರರು ಈ ಹೆದ್ದಾರಿಯ ಬದಲು ಬೇರೆ ಮಾರ್ಗದ ಮೂಲಕ ಸಂಚಾರ ಮಾಡುವಂತೆ ಜಿಲ್ಲಾ ಪೊಲೀಸರು ಮನವಿ ಮಾಡಿದ್ದಾರೆ. ಭಾರೀ ಮಳೆಯಿಂದಾಗಿ ಜಿಲ್ಲೆಯ ಹಲವು ಕೆರೆ–ಕಟ್ಟೆಗಳು ತುಂಬಿದ ಪರಿಣಾಮ ಕೋಡಿ ಹರಿದು ಬೆಂಗಳೂರು– ಮೈಸೂರು ಹೆದ್ದಾರಿ ವಾಹನಗಳು ಸಂಚರಿಸಲು ಸಾಧ್ಯವಾಗದಷ್ಟು ಜಲಾವೃತಗೊಂಡಿದೆ. ▶ 7ನೇ ಪುಟಕ್ಕೆ

ಏಷ್ಯಾಕಪ್ ಟಿ20 ಪಂದ್ಯಾವಳಿ

ಇಂದು ಇಂಡೋ–ಪಾಕ್ ಹೈವೋಲ್ಟೇಜ್ ಪಂದ್ಯ

ದುಬೈ, ಆ.27– ಸಾಂಪ್ರದಾಯಿಕ ಎದುರಾಳಿಗಳಾದ ಭಾರತ–ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯ ನಾಳೆ(ಆ.28) ಸಂಜೆ 7.30ಕ್ಕೆ ದುಬೈ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಇಂಡೋ–ಪಾಕ್ ಪಂದ್ಯವೆಂದರೆ ಅಲ್ಲೊಂದು ರೋಚಕತೆ, ಕಾತರ, ಕಳವಳ ಎಲ್ಲವೂ ಇರುತ್ತದೆ. ಹೀಗಾಗಿ ಏಷ್ಯಾಕಪ್ ಟಿ20 ಪಂದ್ಯಾವಳಿಯಲ್ಲಿ ರೋಹಿತ್ ಶರ್ಮಾ ಹಾಗೂ ಬಾಬರ್ ಅಜಂ ನೇತೃತ್ವದ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗುತ್ತಿವೆ. ▶ 7ನೇ ಪುಟಕ್ಕೆ



ಪಂದ್ಯದ ವಿವರ
ಆ.28, ಭಾನುವಾರ ಸಂಜೆ 7.30ಕ್ಕೆ
ಸ್ಥಳ: ದುಬೈ ಇಂಟರ್‌ನ್ಯಾಷನಲ್ ಸ್ಟೇಡಿಯಂ, ದುಬೈ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

ಚಿತ್ರದುರ್ಗ ಮುರುಘಾ ಶರಣರು ಸೇರಿದಂತೆ ಐವರ ವಿರುದ್ಧ ಮೈಸೂರು ನಜರ್‌ಬಾದ್ ಠಾಣೆಯಲ್ಲಿ

ಪೋಕ್ಸೋ ಪ್ರಕರಣ ದಾಖಲು

● ಮುರುಘಾ ಮಠದ ನಿರ್ವಹಣೆಯ ಹಾಸ್ಟೆಲ್ ವಿದ್ಯಾರ್ಥಿಗಳಿಂದಲೇ ಗಂಭೀರ ಆರೋಪ
● ಒಡನಾಡಿ ಮೂಲಕ ಮಕ್ಕಳ ರಕ್ಷಣಾ ಸಮಿತಿಯಲ್ಲಿ ಮಕ್ಕಳಿಗೆ ಕೌನ್ಸಿಲಿಂಗ್ ನಂತರ ದೂರು ದಾಖಲು

ಮೈಸೂರು, ಆ.27–ಚಿತ್ರದುರ್ಗ ಶ್ರೀ ಮುರುಘಾ ಮಠದ ಡಾ. ಶಿವಮೂರ್ತಿ ಮುರುಘಾ ಶರಣರು ಸೇರಿದಂತೆ ಮಠದ ಐವರ ವಿರುದ್ಧ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿ ಅಪ್ರಾಪ್ತ ಬಾಲಕಿಯರ ಮೇಲಿನ ದೌರ್ಜನ್ಯ ನಡೆಸಿದ ಆರೋಪದ ಮೇಲೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಮಠದಿಂದ ನಿರ್ವಹಣೆಯಾಗುವ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಇಬ್ಬರು ವಿದ್ಯಾರ್ಥಿನಿಯರು ಮಠಕ್ಕೆ ಸೇರಿದ ವಸತಿ ನಿಲಯದಲ್ಲಿ ವಾಸ್ತವ್ಯವಿದ್ದರು. ಇವರಲ್ಲಿ ▶ 8ನೇ ಪುಟಕ್ಕೆ



ಸಂಧಾನಕ್ಕೂ ಬದ್ಧ, ಕಾನೂನು ಸಮರಕ್ಕೂ ಸಿದ್ಧ

ಚಿತ್ರದುರ್ಗ, ಆ.27– ತಮ್ಮ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗುತ್ತಿದ್ದಂತೆಯೇ ಇಂದು ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಮಠದಲ್ಲಿ ಸಲಹಾ ಸಮಿತಿ ಸಭೆ ನಡೆಸಿದರು. ಈ ವೇಳೆ ಅವರು ಮಾತನಾಡಿದ ಆಡಿಯೋ ವೈರಲ್ ಆಗಿದ್ದು, ಪ್ರಕರಣದ ಬಗ್ಗೆ ಸಂಧಾನಕ್ಕೆ ಬಂದರೆ ಅದಕ್ಕೂ ಸಿದ್ಧ. ಇಲ್ಲದಿದ್ದರೆ ಕಾನೂನು ಸಮರಕ್ಕೂ ಸಿದ್ಧ. ಸಂಧಾನ ಬೇಡವೆಂದಾಗ ಕಾನೂನು ಸಮರ ಇದ್ದೇ ಇರುತ್ತದೆ ಎಂದಿದ್ದಾರೆ. ಇಂದು ಮುಂಜಾನೆ ಸುದ್ದಿ ಕೇಳಿ ನನಗೆ ಬಹಳ ನೋವಾಗಿದೆ. ನಮಗೆ ಆಗದೇ ಇರುವವರು, ಮಠದಲ್ಲಿದ್ದವರೇ ಷಡ್ಯಂತ್ರ ಮಾಡಿದ್ದಾರೆ. ಕೆಲ ಶ್ರೀಗಳ ಜೀವನದಲ್ಲಿ ಇಂತಹ ಘಟನೆ ▶ 8ನೇ ಪುಟಕ್ಕೆ

ಮುರುಘಾ ಮಠದ ಆಡಳಿತಾಧಿಕಾರಿ, ಅವರ ಪತ್ನಿ ವಿರುದ್ಧ ಹಾಸ್ಟೆಲ್ ವಾರ್ಡನ್ ಕೇಸ್ ದಾಖಲು

● ಮಠದ ವಿರುದ್ಧ ಷಡ್ಯಂತ್ರದ ಆರೋಪ ● ವಿದ್ಯಾರ್ಥಿಗಳ ಆರೋಪದ ಹಿಂದೆ ಆಡಳಿತಾಧಿಕಾರಿ ಬಸವರಾಜನ್ ದಂಪತಿ ಕೈವಾಡದ ಶಂಕೆ

ಚಿತ್ರದುರ್ಗ, ಆ.27–ಚಿತ್ರದುರ್ಗ ಮುರುಘಾ ಮಠದ ಶ್ರೀಗಳ ವಿರುದ್ಧ ಪೋಕ್ಸೋ ಕಾಯ್ದೆಯಡಿ ಮೈಸೂರಿನಲ್ಲಿ ಪ್ರಕರಣ ದಾಖಲಾಗುವ ಕೆಲ ಗಂಟೆಗಳ ಮುನ್ನ ಚಿತ್ರದುರ್ಗ ಗ್ರಾಮಾಂತರ ಠಾಣೆಯಲ್ಲಿ ಮಠದ ಆಡಳಿತಾಧಿಕಾರಿಯೂ ಆದ ಮಾಜಿ ಶಾಸಕ ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ವಿರುದ್ಧ ಲೈಂಗಿಕ ಕಿರುಕುಳ, ಅಪ್ರಾಪ್ತ ಬಾಲಕಿಯರ ಅಪಹರಣ ಹಾಗೂ ▶ 8ನೇ ಪುಟಕ್ಕೆ


ಬಸವರಾಜನ್


ಸೌಭಾಗ್ಯ



❝ ಚಿತ್ರದುರ್ಗ ಮುರುಘಾ ಶ್ರೀಗಳಿಗೆ ಮಠದಲ್ಲಿದ್ದವರೇ ತೊಂದರೆ ಕೊಟ್ಟಂತೆ ಕಾಣುತ್ತಿದೆ. ಶ್ರೀಗಳ ವಿರುದ್ಧ ದೂರು ದಾಖಲಾಗಿದೆ. ತನಿಖೆಯೂ ನಡೆಯುತ್ತಿದೆ. ಮುರುಘಾ ಮಠದಲ್ಲಿ ಒಬ್ಬ ಉದ್ಯೋಗಿ ಸರಿ ಇರಲಿಲ್ಲ. ಅವರೇ ಏನೋ ಮಾಡುತ್ತಿದ್ದಾರೆ ಎಂಬ ಮಾಹಿತಿಯೂ ಇದೆ.
– ಆರಗ ಜ್ಞಾನೇಂದ್ರ, ಗೃಹ ಸಚಿವ



❝ ಮಠದ ವಿರೋಧಿ ಶಕ್ತಿಗಳು ಅತಿಯಾದ ಆಸೆಯಿಂದ ಮಕ್ಕಳನ್ನು ಬಳಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಮಕ್ಕಳ ಬುದ್ಧಿ ಕೆಡಿಸಿ ಶ್ರೀಗಳ ವಿರುದ್ಧ ದೂರು ಕೊಡಿಸಿದ್ದಾರೆ. ಇದೊಂದು ಸುಳ್ಳು ದೂರಾಗಿದ್ದು, ಮಠಕ್ಕೆ ಅಗೌರವ ತರುವ ಉದ್ದೇಶದಿಂದ ಬಾಲಕಿಯರಿಗೆ ಪ್ರಚೋದನೆ ನೀಡಿ ದೂರು ಕೊಡಿಸಲಾಗಿದೆ. ಇದರಲ್ಲಿ ಪ್ರಭಾವಿ ವ್ಯಕ್ತಿಗಳ ಕೈವಾಡವಿದೆ. ಮಕ್ಕಳು ಚಿತ್ರದುರ್ಗದಿಂದ ಮೈಸೂರಿಗೆ ಹೋಗಿ ದೂರು ನೀಡಿದ್ದಾರೆಂದರೆ, ಇದರ ಹಿಂದೆ ಪ್ರಭಾವಿಗಳ ಕೈವಾಡವಿದೆ ಎಂಬುದನ್ನು ಗ್ರಹಿಸಬಹುದಾಗಿದೆ. ನಾವು ಅಂತಹ ಶಕ್ತಿಗಳ ವಿರುದ್ಧ ಕಾನೂನು ಹೋರಾಟ ನಡೆಸುತ್ತೇವೆ. – ವಿಶ್ವನಾಥಯ್ಯ, ಮಠದ ಪರ ವಕೀಲ





ವಿಶೇಷ ಅಭಿಯಾನದಲ್ಲಿ 20,000 ಮತದಾರರ

ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ

ಶಾಲಾ ಮಕ್ಕಳ ಮೂಲಕ ಪೋಷಕರು, ಮತದಾರರ ಮಾಹಿತಿ ಸಂಗ್ರಹಿಸಲು ಮುಂದಾದ ಪಾಲಿಕೆ

ಮೈಸೂರು, ಆ.27(ಆರ್‌ಕೆ)–ಮತದಾರರ ಗುರುತಿನ ಚೀಟಿ(ಎಪಿಕ್)ಗೆ ಆಧಾರ್ ಸಂಖ್ಯೆ ಜೋಡಣೆಯ ವಿಶೇಷ ಅಭಿಯಾನ ಮೈಸೂರಿನಲ್ಲಿ ಶನಿವಾರ ನಡೆಯಿತು. ರಾಜ್ಯ ಚುನಾವಣಾ ಆಯೋಗದ ಸೂಚನೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ಮೈಸೂರು ಮಹಾನಗರ ಪಾಲಿಕೆ ಸಹಯೋಗದಲ್ಲಿ ಕೃಷ್ಣರಾಜ, ಚಾಮರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಸಲಾದ ಈ ವಿಶೇಷ ಅಭಿಯಾನದಲ್ಲಿ 20 ಸಾವಿರ ಮತದಾರರ ಗುರುತಿನ ಚೀಟಿಗೆ ಅವರ ಆಧಾರ್ ಸಂಖ್ಯೆ ಜೋಡಣೆ ಮಾಡಲಾಯಿತು.

ಮತಗಟ್ಟೆ ಮಟ್ಟದ ಅಧಿಕಾರಿ (BLO)ಗಳು ಮತ್ತು ರಾಜಕೀಯ ಪಕ್ಷಗಳ ಮತಗಟ್ಟೆ ಏಜೆಂಟರು (BLA) ಇಂದು ಬೆಳಗ್ಗೆ 7 ರಿಂದ 10ರವರೆಗೆ ಮನೆ ಮನೆಗೆ ತೆರಳಿ ಅಭಿಯಾನದ ಬಗ್ಗೆ ತಿಳಿಸಿದರು. ಅದೇ ವೇಳೆ ಮತದಾರರ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್ ಪಡೆದು ಜೋಡಣೆ ಕಾರ್ಯ ನಡೆಸಿದರು. ಬೆಳಗ್ಗೆ 10 ಗಂಟೆಯಿಂದ ಮತಗಟ್ಟೆಗಳಲ್ಲಿ ಈ ಪ್ರಕ್ರಿಯೆ ನಡೆಸಲಾಯಿತು.



ಮೈಸೂರಿನ ಮೇದರ ಬ್ಲಾಕ್‌ನ ಸಮುದಾಯ ಭವನ (18ನೇ ವಾರ್ಡ್)ದಲ್ಲಿ ಪಾಲಿಕೆಯ ಉಪ ಆಯುಕ್ತೆ ಎಂ.ಕೆ.ಸವಿತಾ, ಸ್ಥಳೀಯ ಕಾರ್ಪೊರೇಟರ್ ರವೀಂದ್ರ ನೇತೃತ್ವದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಜಿ.ಚಂದ್ರಶೇಖರ್, ಸಹಾಯಕಿ ಅಶ್ವಿನಿ ಸಾರ್ವಜನಿಕರ ಮತದಾರರ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡಿಸಿದರು. ಅದೇ ರೀತಿ 6ನೇ ವಾರ್ಡ್ ಗೋಕುಲಂ 3ನೇ ಹಂತದ ಸಾಂಸ್ಕೃತಿಕ ಭವನದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ವಿ.ಪರಮೇಶ್, 19ನೇ ವಾರ್ಡ್ ವಿವಿ ಮೊಹಲ್ಲಾದ ನಿರ್ಮಲಾ ಕಾನ್ವೆಂಟ್‌ನಲ್ಲಿ ವೈ.ಡಿ.ಬೆಟ್ಟಸ್ವಾಮಯ್ಯ, 21ನೇ ವಾರ್ಡ್ ಕುಕ್ಕರಹಳ್ಳಿ ▶ 7ನೇ ಪುಟಕ್ಕೆ

ಆಧಾರ್ ಇಲ್ಲದಿದ್ದರೆ?



ಇನ್ನೂ ಆಧಾರ್ ಕಾರ್ಡ್ ಪಡೆಯದವರು ಸಾಕಷ್ಟು ಜನರಿದ್ದಾರೆ. ಅಂತಹವರು ನರೇಗಾ ಕಾರ್ಡ್, ಭಾವಚಿತ್ರ ಇರುವ ಪ್ರಧಾನಮಂತ್ರಿ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್, ವಾಹನ ಪರವಾನಗಿ, ಪಾನ್ ಕಾರ್ಡ್, ಪಾಸ್‌ಪೋರ್ಟ್, ಪಿಂಚಣಿ ದಾಖಲಾತಿ, ಸೇವಾ ಗುರುತಿನ ಚೀಟಿ, ಶಾಸಕ ಹಾಗೂ ಸಂಸದರಿಂದ ಪಡೆದ ಅಧಿಕೃತ ಗುರುತಿನ ಚೀಟಿ ಹಾಗೂ ಯುಡಿ ಐಡಿ ಕಾರ್ಡ್ ಇನ್ನಿತರ ದಾಖಲೆಗಳನ್ನು ನೀಡಿ ಎಪಿಕ್‌ನೊಂದಿಗೆ ಲಿಂಕ್ ಮಾಡಿಸಬಹುದು. ಮತದಾರರು ಬೂತ್ ಮಟ್ಟದ ಅಧಿಕಾರಿಗಳಿಗೆ ಆಧಾರ್ ಸಂಖ್ಯೆ ನೀಡಿ ಚುನಾವಣಾ ಗುರುತಿನ ಚೀಟಿಗೆ ಲಿಂಕ್ ಮಾಡಬಹುದು. ಆನ್‌ಲೈನ್ ಮೂಲಕವೂ ಇದಕ್ಕೆ ಅವಕಾಶವಿದೆ. ಮೊಬೈಲ್‌ನಲ್ಲಿ ವೋಟರ್ಸ್ ಹೆಲ್ಪ್‌ಲೈನ್ ಆ್ಯಪ್ ಮೂಲಕ ಮತದಾರರ ಚೀಟಿಗೆ ಆಧಾರ್ ಲಿಂಕ್ ಮಾಡಬಹುದು. ಆಪ್‌ನಲ್ಲಿ 'ಫಾರ್ಮ್–6ಬಿ' ಸೆಲೆಕ್ಟ್ ಮಾಡಿ ಮೊಬೈಲ್ ನಂಬರ್, ನಂತರ ಆಧಾರ್ ಸಂಖ್ಯೆ ನಮೂದಿಸಿ ಜೋಡಣೆ ಮಾಡಬಹುದು.



ಖಾಸಗಿ ಬಡಾವಣೆಗಳಲ್ಲಿ ಅಭಿವೃದ್ಧಿಗೆ ಶಾಸಕ ರಾಮದಾಸ್ ಚಾಲನೆ



ಮೈಸೂರು, ಆ.27(ಎಸ್‌ಪಿಎನ್)– ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಏಳು ಖಾಸಗಿ ಬಡಾವಣೆಗಳ ಅಭಿವೃದ್ಧಿಗೆ ಶಾಸಕ ಎಸ್.ಎ.ರಾಮದಾಸ್ ಶುಕ್ರವಾರ ಚಾಲನೆ ನೀಡಿದರು.

ಮೈಸೂರು ಶ್ರೀರಾಂಪುರದ ವಾರ್ಡ್ 65ರಲ್ಲಿ ಸಾರ್ವಜನಿಕರ ಕುಂದು–ಕೊರತೆ ಆಲಿಸುವ ಜನಸಂಪರ್ಕ ಸಭೆ ಹಾಗೂ ಏಳು ಖಾಸಗಿ ಬಡಾವಣೆಗಳ ಅಭಿವೃದ್ಧಿಗೆ ಮುಡಾದಿಂದ 11 ಕೋಟಿ ವೆಚ್ಚದಲ್ಲಿ ಹಮ್ಮಿಕೊಂಡಿದ್ದ ದೇವಯ್ಯನಹುಂಡಿ ಮುಖ್ಯ ರಸ್ತೆ ಡಾಂಬರೀಕರಣ, ಮಧುವನ ವಾಟರ್ ಟ್ಯಾಂಕ್ ರಸ್ತೆ ಅಭಿವೃದ್ಧಿ. ಭವ್ಯ ಭಾರತ, ಮುನಿನಾರಾಯಣಯಪ್ಪ ಮತ್ತು ಪುಷ್ಪಾನಂದ ಸಾಗರ ಹೊಸ ಬಡಾವಣೆಗಳ ರಸ್ತೆ ಅಭಿವೃದ್ಧಿ, ಕಂದಾಯ ನಗರ ಮತ್ತು ಎಂಸಿಡಿ ಬಡಾವಣೆಗಳ ರಸ್ತೆ ಅಭಿವೃದ್ಧಿ. ಕಂದಾಯ ನಗರದ ಮೊದಲನೇ ಹಂತದ ಉದ್ಯಾನವನ ಸಮಗ್ರ ಅಭಿವೃದ್ಧಿ, ಲಿಂಗಾಂಬುದಿ ವೃತ್ತದ ಅಭಿವೃದ್ಧಿ, ಪ್ರೀತಿ ಬಡಾವಣೆಯಲ್ಲಿ ರಸ್ತೆ ಡಾಂಬರೀಕರಣ ಹಾಗೂ ಮಧುವನ ಬಡಾವಣೆಯಲ್ಲಿ ಮಳೆನೀರು ಚರಂಡಿ ಕಾಮಗಾರಿಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್, ಕೇಂದ್ರ ಮತ್ತು ರಾಜ್ಯ ಸರ್ಕಾರ, ಮುಡಾ ಹಾಗೂ ಮೈಸೂರು ನಗರ ಪಾಲಿಕೆಯ ಅನುದಾನದಿಂದ ಕೆ.ಆರ್.ಕ್ಷೇತ್ರದ ಎಲ್ಲಾ ರಸ್ತೆಗಳ ಡಾಂಬರೀಕರಣವನ್ನು ನವೆಂಬರ್ ಒಳಗೆ ಬಹುತೇಕ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ 120 ವಿವಿಧ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದರು.

ನಮ್ಮ ಕ್ಷೇತ್ರದ ವ್ಯಾಪ್ತಿಯ ಸ್ಮಶಾನಗಳ ಅಭಿವೃದ್ಧಿ ಹಾಗೂ ಪ್ಲಾಸ್ಟಿಕ್‌ನಿಂದಾಗುವ ಅನಾನುಕೂಲವನ್ನು ಅರಿತು, ಪ್ಲಾಸ್ಟಿಕ್ ನಿಷೇಧಿಸಲು ಸರ್ಕಾರ ಮುಂದಾಗಿದೆ. ಇದಕ್ಕೆ ಸಾರ್ವಜನಿಕರು ಪೂರ್ಣ ಪ್ರಮಾಣದಲ್ಲಿ ಸಹಕಾರ ನೀಡಬೇಕು ಎಂದರು.

ಸಾರ್ವಜನಿಕರ ಕುಂದು–ಕೊರತೆಯ ಸಭೆಯಲ್ಲಿ ವಿವಿಧ ಯೋಜನೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕೊಡಿಸಿದರು. ಇವರಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಬರುವ ಫಲಾನುಭವಿಗಳು, 2–3 ತಿಂಗಳಿಂದ ಪಿಂಚಣಿ ಹಣ ಬಂದಿಲ್ಲವೆಂದು ಶಾಸಕರ ಗಮನ ಸೆಳೆದರು. ಇದಕ್ಕೆ ಸ್ಪಂದಿಸಿದ ಶಾಸಕರು, ಈ ಸಮಸ್ಯೆ ಕೂಡಲೇ ಬಗೆಹರಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ನಗರ ಪಾಲಿಕೆ ಸದಸ್ಯೆ ಗೀತಾ ಯೋಗಾನಂದ, ವಾರ್ಡ್ ಅಧ್ಯಕ್ಷ ಸತೀಶ್, ವಾರ್ಡ್ ಉಸ್ತುವಾರಿ ಗಿರೀಶ್, ಬೂತ್ ಅಧ್ಯಕ್ಷರಾದ ಸಿದ್ದರಾಜು, ಜಯಂತಿ, ಕೃಷ್ಣ, ಸಾಗರ್, ಜಗದೀಶ್, ಆನಂದ್, ಶೋಭಾ, ಮಮತಾ, ಶರತ್, ಮನು, ಕ್ಷೇತ್ರ ಅಧ್ಯಕ್ಷರಾದ ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂ ಶ್ರೀನಿವಾಸ್, ನಾಗೇಂದ್ರ ಕುಮಾರ್, ಪ್ರಸಾದ್ ಬಾಬು, ಮೈ.ಪು. ರಾಜೇಶ್, ಸಂತೋಷ್, ಜಿ.ಆರ್. ನಾಗರಾಜ್, ಸ್ಥಳೀಯ ಮುಖಂಡರು, ನಗರ ಪಾಲಿಕೆ, ಮುಡಾ, ಲೋಕೋಪಯೋಗಿ, ಪೊಲೀಸ್ ಇಲಾಖೆ, ಒಳಚರಂಡಿ, ಕುಡಿಯುವ ನೀರು, ತಾಲೂಕು ಕಚೇರಿ, ಆಹಾರ ಮತ್ತು ನಾಗರಿಕ ಇಲಾಖೆ, ಕಾರ್ಮಿಕ, ಅರಣ್ಯ, ವಿದ್ಯುತ್ ನಿಗಮ, ಕೆಎಸ್‌ಆರ್‌ಟಿಸಿ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ವಿವಾಹದ ಹಣ ಕಾರ್ಮಿಕರ ಕೈಗೇ ದಕ್ಕಬೇಕು: ಕಟ್ಟಡ ಕಾರ್ಮಿಕರ ಸಂಘ ಆಗ್ರಹ

ಮೈಸೂರು, ಆ.27(ಆರ್‌ಕೆಬಿ)– ಕಾರ್ಮಿಕರ ಮಕ್ಕಳು ಹೆಣ್ಣಾಗಲೀ, ಗಂಡಾಗಲೀ ಅವರ ವಿವಾಹಕ್ಕೆ ಕಾರ್ಮಿಕ ಇಲಾಖೆ ವತಿಯಿಂದ ನೀಡುವ ಹಣ ಕಾರ್ಮಿಕ ಕಾರ್ಡುದಾರನ ಕೈಗೇ ದಕ್ಕುವಂತೆ ಮಾಡಬೇಕು ಎಂದು ರಾಜ್ಯ ಭಾರತಮಾತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಜಿ.ಸಿದ್ದರಾಜು ಸರ್ಕಾರವನ್ನು ಆಗ್ರಹಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಗ ಇಲಾಖೆ ನೀಡುವ ಈ ರೀತಿಯ ಸಹಾಯಧನ ವಿವಾಹವಾಗಿರುವ ಕಾರ್ಮಿಕರ ಸೊಸೆ ಅಥವಾ ಮಗಳಿಗೆ ಸೇರುತ್ತಿದೆ. ಇದರಿಂದಾಗಿ ಮನೆಗಳಲ್ಲಿ ವಿರಸವುಂಟಾಗುತ್ತಿದೆ. ಇದು ಸರಿಯಲ್ಲ. ಹೀಗಾಗಿ ಕಷ್ಟಪಟ್ಟು ಕುಟುಂಬ ನಿರ್ವಹಿಸುವ ಕಾರ್ಮಿಕನಿಗೇ ಹಣ ಸೇರುವಂತೆ ಮಾಡಬೇಕು ಎಂದರು. ಆನ್‌ಲೈನ್ ಮೂಲಕ ಕಾರ್ಡ್ ನೀಡುವುದು ಆರಂಭವಾದ ಬಳಿಕ ಕಾರ್ಮಿಕರಲ್ಲದ ಲಕ್ಷಾಂತರ ಜನರು ಕಾರ್ಡ್ ಪಡೆದಿದ್ದಾರೆ. ಜೊತೆಗೆ ಮಧ್ಯವರ್ತಿಗಳು ಇದಕ್ಕೆ ಕಾರಣರಾಗಿದ್ದು, ಒಂದೊಂದು ಕಾರ್ಡ್ ಮಾಡಿಸಿಕೊಡಲು ಸಾವಿರ ರೂ. ಪಡೆಯುತ್ತಿದ್ದಾರೆ. ಈ ರೀತಿ ಸರ್ಕಾರಕ್ಕೆ ವಂಚಿಸಲಾಗುತ್ತಿದೆ. ಹೀಗಾಗಿ ಕಾರ್ಮಿಕ ಇಲಾಖೆ ಅಧಿಕಾರಿಗಳು ಮಹಜರು ನಡೆಸುವ ಮೂಲಕ ಕಾರ್ಡ್ ನೀಡಬೇಕು ಎಂದು ಒತ್ತಾಯಿಸಿದರು. ನಮ್ಮ ಬೇಡಿಕೆಗೆ ಅಧಿಕಾರಿಗಳು ಸ್ಪಂದಿಸದಿದ್ದರೆ ಪ್ರತಿಭಟನೆ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ನೂರ್ ಅಹಮದ್ ಮರ್ಚೆಂಟ್, ಪುಟ್ಟಸ್ವಾಮಿ, ಹಂಚ್ಯಾ ಶ್ರೀನಿವಾಸ್ ಉಪಸ್ಥಿತರಿದ್ದರು.



ಬೆಂಗಳೂರಿನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ 2022–23ನೇ ಸಾಲಿನ ಕರ್ನಾಟಕ ಸಂಗೀತ ವಿಭಾಗದಲ್ಲಿ ಕಲಾಶ್ರೀ ಪ್ರಶಸ್ತಿ ಪಡೆದ ಮೈಸೂರಿನ ವಿದ್ವಾನ್ ಸಿ.ಎ. ನಾಗರಾಜ ಅವರನ್ನು ವಿಪ್ರ ಮುಖಂಡರಾದ ನಂ ಶ್ರೀಕಂಠ ಕುಮಾರ್, ಶಂಕರನಾರಾಯಣ, ಜಿ.ಆರ್.ಮೋಹನ್, ಜಯಸಿಂಹ, ಎಸ್.ದಿನೇಶ್, ರಾಕೇಶ್ ಭಟ್ ಅಭಿನಂದಿಸಿದರು.

ಯುವಕರಿಗೆ ಸ್ವಾಭಿಮಾನ, ದೇಶಾಭಿಮಾನ ಇರಬೇಕು

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಕಿವಿಮಾತು



ಮೈಸೂರು, ಆ.27–ಸ್ವಾಭಿಮಾನ ಮತ್ತು ದೇಶಾಭಿಮಾನ ಇರುವವರು ಸೈನ್ಯಕ್ಕೆ ಸೇರಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ಬೆಳವಾಡಿಯಲ್ಲಿರುವ ಸೈನಿಕ್ ಅಕಾಡೆಮಿ ವತಿಯಿಂದ ನಡೆದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಸೈನ್ಯದಲ್ಲಿ ಕೊಡುವ ತರಬೇತಿ ಮೊದಲು ಮನುಷ್ಯರನ್ನಾಗಿ ಮಾಡುತ್ತದೆ. ಸೈನ್ಯದವರು ಯಾವುದಕ್ಕೂ ರಾಜೀ ಆಗುವುದಿಲ್ಲ. ಸೈನ್ಯದಲ್ಲಿ ಆರ್ಡರ್‌ಗಳನ್ನು ಪಾಲಿಸಲೇಬೇಕು. ತರಬೇತಿ ತುಂಬಾ ಕಠಿಣವಾಗಿರುತ್ತದೆ. ಯುವಕರು ಈ ದೇಶದ ಭವಿಷ್ಯ. ಈ ದೇಶಕ್ಕೆ ಯುವಶಕ್ತಿ ಬೇಕಾಗಿದೆ. ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ಸಮಯಕ್ಕೆ ಬೆಲೆ ಕೊಡಬೇಕು ಎಂದು ಕಿವಿಮಾತು ಹೇಳಿದರು.

ಜೀವನದಲ್ಲಿ ಪ್ರತಿಯೊಬ್ಬರಿಗೂ ಅವಕಾಶಗಳು ಬರುತ್ತವೆ. ಆ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಯಶಸ್ಸನ್ನು ಕಾಣಬೇಕು. ಈ ಭೂಮಿ ಮೇಲೆ ಹುಟ್ಟಿದ ಮೇಲೆ ಈ ದೇಶಕ್ಕೆ ಏನನ್ನಾದರೂ ಕೊಡುಗೆ ನೀಡಿ ನಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟುಹೋಗಬೇಕು. ಯುವಕರು ಜೀವನದಲ್ಲಿ ಮೊದಲು ತ್ಯಾಗ ಮಾಡುವುದನ್ನು ಕಲಿಯಿರಿ. ತಂದೆ, ತಾಯಿ, ಗುರು–ಹಿರಿಯರನ್ನು ಗೌರವದಿಂದ ಕಾಣಿರಿ. ಇಂದು ಪ್ರಪಂಚವನ್ನು ಅಂಗೈಯಲ್ಲಿ ನೋಡಬಹುದು. ಸ್ಪರ್ಧಾತ್ಮಕ ಯುಗದಲ್ಲಿ ಗುರಿ ಇಟ್ಟುಕೊಂಡು ಸಾಧನೆ ಮಾಡಿ ಈ ದೇಶಕ್ಕೆ ಏನಾದರೂ ಕೊಡುಗೆಗಳನ್ನು ನೀಡಿ. ಶ್ರೀಧರ್‌ರವರು ಅಕಾಡೆಮಿ ಸ್ಥಾಪಿಸಿ ಮಾಡುತ್ತಿರುವ ಉದ್ದೇಶ ಒಳ್ಳೆಯದಾಗಿದೆ. ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು. ಸಮಾರಂಭದಲ್ಲಿ ಸೈನಿಕ್ ಅಕಾಡೆಮಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀಧರ್, ಅನಿತಾಶ್ರೀಧರ್, ವೈ.ಎನ್.ಗಂಗಾ, ಆರ್.ಶ್ವೇತಾ, ಎಸ್.ಎಸ್.ರವಿ, ವಿನುತ ಆರ್., ಸುನೀತ, ವಿಜಯಕುಮಾರ್, ದಿವಾಕರ ಉಪಸ್ಥಿತರಿದ್ದರು.

ಸಹಕಾರಿ ಕ್ಷೇತ್ರದಿಂದ ಮಾತ್ರ ಎಲ್ಲಾ ವರ್ಗದ ಆರ್ಥಿಕ ಸಬಲೀಕರಣ ಸಾಧ್ಯ

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ಅಭಿಮತ



ಮೈಸೂರು, ಆ. 27(ಆರ್‌ಕೆ)– ಬಡವರು, ದೀನ ದಲಿತರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಉದ್ಯಮಿಗಳು ಸೇರಿ ಸಮಾಜದ ಎಲ್ಲಾ ವರ್ಗದ ಆರ್ಥಿಕ ಸಬಲೀಕರಣ ಸಹಕಾರಿ ಕ್ಷೇತ್ರದಿಂದ ಮಾತ್ರ ಸಾಧ್ಯ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಮೈಸೂರು ವಿಭಾಗದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಬ್ಯಾಂಕಿನ ಹಿರಿಯ ಅಧಿಕಾರಿಗಳಿಗೆ ಇಂದು ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ದೇಶದಲ್ಲಿ 1584 ಹಾಗೂ ರಾಜ್ಯದಲ್ಲಿ 262 ಪಟ್ಟಣ ಸಹಕಾರ ಬ್ಯಾಂಕುಗಳಿವೆ. 60,000 ಕೋಟಿ ರೂ. ಠೇವಣಿ ಹಣ ಇದ್ದು, 45,000 ಕೋಟಿ ರೂ. ಸಾಲ ವಿತರಿಸಲಾಗಿದೆ. 26 ಲಕ್ಷ ಸದಸ್ಯರಿರುವ ಅತೀ ದೊಡ್ಡ ಸಹಕಾರ ಬ್ಯಾಂಕ್ ಆಗಿದ್ದು ಈ ಕ್ಷೇತ್ರದಲ್ಲಿ ತರಕಾರಿ ಮಾರುವವರು, ಕೂಲಿ ಕಾರ್ಮಿಕರು, ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುವವರೂ ಸೇರಿದಂತೆ ಎಲ್ಲಾ ವರ್ಗದ ಜನರಿಗೆ ಸಾಲ ನೀಡಿ ಅವರ ಆರ್ಥಿಕ ಸ್ವಾವಲಂಬನೆಗೆ ಕಾರಣವಾಗಿದೆ ಎಂದು ತಿಳಿಸಿದರು.

ಸರ್ಕಾರದ ಯೋಜನೆಗಳಲ್ಲಿ ಅತೀ ಕಡಿಮೆ ಮಂದಿಗೆ ಸಾಲ ಸೌಲಭ್ಯ ಸಿಗುತ್ತದೆ. ಸಹಕಾರ ಕ್ಷೇತ್ರದಲ್ಲಿ ಮಾತ್ರ ಹೆಚ್ಚು ಮಂದಿಗೆ ಈ ಅನುಕೂಲವಾಗುತ್ತದೆ. ಇಷ್ಟೊಂದು ಸೌಲಭ್ಯ ನೀಡುತ್ತಿರುವ ಸಹಕಾರ ಬ್ಯಾಂಕುಗಳ ಕಾರ್ಯಕ್ಷಮತೆ ಬಗ್ಗೆ ಹೆಚ್ಚು ಪ್ರಚಾರ ಮಾಡಿ ಹೆಚ್ಚು ಮಂದಿಯನ್ನು ಸದಸ್ಯರನ್ನಾಗಿ ಮಾಡಬೇಕು ಎಂದ ಜಿಟಿಡಿ, ನಾನು ಸಣ್ಣ ಸಹಕಾರಿಯಾಗಿದ್ದವನು. ನಿಷ್ಠೆ, ಪ್ರಾಮಾಣಿಕತೆ, ದುಡಿಮೆಯಿಂದ ಸಹಕಾರ ಮಹಾಮಂಡಳದ ಅಧ್ಯಕ್ಷನಾದೆ. ಶಾಸಕ, ಸಚಿವ ಸೇರಿದಂತೆ ವಿವಿಧ ಸ್ಥಾನಮಾನ ದಕ್ಕಿದ್ದು ಇದೇ ಸಹಕಾರ ಕ್ಷೇತ್ರದಲ್ಲಿನ ಸೇವೆಯಿಂದ ಸಾಧ್ಯವಾಗಿದೆ ಎಂದರು.

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹಾಗೂ ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ. ರಾಜೀವ್ ಅವರು ಮಾತನಾಡಿ, ಕಾರ್ಪೊರೇಟ್ ವ್ಯವಸ್ಥೆಯಂತೆ ಸಹಕಾರ ಕ್ಷೇತ್ರ ಬೆಳೆದಲ್ಲಿ ದೇಶದ ಅಭಿವೃದ್ಧಿ ಸಾಧ್ಯ. ವಹಿವಾಟಿನ ತಳಹದಿ ಗಟ್ಟಿಗೊಳಿಸಿಕೊಂಡು ಸಮಾಜದ ಒಟ್ಟಾರೆ ಬೆಳವಣಿಗೆಗೆ ಶ್ರಮಿಸಬೇಕಾಗಿದೆ. ಸಾಲ ನೀಡುವಾಗ ಕಾನೂನು, ಸಾಲ ಪಡೆಯುವವರ ಹಿನ್ನೆಲೆ, ಆಸ್ತಿಗಳನ್ನು ನೋಡಿಕೊಂಡು ಮುಂದುವರಿಯಬೇಕು. ಆ ಮೂಲಕ ಉದ್ಯಮಗಳನ್ನೂ ಬೆಳೆಸಿ ಬ್ಯಾಂಕಿನ ಸದೃಢತೆಗೂ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.

ಮಹಾಮಂಡಳದ ನಿರ್ದೇಶಕರಾದ ಬಿ.ಸಿ. ಲೋಕಪ್ಪಗೌಡ, ಬಿ. ಜಯಕರಶೆಟ್ಟಿ ಇಂದ್ರಾಣಿ, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ಡಾ. ಎಂ.ಬಿ. ಮಂಜೇಗೌಡ, ಹೆಚ್. ವಾಸು, ಸಹಕಾರ ಸಂಘಗಳ ಜಂಟಿ ನಿರ್ದೇಶಕ ಡಾ.ಜಿ.ಉಮೇಶ್, ಉಪನಿಬಂಧಕ ಜಿ.ಆರ್. ವಿಜಯಕುಮಾರ್, ಹಿರಿಯ ಸಹಕಾರಿಗಳಾದ ಸುನೀತಾ ವೀರಪ್ಪಗೌಡ, ಭೈರಪ್ಪ, ಕೆ. ಉಮಾಶಂಕರ್, ಮಹದೇವಸ್ವಾಮಿ, ಆನುವಾಳು ಸಿದ್ದೇಗೌಡ, ಸಹಕಾರ ಶಿಕ್ಷಣಾಧಿಕಾರಿ ಕೆ. ಮಲ್ಲಯ್ಯ, ಚಂದ್ರಶೇಖರ, ಎಂ. ವಿಶ್ವೇಶ್ವರಯ್ಯ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆರ್‌ಬಿಐ ನಿವೃತ್ತ ಅಧಿಕಾರಿ ಪಿ.ಎನ್. ಮೂರ್ತಿ, ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಅಧಿಕಾರಿ ಡಿ.ಟಿ.ರಾಮಾನುಜ ಸೇರಿದಂತೆ ಇತರರು ಸಂಪನ್ಮೂಲ ವ್ಯಕ್ತಿಗಳಾಗಿ ಎನ್‌ಸಿಪಿಎ ನಿರ್ವಹಣೆ, ಆರ್‌ಬಿಐ, ತಂತ್ರಜ್ಞಾನ ಆಧರಿತ ಸೇವೆ ಹಾಗೂ ಸಹಕಾರ ಸಂಘಗಳ ಕಾಯ್ದೆ ನಿಯಮಗಳ ತಿದ್ದುಪಡಿ ಕುರಿತು ವಿಷಯ ಮಂಡನೆ ಮಾಡಿದರು.

ಕ್ರೀಡಾಕೂಟಕ್ಕೆ ಚಾಲನೆ...



ಮೈಸೂರು ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕ್ರೀಡಾಕೂಟವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಎಂ.ಮಲ್ಲೇಶ್ವರಿ ಉದ್ಘಾಟಿಸಿದರು. ಪಿಇಓ ಡಾ.ಗಣೇಶ್‌ಕುಮಾರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ.ಸತೀಶ್ ಜವರೇಗೌಡ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಖಜಾಂಚಿ ಮಹದೇವ್, ತಾಲೂಕು ಸಂಘದ ಅಧ್ಯಕ್ಷ ಜೆ.ಬಿ. ಸತೀಶ್, ಪ್ರಧಾನ ಕಾರ್ಯದರ್ಶಿ ಎಸ್.ರಘು ಉಪಸ್ಥಿತರಿದ್ದರು.

ಗೋಕುಲಂನಲ್ಲಿ 32ನೇ ವರ್ಷದ ಗಣೇಶೋತ್ಸವ

ಮೈಸೂರು, ಆ.27(ಆರ್‌ಕೆ)–ಗೋಕುಲಂ ಯುವಕರ ಸಂಘದ ವತಿಯಿಂದ ಮೈಸೂರಿನ ಗೋಕುಲಂ 3ನೇ ಹಂತದ ವಾಟರ್ ಟ್ಯಾಂಕ್ ಮೈದಾನದಲ್ಲಿ 32ನೇ ವರ್ಷದ ಗೌರಿ–ಗಣೇಶ ಉತ್ಸವವನ್ನು ಏರ್ಪಡಿಸಲಾಗಿದೆ.



ಆಗಸ್ಟ್ 31ರಂದು ಬೆಳಗ್ಗೆ 10.30 ಗಂಟೆಗೆ ಗೌರಿ–ಗಣಪತಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುವುದು. ಸೆಪ್ಟೆಂಬರ್ 1ರಂದು ಸಂಜೆ 6 ಗಂಟೆಗೆ ಖ್ಯಾತ ಗಾಯಕ ಪುರುಷೋತ್ತಮ್ ಮತ್ತು ತಂಡದಿಂದ ರಸಮಂಜರಿ, 2 ರಂದು ಸಂಜೆ 6 ಗಂಟೆಗೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 3ರಂದು ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ, 4 ರಂದು ಬೆಳಗ್ಗೆ 10 ಗಂಟೆಗೆ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದೆ. ಅಂದು (ಭಾನುವಾರ) ಸಂಜೆ 4 ಗಂಟೆಗೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗದ ನಂತರ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮೂಲಕ ಕೊಂಡೊಯ್ದು ಗಣಪತಿಯನ್ನು ವಿಸರ್ಜಿಸಲಾಗುವುದು ಎಂದು ಗೋಕುಲಂ ಯುವಕರ ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.08.2022 ಭಾನುವಾರ, ಮಳೆ ನಕ್ಷತ್ರ : ಮಖೆ, 17.08.2022 ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ : ಪೂಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಕೊಡಗು ಗೌಡ ಸಮಾಜ, ಮೈಸೂರು :** ವಾರ್ಷಿಕ ಮಹಾಸಭೆ, ಸ್ಥಳ: ಸಮಾಜದ ಸಾಂಸ್ಕೃತಿಕ ಸಭಾಂಗಣ, ವಿಜಯನಗರ 2ನೇ ಹಂತ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸಭಾಂಗಣ, ಶ್ರೀಹರ್ಷ ರಸ್ತೆ, ಬೆಳಗ್ಗೆ 10ಕ್ಕೆ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಗಣಪತಿ ಸಚ್ಚಿದಾನಂದ ಆಶ್ರಮ :** ಬನ್ನಿ ಮಧುಮೇಹ ಗೆಲ್ಲೋಣ ಉಚಿತ ಆಯುರ್ವೇದ ಮಧುಮೇಹ ಚಿಕಿತ್ಸಾ ಶಿಬಿರ, ಸಾನ್ನಿಧ್ಯ : ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ, ಉದ್ಘಾಟನೆ : ಶಾಸಕ ಎಸ್.ಎ. ರಾಮದಾಸ್, ಅತಿಥಿಗಳು : ಆದಿಚುಂಚನಗಿರಿ ವಿವಿ ಉಪಕುಲಪತಿ ಡಾ. ಎಂ.ಎ. ಶೇಖರ್, ಮೈಸೂರು ವಿವಿ ಕುಲಪತಿ ಹೇಮಂತಕುಮಾರ್, ಸ್ಥಳ: ನಾದ ಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 10ಕ್ಕೆ.

■ **ಇಂಡಿಯನ್ ಕೌನ್ಸಿಲ್ ಆಫ್ ಅಸ್ಟ್ರಾಲಜಿಕಲ್ ಸೈನ್ಸಸ್, ಮೈಸೂರು ಚಾಪ್ಟರ್ :** ಜ್ಯೋತಿಷ್ಯದ ಪ್ರಿಸಂ ಆಫ್ ಆಯುರ್ವೇದದ ಬಗ್ಗೆ ಐಸಿಎಎಸ್‌ನ ರಾಷ್ಟ್ರೀಯ ಉಪಾಧ್ಯಕ್ಷ ಡಾ.ಸೌಮ್ಯಕುಮಾರ್ ಅವರಿಂದ ಉಪನ್ಯಾಸ, ಸ್ಥಳ: ಹೋಟೆಲ್ ಓನರ್ಸ್ ಅಸೋಸಿಯೇಷನ್ ಬಿಲ್ಡಿಂಗ್, ಕೃಷ್ಣಮೂರ್ತಿಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ದತ್ತಸ್ವಾಮಿಗೆ ತೈಲಾಭಿಷೇಕ, ಸಂತಾನ ಗೋಪಾಲ ಯಾಗ, ಸ್ಥಳ: ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ.

■ **ಆರಾಧ್ಯ ಮಹಾಸಭಾ:** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಆರಾಧ್ಯ ಮಹಾಸಭಾ ಅಧ್ಯಕ್ಷ ಪಿ. ನಾಗಭೂಷಣಾರಾಧ್ಯ, ಮುಖ್ಯ ಅತಿಥಿಗಳು : ಶಾಸಕ ಎಸ್.ಎ. ರಾಮದಾಸ್, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಸ್ಥಳ: ಆರಾಧ್ಯ ಮಹಾಸಭಾ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಅಭಯಂ ಫೌಂಡೇಷನ್:** 108 ಸುಮಂಗಲಿಯರಿಗೆ ಸ್ವರ್ಣಗೌರಿ ಬಾಗಿನ ಸಮರ್ಪಣೆ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಉದ್ಘಾಟನೆ: ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ಉಪಸ್ಥಿತರು:ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಡಾ.ಎಂ.ಎಸ್.ಮುರಳೀಧರ ಶಾಸ್ತ್ರಾ, ಗರೀಜರಾಜು, ವೈ.ಆರ್.ರಾಜು ಶೆಟ್ಟಿ, ಸ್ಥಳ: ಬಹುಜನಸಭಾ ಶ್ರೀ ರಾಮಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ನಗರ ಮತ್ತು ಜಿಲ್ಲಾ ಯಾದವ (ಗೊಲ್ಲ) ಯುವ ಸಂಘ, ಶ್ರೀ ಪ್ರಸನ್ನ ನಂಜುಂಡೇಶ್ವರ ಮತ್ತು ಶ್ರೀ ಕೃಷ್ಣದೇವಾಲಯ ಆಡಳಿತ ಸಮಿತಿ :** ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಯಾದವ ವಧು–ವರರ ಸಮಾವೇಶ, ಬೆಳಗ್ಗೆ 11ಕ್ಕೆ ಯಾದವ ಮಕ್ಕಳಿಗೆ ಶ್ರೀ ಕೃಷ್ಣ, ರಾಧ, ರುಕ್ಮಿಣಿ ವೇಷಧಾರಿಗಳ ಸ್ಪರ್ಧೆ, ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ ವಿಜೇತರಿಗೆ ಗೌರವ ಸಮರ್ಪಣೆ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ವಿಧಾನಪರಿಷತ್ ಸದಸ್ಯ ನಾಗರಾಜ್ ಯಾದವ್, ನಿವೃತ್ತ ಪಿಡಬ್ಲ್ಯೂಡಿ ಇಂಜಿನಿಯರ್ ದೊಡ್ಡನಾಗಯ್ಯ, ರಾಜ್ಯ ಗೊಲ್ಲ ಸಂಘದ ಯುವ ಘಟಕದ ಅಧ್ಯಕ್ಷ ಧೀರಜ್ ಮುನಿರಾಜ್, ಎ. ದಿಲೀಪ್ ಕುಮಾರ್, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಡಿ. ಧ್ರುವಕುಮಾರ್, ಸ್ಥಳ: ಯಾದವ ಸಂಘದ ಆವರಣ, ದಿವಾನ್ಸ್ ರಸ್ತೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಯುಕ್ತ ಪಂಚರಾತ್ರೋತ್ಸವ ಕಾರ್ಯಕ್ರಮ, ಸಂಜೆ 6 ರಿಂದ ಪಂಡಿತ್ ಕಪಿಲಾಚಾರ್ಯ ಗಲಗಲಿ ಅವರಿಂದ ವಿಶೇಷ ಪ್ರವಚನ, ಪ್ರತಿದಿನ ಸಂಜೆ 7 ಗಂಟೆಯಿಂದ ಶೇಷವಾಹನ ಉತ್ಸವ, ಗಜವಾಹನ ಉತ್ಸವ, ವಾಯು ವಾಹನ ಉತ್ಸವ, ಗರುಡೋತ್ಸವ ಹಾಗೂ ಮಹಾರಥೋತ್ಸವ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

■ **ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ :** ನೂತನವಾಗಿ ನಿರ್ಮಿಸಿರುವ ಕಟ್ಟಡದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಭದ್ರತಾ ಕೊಠಡಿ ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಶಿಲಾನ್ಯಾಸದ ಅನಾವರಣ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎನ್. ಶಿವಕುಮಾರ್, ಸ್ಥಳ: ನಂ. 5851/ಎ, ವಿಜಯನಗರ 4ನೇ ಹಂತ, 2ನೇ ಫೇಸ್, ಬೆಳಗ್ಗೆ 10ಕ್ಕೆ.

■ **ನಟರಾಜ ಪ್ರತಿಷ್ಠಾನ :** ವಿಶ್ವಗುರು ಬಸವಣ್ಣನವರ ಹಾಗೂ ದಾಸೋಹಮೂರ್ತಿ ನೀಲಾಂಬಿಕಾ ತಾಯಿಯವರ 827ನೇ ಲಿಂಗೈಕ್ಯ ಸಂಸ್ಮರಣೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಮುಕುಕನಪುರ ಮಠದ ಅಧ್ಯಕ್ಷ ಷಡಕ್ಷರಿ ಮಹಾಸ್ವಾಮಿ, ಸ್ಥಳ: ನಟರಾಜ ಕಲ್ಯಾಣ ಮಂಟಪ, ಬೆಳಗ್ಗೆ 11ಕ್ಕೆ.

■ **ಗಾಯತ್ರಿ ವಿಪ್ರ ಸಂಘ :** ಬೆಳಗ್ಗೆ 7 ರಿಂದ ಸಂಕಲ್ಪ, ಗಣಪತಿ ಹೋಮ, ನವಗ್ರಹ ಹೋಮ, ಗಾಯತ್ರಿ ಹೋಮ, ಧನ್ವಂತರಿ ಹೋಮ, ಬೆಳಗ್ಗೆ 9ಕ್ಕೆ ಸಾಮೂಹಿಕ ಲಲಿತ ಸಹಸ್ರ ನಾಮಾರ್ಚನೆ, ಮಧ್ಯಾಹ್ನ 12ಕ್ಕೆ 15ನೇ ವಾರ್ಷಿಕೋತ್ಸವ, ಸನ್ಮಾನ, ಪ್ರತಿಭಾ ಪುರಸ್ಕಾರ, ಸ್ಥಳ: ಅನಂತೇಶ್ವರ ಭವನ, ಕೆಹೆಚ್‌ಬಿ ಹೂಟಗಳ್ಳಿ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸಂವಹನ : ಪ್ರಕಾಶಕರು, ಮಾಧವ ಪ್ರಕಾಶನ :** ಜಾನಪದ ವಿದ್ವಾಂಸ ಸ.ಚ. ಮಹದೇವನಾಯಕ ಅವರು ಬರೆದಿರುವ ಬದುಕಿನ ಕನ್ನಡಿ, ಮುಗಿಯದ ಕಥೆ ಮತ್ತು ಇತರೇ ಕಥೆಗಳು ಮಲ್ಲಿಗೆಯ ಬನದಲ್ಲಿ, ಗಡಿನಾಡಿನ ಬೇಟೆ ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ : ಪ್ರಕಾಶಕ ಡಿ.ಎನ್. ಲೋಕಪ್ಪ, ಕೃತಿಗಳ ಲೋಕಾರ್ಪಣೆ : ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ಉಪಸ್ಥಿತರು : ಪ್ರಾಧ್ಯಾಪಕ ಡಾ. ನಂಜಯ್ಯ ಹೊಂಗನೂರು, ಪ್ರಾಸ್ತಾವಿಕ ನುಡಿ : ಕೃತಿಗಳ ಲೇಖಕ ಸ.ಚ. ಮಹದೇವ ನಾಯಕ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಆರ್ಟ್ ಮ್ಯಾಟರ್ಸ್, ಮೈಸೂರು ವಿಶ್ವವಿದ್ಯಾನಿಲಯ :** ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರದ ಸಮಾರೋಪ ಸಮಾರಂಭ, ಅಧ್ಯಕ್ಷೀಯ ಭಾಷಣ : ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಎ.ಪಿ. ಜ್ಞಾನಪ್ರಕಾಶ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಸುದರ್ಶನ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಎಚ್. ಮಹೇಂದ್ರ, ಡಾ. ವಿಟ್ಠಲ ರೆಡ್ಡಿ ಚುಳುಕಿ, ಮಲ್ಲಿಕಾರ್ಜುನ ತೋರಣಗಟ್ಟಿ, ಸ್ಥಳ : ವಿಜ್ಞಾನ ಭವನ, ಮೈಸೂರು ವಿವಿ, ಮಧ್ಯಾಹ್ನ 2.30ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಶ್ರೀ ಪುರುಷ ಸಾಂಸ್ಕೃತಿಕ ಸಮಿತಿ :** ಕನ್ನಡ ದೇಶದೊಳ್ ಮಾಸ ಪತ್ರಿಕೆ ಹಾಗೂ ಶ್ರೀ ಪುರುಷ ಸಾಂಸ್ಕೃತಿಕ ಸಮಿತಿ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮಾಸ ಪತ್ರಿಕೆ ಲೋಕಾರ್ಪಣೆ : ಶಾಸಕ ಎಲ್. ನಾಗೇಂದ್ರ, ಶ್ರೀ ಪುರುಷ ಸಾಂಸ್ಕೃತಿ ಸಮಿತಿ ಲಾಂಛನ ಬಿಡುಗಡೆ : ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪ್ರಥಮ ಸಂಚಿಕೆ ಸ್ವೀಕಾರ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ

■ **ಗಾನಭಾರತೀ :** ಕೃಷ್ಣ ಜಯಂತಿ ಅಂಗವಾಗಿ ಸನ್ಮಾನ ಸಮಾರಂಭ, ಸನ್ಮಾನಿತರು : ಲೇಖಕ ಎಂ.ಎಲ್. ಕೃಷ್ಣಸ್ವಾಮಿ, ಮೃದಂಗ ಕಲಾವಿದ ವಿದ್ವಾನ್ ಜಿ.ಎಸ್.ರಾಮಾನುಜನ್, ವೀಣಾ ಕಲಾವಿದೆ ಗೀತಾ ರಮಾನಂದ್, ಕಲಾ ಪೋಷಕ ಪ್ರೊ. ವಿ. ಅರವಿಂದ ಹೆಬ್ಬಾರ್, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀ ಸತ್ಯನಾರಾಯಣ ರಾಜು ಅವರಿಂದ ಭರತನಾಟ್ಯ, ವಿದ್ವಾನ್ ಡಿ.ಎಸ್. ಶ್ರೀವತ್ಸ ಅವರಿಂದ ಹಾಡುಗಾರಿಕೆ, ಕು. ನಿಖಿತ ಮಂಜುನಾಥ್ ಅವರಿಂದ ನಟುವಾಂಗ, ವಿದ್ವಾನ್ ಜಿ.ಎಸ್. ನಾಗರಾಜ್ ಅವರಿಂದ ಮೃದಂಗ, ವಿದ್ವಾನ್ ಕಾರ್ತಿಕ್ ಸತವಳ್ಳಿ ಅವರಿಂದ ಕೊಳಲು, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಸಂಜೆ 6ಕ್ಕೆ ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನದ ಸಮಾರೋಪ ಸಮಾರಂಭ ಹಾಗೂ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ ಆಚರಣೆ, ಅಧ್ಯಕ್ಷತೆ: ಬೇಬಿಯ ಶ್ರೀ ದುರುದುಂಡೇಶ್ವರ ಮಠ ಮತ್ತು ಶ್ರೀರಂಗಪಟ್ಟಣ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಸಮಾರೋಪ ಭಾಷಣ : ತಹಸೀಲ್ದಾರ್ ಬಿ.ಎನ್.ಗಿರೀಶ್, ಮುಖ್ಯ ಅತಿಥಿಗಳು: ಕೃಷ್ಣರಾಜ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಎಸ್.ಇ. ಗಂಗಾಧರಸ್ವಾಮಿ, ಸಂಜೆ 6.30 ರಿಂದ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು.

■ **ಕಲಾ ಸುರುಚಿ ಸಂಸ್ಥೆ :** ಭಾರತದ ಗಣಿತಜ್ಞ ಭಾಸ್ಕರಾಚಾರ್ಯ ಅವರ ಜೀವನಾಧಾರಿತ 'ಲೀಲಾವತಿ' ನಾಟಕ ಪ್ರದರ್ಶನ, ರಚನೆ : ಶಶಿಧರ ಡೋಂಗ್ರೆ, ನಿರ್ದೇಶನ : ಪ್ರೊ. ಎಚ್.ಎಸ್. ಉಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಹಲಗಲಿ ಸಮರ ನಾಟಕ ಪ್ರದರ್ಶನ, ನಿರ್ದೇಶನ: ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ – ಹುಳಗೊಳ ನಾಗಪತಿ ಹೆಗ್ಡೆ, 6.20 ಗೀತಾರಾಧನ, 6.35 'ಬದುಕು ಬದಲಿಸಿದ ಶೋಧ' ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ, ಗಾಯನ– ಎಸ್. ಸಂಗೀತಾ, ಪಿ. ಸುರಭೀ, ವ್ಯಾಖ್ಯಾನ– ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ 'ನೇತ್ರದಾನದ ಅಗತ್ಯ ಮತ್ತು ಮಹತ್ವ' ಡಾ.ಪಿ.ಚಂದ್ರಕಲಾ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ.ಮೀನಾ, 11.00 ಮನ್ ಕಿ ಬಾತ್–ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು ನಂತರ ಮನ್ ಕಿ ಬಾತ್–ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದ.

ಮಧ್ಯಾಹ್ನ: 12.05 ವನಿತಾ ವಿಹಾರ –ಸ್ತ್ರೀ ಚೇತನ – ರಂಗಭೂಮಿ ಕಲಾವಿದೆ ಹಾಗೂ ಚಿತ್ರನಟಿ ಅಕ್ಷತಾ ಪಾಂಡವಪುರ ಅವರೊಂದಿಗೆ ಮಾತುಕತೆ ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 12.30 ದೇವರನಾಮ– ಡಾ.ಆರ್.ಎನ್.ಶ್ರೀಲತಾ, ವೃಂದಗಾನ, 12.45 ಜನಪದಗೀತೆ–ಮೈಸೂರು ಗುರುರಾಜ್ ಮತ್ತು ತಂಡ, 1.20 ಭಾವಗೀತೆ–ರಜನಿ ಅನಿಲ್, 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಣಿ 'ಸ್ವರಾಜ್', 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಗಣಪತಿ ಪ್ರತಾಪ, ಪ್ರಸ್ತುತಿ– ಪುತ್ತೂರು ಅಲಂಕಾರಿನ ದುರ್ಗಾಂಬಾ ಕಲಾ ಸಂಘದ ಸದಸ್ಯರು, 7.00 ಏಷಿಯಾ ಕಪ್ 2022 ಕ್ರಿಕೆಟ್ ಪಂದ್ಯದ ಅಂಗವಾಗಿ ದುಬೈನಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ನಡೆಯಲಿರುವ ಪಂದ್ಯದ ವೀಕ್ಷಕ ವಿವರಣೆ

ಮೈಸೂರು ರೌಂಡ್ ಟೇಬಲ್–21ರ ನೂತನ ಪದಾಧಿಕಾರಿಗಳು



ಇತ್ತೀಚೆಗೆ ಗೋವಾದಲ್ಲಿ ನಡೆದ 51ನೇ ವಾರ್ಷಿಕ ಮಹಾಸಭೆಯಲ್ಲಿ ಮೈಸೂರು ರೌಂಡ್ ಟೇಬಲ್–21ರ ಅಧ್ಯಕ್ಷರಾಗಿ ಎಂ.ಎಂ. ನಿಖಿಲೇಶ್ ನೇತೃತ್ವದಲ್ಲಿ ನೂತನ ಪದಾಧಿಕಾರಿಗಳು ಪದಗ್ರಹಣ ಮಾಡಿದರು. ಚಿತ್ರದಲ್ಲಿ (ಕುಳಿತಿರುವವರು ಎಡದಿಂದ) ಕಾರ್ಯದರ್ಶಿ ಜಿ.ನಿತಿನ್, ಉಪಾಧ್ಯಕ್ಷ ಪಿ.ಮಧು ಮಲ್ಲೇಶ್, ಅಧ್ಯಕ್ಷ ಎಂ.ಎಂ.ನಿಖಿಲೇಶ್, ವಲಯ 13ರ ಅಧ್ಯಕ್ಷ ಟಿ.ಆರ್.ವಿನಯ್, ನಿಕಟಪೂರ್ವ ಅಧ್ಯಕ್ಷ ಪಿ.ನಿತಿನ್, ವಲಯ 13ರ ಉಪಾಧ್ಯಕ್ಷ ಹೆಚ್.ಹೆಚ್.ರಾಮ್, (ನಿಂತಿರುವವರು ಎಡದಿಂದ) ಫೆಲೋಶಿಪ್ ಕನ್ವೀನರ್ ಕೌಶಿಕ್, ಎಡಿಟರ್ ಹರ್ಷನ್ ಸುವರ್ಣ, ಫೆಲೋಶಿಪ್ ಕನ್ವೀನರ್ ಖದರ್, ಟ್ಯಾಬ್ಲರ್ ಲೇಗ್ ಮಯೂರ್ ಷಾ, ಸ್ಪೋರ್ಟ್ ಕನ್ವೀನರ್ ಎಸ್. ಪವನ್, ಪಬ್ಲಿಸಿಟಿ ಕನ್ವೀನರ್ ನಿಖಿಲ್ ಚಂದ್ರ, ಟಾಲೆಂಟ್ ಅಂಡ್ ಟ್ವಿಂಕ್ಲರ್ ಕನ್ವೀನರ್ ಅಕ್ಷಯ್, ರಾಕೇಶ್ ಅವರನ್ನು ಕಾಣಬಹುದು.

ಕಾಂಗ್ರೆಸ್‌ನಿಂದ ಭಾರತ್ ಜೋಡೋ ಯಾತ್ರೆ

ನಾಳೆಯಿಂದ 2 ದಿನ ಬೆಂಗಳೂರಲ್ಲಿ ಸರಣಿ ಸಭೆ

ಬೆಂಗಳೂರು: ಕಾಂಗ್ರೆಸ್‌ನಲ್ಲೀಗ ಭಾರತ್ ಜೋಡೋ ಯಾತ್ರೆಯ ಸಿದ್ಧತೆ. ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆ, 2023ರ ವಿಧಾನಸಭಾ ಚುನಾವಣೆಗೆ ಸಿದ್ಧತೆ ಮತ್ತು ಇತರ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಲು ಕಾಂಗ್ರೆಸ್ ನಾಯಕರು ನಾಳೆ ಮತ್ತು ನಾಡಿದ್ದು ಬೆಂಗಳೂರಿನಲ್ಲಿ ಸರಣಿ ಸಭೆಗಳನ್ನು ನಡೆಸಲಿದ್ದಾರೆ. ಕಾಂಗ್ರೆಸ್‌ನ ಹಿರಿಯ ನಾಯಕರಾದ ರಣದೀಪ್ ಸಿಂಗ್ ಸುರ್ಜೇವಾಲಾ, ದಿಗ್ವಿಜಯ್ ಸಿಂಗ್, ಜೈರಾಮ್ ರಮೇಶ್, ಸಿದ್ದರಾಮಯ್ಯ, ಪಕ್ಷದ ಶಾಸಕರು, ಕೆಪಿಸಿಸಿ ಪದಾಧಿಕಾರಿಗಳು, 2018ರ ವಿಧಾನಸಭೆ ಮತ್ತು 2019ರ ಲೋಕಸಭೆ ಅಭ್ಯರ್ಥಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸೆ.10ರಿಂದ ಪ್ರಾರಂಭವಾಗುವ ರಾಜ್ಯ ವಿಧಾನಮಂಡಲ ಅಧಿವೇಶನದ ಪಕ್ಷದ ಕಾರ್ಯತಂತ್ರವನ್ನು ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ನಡೆದಿರುವ ಅಕ್ರಮಗಳು ಮತ್ತು ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಸೇರಿದಂತೆ ವಿವಿಧ ವಿಷಯಗಳನ್ನು ಪಕ್ಷವು ಕಲಾಪದಲ್ಲಿ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ. ಮುಂದಿನ ವಾರ ಗಣೇಶ ಹಬ್ಬಕ್ಕೆ ವಿನಾಯಕ ದಾಮೋದರ ಸಾವರ್ಕರ್ ಅವರ ಪೋಸ್ಟರ್ ಹಂಚಿದ್ದಕ್ಕೆ ಬಿಜೆಪಿ ವಿರುದ್ಧ ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ.

ಅಮಾವಾಸ್ಯೆ ಹಿನ್ನೆಲೆ: ಗಜಪಡೆಗೆ ತಾಲೀಮಿನಿಂದ ವಿನಾಯಿತಿ



ದಸರಾ ಗಜಪಡೆಯ ಸದಸ್ಯರಾದ ಮಹೇಂದ್ರ, ಭೀಮನಿಗೆ ಮಹಾಮಜ್ಜನ.

ಮೈಸೂರು, ಆ.27(ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆಗೆ ಶನಿವಾರ ಅಮಾವಾಸ್ಯೆ ಹಿನ್ನೆಲೆಯಲ್ಲಿ ತಾಲೀಮಿನಿಂದ ವಿನಾಯಿತಿ ನೀಡಲಾಗಿತ್ತು. ಮಾವುತರು ಹಾಗೂ ಕಾವಾಡಿಗಳು ಮೊದಲಿನಿಂದಲೂ ಅಮಾವಾಸ್ಯೆ ದಿನದಂದು ಸಾಕಾನೆಗಳನ್ನು ಹೊರಗೆ ಬಿಡದೇ ಇರುವ ಸಂಪ್ರದಾಯ ಅನುಸರಿಸುತ್ತಿದ್ದು, ಹಾಗಾಗಿ ಇಂದು ದಸರಾ ಗಜಪಡೆಗೂ ರಿಲೀಫ್ ನೀಡಲಾಗಿತ್ತು. ಇಂದು ಅರಮನೆ ಆವರಣದಿಂದ ದಸರಾ ಆನೆಗಳನ್ನು ಹೊರಗೆ ಕರೆತರಲಿಲ್ಲ. ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಎಲ್ಲಾ ಆನೆಗಳಿಗೂ ಬೆಳಗ್ಗಿನಿಂದ ಸಂಜೆವರೆಗೂ ಅಗತ್ಯ ಆಹಾರ ಪೂರೈಸಿ, ನಿಗಾ ವಹಿಸಲಾಯಿತು. ಹಾಗಾಗಿ ಬೆಳಗ್ಗೆ ಕಾಲ್ನಡಿಗೆ ಹಾಗೂ ಸಂಜೆ ಭಾರ ಹೊರುವ ತಾಲೀನಿಂದ ವಿನಾಯಿತಿ ಪಡೆದ ದಸರಾ ಆನೆಗಳು ದಿನವಿಡೀ ವಿರಮಿಸಿದವು.

ಸೆ.2ರಿಂದ 4ರವರೆಗೆ 25ನೇ ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಕರ ಸಮಾವೇಶ

ಮೈಸೂರು,ಆ.27(ಎಂಟಿವೈ)– ಜೆಎಸ್‌ಎಸ್ ಔಷಧ ಮಹಾವಿದ್ಯಾಲಯ ವತಿಯಿಂದ



ಸೆ.2ರಿಂದ 4ವರೆಗೆ '25ನೇ ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಕರ ಸಮಾವೇಶ' ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಔಷಧ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಟಿ.ಎಂ.ಪ್ರಮೋದ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫಾರ್ಮಸಿ ಶಿಕ್ಷಣವು ಸಾರ್ವಜನಿಕರ ಆರೋಗ್ಯದ ಅಗತ್ಯತೆಗಳನ್ನು ಪೂರೈಸಲು ಮತ್ತು ಸಮರ್ಥ ವೃತ್ತಿಪರ ಔಷಧಿಕಾರರನ್ನು ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಲ್ಲದೇ ಔಷಧಿಗಳ ಪರಿಣಾಮ ಮತ್ತು ಜವಾಬ್ದಾರಿಯುತ ಬಳಕೆಯನ್ನು ತಿಳಿಸುವ ನಿಟ್ಟಿನಲ್ಲಿ ಔಷಧಿಕಾರರು ಹೆಚ್ಚಿನ ಜವಾಬ್ದಾರಿ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಔಷಧ ಉದ್ಯಮ ಮತ್ತು ಔಷಧ ವಿಜ್ಞಾನ ಶಿಕ್ಷಕರ ನಡುವೆ ಸಂವಹನ ಮತ್ತು ಚರ್ಚೆ ಏರ್ಪಡಿಸಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು. ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಸೆ.2ರಂದು ಮಧ್ಯಾಹ್ನ 3ಕ್ಕೆ ಸಮ್ಮೇಳನವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವ ಡಾ.ಕೆ.ಸುಧಾಕರ್ ಉದ್ಘಾಟಿಸಲಿದ್ದಾರೆ. ಇಂಡಿಯನ್ ಫಾರ್ಮಾಸ್ಯುಟಿಕಲ್ ಅಲೈಯನ್ಸ್(ಐಪಿಎ) ಪ್ರಧಾನ ಕಾರ್ಯದರ್ಶಿ ಸುದರ್ಶನ್ ಜೈನ್ ಅವರು ಸ್ಮರಣಿಕೆ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಪಿಟಿಐ ಅಧ್ಯಕ್ಷ ಡಾ.ಮಿಲಿಂದ್ ಜನರಾಬ್ ಉಮೇಕರ್, ಕಾರ್ಯದರ್ಶಿ ಡಾ.ರಾಮನ್ ದಂಗ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ, ಭಾರತೀಯ ಫಾರ್ಮಸಿ ಕೌನ್ಸಿಲ್ ಅಧ್ಯಕ್ಷ ಡಾ.ಮೊಂಟು ಎಂ.ಪಟೇಲ್, ಮೈಸೂರಿನ ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮೂರು ದಿನಗಳ ಕಾಲ ನಡೆಯುವ ಈ ಸಮ್ಮೇಳನದಲ್ಲಿ ವಿವಿಧ ರಾಜ್ಯಗಳಿಂದ ಎರಡು ಸಾವಿರ ಫಾರ್ಮಸಿ ವೃತ್ತಿಪರರು, ವಿದ್ಯಾರ್ಥಿಗಳು, ಕೈಗಾರಿಕೋದ್ಯಮಿಗಳು, ಔಷಧೀಯ ವಿಜ್ಞಾನಿಗಳು ಪಾಲ್ಗೊಳ್ಳಲಿದ್ದಾರೆ. ಈ ಸಮ್ಮೇಳನದಲ್ಲಿ ಔಷಧ ವಿದ್ಯಾಲಯಗಳಲ್ಲಿ ಔಷಧ ವಿಜ್ಞಾನಗಳ ಶಿಕ್ಷಣ ಮತ್ತು ಸಂಶೋಧನೆ ಸಬಲೀಕರಣ, ಶಿಕ್ಷಣ ತಜ್ಞರು, ವೃತ್ತಿಪರರು, ವಿಜ್ಞಾನಗಳು ಹಾಗೂ ನಿಯಂತ್ರಕರಲ್ಲಿ ಫಾರ್ಮಸಿ ಶಿಕ್ಷಣ ಉನ್ನತೀಕರಣ, ಪ್ರಪಂಚದಾದ್ಯಂತ ಔಷಧಿಕಾರರಿಗೆ ಸಮಕಾಲೀನ ಶೈಕ್ಷಣಿಕ ಕಾರ್ಯಕ್ರಮಗಳ ವಿನ್ಯಾಸ, ಅನುಷ್ಠಾನ ಮತ್ತು ಮೌಲ್ಯಮಾಪನಕ್ಕೆ ಪರಿಕಲ್ಪನಾ ಚೌಕಟ್ಟು ಒದಗಿಸುವುದು. ಅಲ್ಲದೆ, ಔಷಧಿ ಉದ್ಯಮ ಸಿಬ್ಬಂದಿ ಮತ್ತು ಔಷಧ ವಿಜ್ಞಾನ ಶಿಕ್ಷಕರ ನಡುವೆ ಸಂವಹನ ಮತ್ತು ಚರ್ಚೆಗಳು ಸಮಾವೇಶದಲ್ಲಿ ನಡೆಯಲಿವೆ. ಇದರಿಂದಾಗಿ ಹೊಸ ಸಂಶೋಧನೆಗಳ ಯೋಜನೆ ರೂಪಿಸಲಾಗುತ್ತದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಉಪ ಕುಲಸಚಿವರಾದ ಎಂ.ಎಸ್. ಕೋಕಿಲ, ಡಾ.ಬಿ.ಆರ್. ಪ್ರಶಾಂತ್‌ಕುಮಾರ್, ಡಾ.ಬಾಲ ಮುರಳೀಧರ್ ಇದ್ದರು.

ಪ್ರಜಾಪ್ರಭುತ್ವದ ಬಗ್ಗೆ ರಾಜಕಾರಣಿಗಳು, ಅಧಿಕಾರಿಗಳು ಪುಸ್ತಕ ಬರೆಯಬೇಕು

ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಸಲಹೆ



ಮೈಸೂರಿನ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಪ್ರೊ.ಸುಧಾಕರ ಅವರ ಸಮಗ್ರ ಸಾಹಿತ್ಯ ಅಧ್ಯಯನ ಕೃತಿಯನ್ನು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಶನಿವಾರ ಲೋಕಾರ್ಪಣೆಗೊಳಿಸಿದರು.

ಮೈಸೂರು,ಆ.27(ಎಂಟಿವೈ)– ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಸರಿಯಾಗಿ ಅರ್ಥ ಮಾಡಿಸಲು, ರಾಜಕಾರಣಿಗಳು ಪುಸ್ತಕಗಳನ್ನು ಬರೆಯಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಡಾ.ಬಿ.ಮಾದೇಶ ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ಪ್ರೊ.ಸುಧಾಕರ ಅವರ ಸಮಗ್ರ ಸಾಹಿತ್ಯ ಅಧ್ಯಯನ ಕೃತಿ ಲೋಕಾರ್ಪಣೆಗೊಳಿಸಿ, ಮಾತನಾಡಿದ ಅವರು, ರಾಜಕಾರಣಿಗಳು ಹಾಗೂ ಅಧಿಕಾರಿಗಳು ಪುಸ್ತಕ ಬರೆಯುವುದರಿಂದ ಜನತಂತ್ರ ವ್ಯವಸ್ಥೆಗೆ ಅನುಕೂಲವಾಗಲಿದೆ. ಇಂದಿಗೂ ಕೆಲವರಿಗೆ ನಾವು ಯಾವ ವ್ಯವಸ್ಥೆಯಲ್ಲಿ ಇದ್ದೇವೆ ಎನ್ನುವುದು ಗೊತ್ತಿಲ್ಲ. ಯಾವ ಜಾತಿ, ಧರ್ಮ, ಪಕ್ಷ ಅಂದರೆ ತಕ್ಷಣ ಹೇಳುತ್ತಾರೆ. ಆದರೆ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ ಎಂದರು.

ದೇಶದ ಪ್ರಜಾಪ್ರಭುತ್ವ 75 ವರ್ಷ ಪೂರೈಸಿದೆ. ಜಗತ್ತಿನಲ್ಲೇ ಭಾರತ ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಆದರೆ, ರಾಜ್ಯಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಕೂಡ ದೇಶದ ವ್ಯವಸ್ಥೆಯ ಬಗ್ಗೆ ಸರಿಯಾಗಿ ತಿಳಿದುಕೊಂಡಿಲ್ಲ. ವಿಶ್ವವಿದ್ಯಾನಿಲಯಗಳು ಕೂಡ ಸರಿಯಾಗಿ ಹೇಳಿಕೊಡುತಿಲ್ಲ. ತುರ್ತು ಪರಿಸ್ಥಿತಿಯ ವಿರುದ್ಧ ಹಲವಾರು ಮಂದಿ ಬರೆದರು. ಆದರೆ ನಾನು ಪರವಾಗಿ ಬರೆದೆ. ದೇವರಾಜ ಅರಸು ತುರ್ತು ಪರಿಸ್ಥಿತಿಯನ್ನು ಸಮಗ್ರ ಅಭಿವೃದ್ಧಿಗೆ ಬಳಸಿಕೊಂಡರು. ವಿರೋಧಿಗಳನ್ನು ಹತ್ತಿಕ್ಕಲಿಲ್ಲ ಎಂದು ವಿವರಿಸಿದರು.

ಆಂಧ್ರದಲ್ಲಿ ಚಮ್ಮಾರ ಬರೆಯುತ್ತಾನೆ. ರೆಡ್‌ಲೈಟ್ ಏರಿಯಾದಲ್ಲಿನ ಪರಿಸ್ಥಿತಿಯನ್ನು ನೊಂದ ಮಹಿಳೆಯ ಬರೆಯುತ್ತಾಳೆ. ಬರೆಯುವುದು ಜನ ಸಾಹಿತ್ಯವಾಗಬೇಕು. ಬರವಣಿಗೆ ಮೂಲಕ ಜಾನಪದ ಕಥೆಗಳನ್ನು ಬರೆಯಬಹುದು. ಕೃತಿ ಚೌರ್ಯ ಸಾಹಿತ್ಯ ಲೋಕದಲ್ಲಿ ಖಂಡನೀಯ, ಇದರ ಬಗ್ಗೆ ಪ್ರೊ .ಸುಧಾಕರ ಖಂಡಿಸುತ್ತಿದ್ದರು. ಜಾನಪದ ಹಾಗೂ ಗಾದೆಗಳ ಬಗ್ಗೆ ವಿಸ್ತಾರವಾಗಿ ಬರೆದಿದ್ದಾರೆ. ನಾಡು ಸುತ್ತಿ ಒಂದು ರೂಪ ಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಅಂಬಳಿಕೆ ಹಿರಿಯಣ್ಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ರಾಗೌ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರೊ.ಡಿ.ನಾಗಣ್ಣ, ಅಬಕಾರಿ ಉಪ ಆಯುಕ್ತ ಲೇಖಕ ಡಾ.ಬಿ.ಮಾದೇಶ್ ಮತ್ತಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಹಿನ್ನೆಲೆ

ಟೆರಿಷಿಯನ್ ಕಾಲೇಜಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು,ಆ.27(ಎಂಟಿವೈ)–ಮೈಸೂರಿನ ಸಿದ್ಧಾರ್ಥನಗರದ ಟೆರಿಷಿಯನ್ ಕಾಲೇಜಿನಲ್ಲಿ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಆ.29 ಮತ್ತು



30ರಂದು ಭಾರತೀಯ ಸ್ವಾತಂತ್ರ್ಯ ಚಳವಳಿ ಪರಾಮರ್ಶೆ ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಕಾಲೇಜಿನ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕರಾದ ಸೋನಿಯಾ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಚಾರ ಸಂಕಿರಣವನ್ನು ಆ.29ರ ಬೆಳಗ್ಗೆ 10ಕ್ಕೆ ಕಾಲೇಜಿನ ಆವೆ ಮರಿಯಾ ಗೋಲ್ಡನ್ ಜ್ಯುಬಿಲಿ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಉದ್ಘಾಟಿಸಲಿದ್ದಾರೆ. ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ಎ.ದೇವರಾಜು, ಐಸಿಹೆಚ್‌ಆರ್ ಪ್ರಾದೇಶಿಕ ನಿರ್ದೇಶಕರಾದ ಡಾ.ಎಸ್.ಕೆ.ಅರುಣಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಆ.30ರಂದು ಮಧ್ಯಾಹ್ನ 1.30ಕ್ಕೆ ಸಮಾರೋಪ ಸಮಾರಂಭವಿದ್ದು, ಮಹಾರಾಜ ಕಾಲೇಜಿನ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಲ್ಯಾನ್ಸಿ ಡಿಸೋಜಾ, ಹರಿಯಾಣ ಕುರುಕ್ಷೇತ್ರ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕಿ ಪ್ರೊ.ಪುಷ್ಪ ಶರ್ಮಾ ಪಾಲ್ಗೊಳ್ಳಲಿದ್ದಾರೆ. ವಿಚಾರ ಸಂಕಿರಣದಲ್ಲಿ ದೇಶದ ವಿವಿಧ ವಿವಿ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಬಯಸಿದ್ದಾರೆ. ಇದುವರೆಗೆ ಸುಮಾರು 44 ಪ್ರವೇಶಗಳು ಬಂದಿವೆ. ಹರಿಯಾಣ, ಗೋವಾ, ದೆಹಲಿ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ಪ್ರತಿನಿಧಿಗಳು ಆಗಮಿಸುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಕಿಗೆ ಬಾರದ ಅನೇಕ ಹೋರಾಟಗಾರರು, ಮಹಿಳಾ ಹೋರಾಟಗಾರರ ಮೇಲೆ ಈ ವಿಚಾರ ಸಂಕಿರಣ ಬೆಳಕು ಚೆಲ್ಲಲಿದೆ. ಜೊತೆಗೆ ಇಲ್ಲಿ ಮಂಡಿತವಾದ ಪ್ರಬಂಧಗಳ ಪ್ರಕಟಣೆ ಸಹ ಮಾಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಸಿ.ಜಯಂತಿ, ಡಾ.ಸಿಸ್ಟರ್ ಆನ್ ಮೇರಿ, ಅಂತೋಣಿ ಮೋಸೆಸ್ ಇದ್ದರು.

ಆಟೋಮೊಬೈಲ್ ಶಾಪ್ ಮಾಲೀಕನ ಹತ್ಯೆ

ಸಾಲ ಪಡೆದವರಿಂದಲೇ ಹತ್ಯೆ ಆರೋಪ

ಕುಶಾಲನಗರ,ಆ.27–ಆಟೋ ಮೊಬೈಲ್ ಶಾಪ್ ಮಾಲೀಕನನ್ನು ಹತ್ಯೆ ಮಾಡಿ ಶವವನ್ನು ನದಿಗೆ ಎಸೆದಿರುವ ಘಟನೆ ವರದಿಯಾಗಿದೆ.



ಹೇಮಪ್ರಸಾದ್

ಕುಶಾಲನಗರದ ಬಸವೇಶ್ವರ ನಗರ ನಿವಾಸಿ, ಇಲ್ಲಿನ ಮಾರ್ಕೆಟ್ ರಸ್ತೆಯ ಮೂಕಾಂಬಿಕ ಆಟೋ ಮೊಬೈಲ್ ಶಾಪ್ ಮಾಲೀಕ ಹೇಮ ಪ್ರಸಾದ್(37) ಹತ್ಯೆಗೀಡಾದವರಾಗಿದ್ದು, ಇವರಿಂದ ಸಾಲ ಪಡೆದಿದ್ದ ಜಯಚಂದ್ರ, ಪ್ರಸನ್ನ, ಕುಮಾರ್, ಮಂಜು ಎಂಬುವರು ಹತ್ಯೆ ಮಾಡಿರಬಹುದು ಎಂದು ಶಂಕಿಸಿ ಪೊಲೀಸರಿಗೆ ದೂರು ಸಲ್ಲಿಸಲಾಗಿದೆ.

ವಿವರ: ಹೇಮಪ್ರಸಾದ್ ಅವರು ಅನಾರೋಗ್ಯದ ಕಾರಣ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಿಂದ ಕಳೆದ 1 ತಿಂಗಳಿಂದ ಅವರ ಅಂಗಡಿ ಬಂದ್ ಮಾಡಲಾಗಿತ್ತು. ಇವರಿಂದ ಆಟೋಮೊಬೈಲ್ ಬಿಡಿ ಭಾಗಗಳನ್ನು ಖರೀದಿಸಿದ್ದ ಜಯಚಂದ್ರ, ಪ್ರಸನ್ನ, ಕುಮಾರ್ ಮತ್ತು ಮಂಜು ಎಂಬುವರು ಲಕ್ಷಾಂತರ ರೂ. ನೀಡಬೇಕಾಗಿದ್ದು, ಹಣ ಕೊಡದೆ ಸತಾಯಿಸುತ್ತಿದ್ದಾರೆ ಎಂದು ಅವರು ತಮ್ಮ ಕುಟುಂಬದವರ ಜೊತೆ ಹೇಳಿಕೊಂಡಿದ್ದರು. ತನಗೆ ಹಣ ನೀಡಬೇಕಾದ ಈ ನಾಲ್ವರಿಂದ ಹಣ ಪಡೆದು ಬರುವುದಾಗಿ ಪತ್ನಿ ರಚನಾ ಅವರಿಗೆ ತಿಳಿಸಿ ಹೇಮಪ್ರಸಾದ್ ಆ.21ರಂದು ಮನೆಯಿಂದ ಹೊರ ಹೋಗಿದ್ದು, ಮತ್ತೆ ಹಿಂತಿರುಗಿಲ್ಲ. ಈ ಸಂಬಂಧ ಕುಶಾಲನಗರ ಠಾಣೆಯಲ್ಲಿ ಆ.22ರಂದು ನಾಪತ್ತೆ ಪ್ರಕರಣ ದಾಖಲಾಗಿತ್ತು. ಆ.23ರಂದು ಹೇಮಪ್ರಸಾದ್ ಸಹೋದರ ಸಚಿನ್ ಅವರು ಆರೋಪಿ ಜಯಚಂದ್ರ ಅವರಿಗೆ ಕರೆ ಮಾಡಿ ವಿಚಾರಿಸಿದಾಗ ಆತ 'ಹೇಮಪ್ರಸಾದ್ ಇನ್ನೂ ಸತ್ತಿಲ್ಲವಾ' ಎಂದು ಕೇಳಿದ್ದರು ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ನಡುವೆ ಆ.25ರಂದು ಕಣಿವೆ ಗ್ರಾಮದ ಕಾವೇರಿ ಹೊಳೆಯಲ್ಲಿ ಹೇಮಪ್ರಸಾದ್ ಮೃತದೇಹ ದೊರೆತಿದ್ದು, ಅವರ ಹೊಟ್ಟೆಯ ಭಾಗಕ್ಕೆ ಕೈ ಮತ್ತು ಕಾಲುಗಳನ್ನು ಪ್ಲಾಸ್ಟರ್‌ನಿಂದ ಸುತ್ತಲಾಗಿತ್ತು. ಇವರನ್ನು ಕೊಲೆ ಮಾಡಿ ಕೈ–ಕಾಲುಗಳನ್ನು ಪ್ಲಾಸ್ಟರ್‌ನಿಂದ ಸುತ್ತಿ, ಶವವನ್ನು ಹೊಳೆಗೆ ಎಸೆದಿದ್ದು, ಈ ಕೊಲೆಯನ್ನು ಅವರಿಗೆ ಹಣ ನೀಡಬೇಕಾಗಿದ್ದ ಜಯಚಂದ್ರ, ಪ್ರಸನ್ನ, ಕುಮಾರ ಮತ್ತು ಮಂಜು ಮಾಡಿರಬಹುದು ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುಶಾಲನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಉದ್ಯಮಿ ಖಾತೆಗೆ ಕನ್ನ

ಮೈಸೂರು, ಆ.27– ಬ್ಯಾಂಕ್ ಖಾತೆಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಲಿಂಕ್ ಕಳುಹಿಸಿ ಉದ್ಯಮಿಯೊಬ್ಬರ ಖಾತೆಯಿಂದ ಅಕ್ರಮವಾಗಿ ಲಕ್ಷ ರೂ. ವರ್ಗಾವಣೆ ಮಾಡಿಕೊಂಡ ಬಗ್ಗೆ ವರದಿಯಾಗಿದೆ.

ಬನ್ನಿಮಂಟಪ 1ನೇ ಹಂತದ ನಿವಾಸಿ ಬಷೀರ್ ನೌಷದ್ (52) ಅವರ ಮೊಬೈಲ್‌ಗೆ ಕರೆ ಮಾಡಿದ ವ್ಯಕ್ತಿ, ಬ್ಯಾಂಕ್ ಖಾತೆ ಬ್ಲಾಕ್ ಆಗಿದ್ದು, ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ತಿಳಿಸಿ ಲಿಂಕ್‌ವೊಂದನ್ನು ವಾಟ್ಸಾಪ್‌ಗೆ ರವಾನಿಸಿದ್ದಾನೆ. ಅವರು ಲಿಂಕ್ ಓಪನ್ ಮಾಡಿ ಓಟಿಪಿ ನಮೂದಿಸುತ್ತಿದ್ದಂತೆಯೇ ಬ್ಯಾಂಕ್ ಖಾತೆಯಿಂದ ಲಕ್ಷ ವರ್ಗಾವಣೆಯಾಗಿದೆ.

ಮತ್ತೊಂದು ಪ್ರಕರಣದಲ್ಲಿ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯಲ್ಲಿ ಫಿಸಿಯೋಥೆರಪಿಸ್ಟ್ ಕೆಲಸ ಕೊಡಿಸುವುದಾಗಿ ನಕಲಿ ಇ–ಮೇಲ್ ಐಡಿಯಿಂದ ಸಂದೇಶ ಕಳಿಸಿ, ಯುವತಿಯಿಂದ ಆನ್‌ಲೈನ್ ಮೂಲಕ 61,480 ರೂ. ವರ್ಗಾಯಿಸಿ ಕೊಂಡು ವಂಚಿಸಲಾಗಿದೆ. ಮೈಸೂರಿನ ರಾಮಚಂದ್ರ ಅಗ್ರಹಾರದ ಪಿಜಿಯೊಂದರಲ್ಲಿರುವ ಯುವತಿ ಎಂ.ಮೇಘನಾ (23)ಗೆ ಮೈಸೂರಿನ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯ ಹೆಸರಿನ ನಕಲಿ ಇ–ಮೇಲ್ ಐಡಿಯಿಂದ ಫಿಜಿಯೋಥೆರಪಿಸ್ಟ್ ಕೆಲಸ ಕೊಡಿಸುವುದಾಗಿ ಸಂದೇಶ ಬಂದಿದ್ದು, ಕೆಲವು ಶುಲ್ಕಗಳೆಂದು 61,480 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಬೈಕ್ ಟ್ಯಾಂಕ್ ಕವರ್‌ನಲ್ಲಿದ್ದ ಲಕ್ಷ ರೂ. ಕಳವು

ಹುಣಸೂರು,ಆ.27–ಬೈಕ್ ಟ್ಯಾಂಕ್ ಕವರ್‌ನಲ್ಲಿ ಇಟ್ಟಿದ್ದ ಲಕ್ಷ ರೂ. ಕಳವಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಹುಣಸೂರಿನ ಬಿ.ಆರ್.ಕಾವಲ್ ನಿವಾಸಿ, ಮಾಜಿ ಸೈನಿಕ ಪ್ರಸನ್ನಕುಮಾರ್(38) ಹಣ ಕಳೆದುಕೊಂಡವರು. ಹುಣಸೂರಿನ ಎಸ್‌ಬಿಐನಲ್ಲಿ ಲಕ್ಷ ರೂ. ಡ್ರಾ ಮಾಡಿ ಬೈಕ್ ಟ್ಯಾಂಕ್‌ನ ಕವರ್‌ನಲ್ಲಿಟ್ಟು ಕೆ.ಆರ್.ನಗರಕ್ಕೆ ತೆರಳುತ್ತಿದ್ದರು. ಕಟ್ಟೆಮಳಲವಾಡಿ ತಂಬಾಕು ಮಂಡಳಿ ಮುಂದೆ ಇರುವ ಟೀ ಸ್ಟಾಲ್ ಮುಂದೆ ಬೈಕ್ ನಿಲ್ಲಿಸಿ, ಟೀ ಕುಡಿದು ಬರುವಷ್ಟರಲ್ಲಿ ಹಣ, ಚೆಕ್ ಬುಕ್ ಕಳವು ಮಾಡಲಾಗಿದೆ.

ಗುಜರಿಗೆ ಕಾರು ನೀಡಿ 14.70 ಲಕ್ಷ ವಂಚನೆ

ಮೈಸೂರು,ಆ.27–ಹೊಸ ಕಾರೆಂದು ನಂಬಿಸಿ ಸ್ಕ್ರಾಪ್ ಕಾರನ್ನು ಮಾರಾಟ ಮಾಡಿ ವ್ಯಕ್ತಿಯೊಬ್ಬರಿಗೆ 14.70 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಗಾಯಿತ್ರಿಪುರಂ ನಿವಾಸಿ ಮೊಹಮ್ಮದ್ ಕೈಸರ್ (44) ವಂಚನೆಗೊಳಗಾದವರಾಗಿದ್ದು, ಇವರು ಕಾರು ಖರೀದಿಸಬೇಕೆಂದು ತಮ್ಮ ಪರಿಚಯಸ್ಥರಾದ ರಾಜೀವ್‌ನಗರದ ಅಫ್ರೋಜ್ ಖಾನ್ ಎಂಬುವರಿಗೆ ತಿಳಿಸಿದ್ದಾರೆ. ಆಗ ಮೊಹಮ್ಮದ್ ಸಲೀಂ ಎಂಬಾತನನ್ನು ಅಫ್ರೋಜ್ ಪರಿಚಯ ಮಾಡಿಕೊಟ್ಟಿದ್ದು, ಆತ ತನ್ನ ಸ್ನೇಹಿತನ ಬಳಿ ಕಿಯಾ ಸೆಲ್ಟೋಸ್ ಕಾರು (ಕೆಎ51 ಎಂಕ್ಯೂ3737) ಇದೆ. ಅದು ಕೇವಲ 2500 ಕಿ.ಮೀ ಮಾತ್ರ ಓಡಿದ್ದು, ಶೋರೂಂಗಿಂತ ಕಡಿಮೆ ಬೆಲೆಗೆ ದೊರೆಯುತ್ತದೆ ಎಂದು ತಿಳಿಸಿ ಇಮ್ತಿಯಾಜ್ ಮತ್ತು ಸಲೀಂ 14.70 ಲಕ್ಷ ರೂ. ಪಡೆದು ಕಾರನ್ನು ನೀಡಿದ್ದಾರೆ. ಜೊತೆಗೆ ಅಮರ್‌ನಾಥ್ ರೆಡ್ಡಿ ಎಂಬುವರ ಹೆಸರಿನಲ್ಲಿದ್ದ ಕಾರಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದ್ದು, ಕೈಸರ್ ಅವರು ಕಾರಿನ ದಾಖಲೆಗಳನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. 2–ಮೂರು ತಿಂಗಳಾದ ನಂತರ ಕಾರು ಓಡಿಸುವಾಗ ಕರ್ಕಷ ಶಬ್ದ ಬರುತ್ತಿದ್ದರಿಂದ ಅವರು ಶೋರೂಂಗೆ ಕಾರನ್ನು ತೆಗೆದುಕೊಂಡು ಹೋದಾಗ ಅಲ್ಲಿಯವರು ಈ ಕಾರು ಅಪಘಾತಕ್ಕೊಳಗಾಗಿದ್ದು, ಸ್ಕ್ರಾಪ್ ವಾಹನವೆಂದು ಡಿಕ್ಲೇರ್ ಆಗಿದೆ. ಅದಕ್ಕೆ ಇನ್ಶ್ಯೂರೆನ್ಸ್ ಹಣವನ್ನು ಕೂಡ ಪಡೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಕೇಳಿದಾಗ ಸಲೀಂ, ಇಮ್ತಿಯಾಜ್ ಮತ್ತು ಅಫ್ರೋಜ್ ಅವರು ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಗೃಹಿಣಿಗೆ ಆನ್‌ಲೈನ್‌ನಲ್ಲಿ 1.23 ಲಕ್ಷ ವಂಚನೆ

ಮೈಸೂರು, ಆ.27–ಪ್ರಧಾನಮಂತ್ರಿ ಜನ್ ಧನ್ ಯೋಜನೆಯಡಿ ಸಾಲ ಕೊಡಿಸುವುದಾಗಿ ನಂಬಿಸಿ ಗೃಹಿಣಿಗೆ 1.23 ಲಕ್ಷ ರೂ. ಆನ್‌ಲೈನ್ ಮೂಲಕ ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಜನತಾ ನಗರ ನಿವಾಸಿ ವಿಜಯಲಕ್ಷ್ಮಿ(48) ವಂಚನೆಗೊಳಗಾದವರಾಗಿದ್ದು, ಇವರಿಗೆ ಕರೆ ಮಾಡಿದ ವ್ಯಕ್ತಿ ಜನ್ ಧನ್ ಯೋಜನೆಯಡಿ ಸಾಲ ಕೊಡಿಸುವುದಾಗಿ ತಿಳಿಸಿ ವಾಟ್ಸಾಪ್ ಮೂಲಕ ದಾಖಲೆಗಳನ್ನು ಪಡೆದು, ವಿವಿಧ ಶುಲ್ಕಗಳೆಂದು 1,23,178 ರೂ. ಪಡೆದು ವಂಚಿಸಿದ್ದಾನೆ. ಈ ಸಂಬಂಧ ಮೈಸೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಿರವಿ ಇಟ್ಟಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ನಾಪತ್ತೆ

ಮುತ್ತೂಟ್ ಫಿನ್‌ಕಾರ್ಪ್ ಸಿಬ್ಬಂದಿ ವಿರುದ್ಧ ಕೇಸ್

ಮೈಸೂರು, ಆ.27– ಖಾಸಗಿ ಹಣಕಾಸು ಸಂಸ್ಥೆಯಲ್ಲಿ ಗಿರವಿ ಇಟ್ಟಿದ್ದ 162.5 ಗ್ರಾಂ ಚಿನ್ನಾಭರಣ ನಾಪತ್ತೆಯಾಗಿದ್ದು, ಸಂಸ್ಥೆಯ ಬ್ರಾಂಚ್ ಮ್ಯಾನೇಜರ್ ಸೇರಿದಂತೆ ಐವರು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ಎಸ್.ಆರ್.ರಸ್ತೆಯಲ್ಲಿರುವ ಮುತ್ತೂಟ್ ಫಿನ್‌ಕಾರ್ಪ್‌ನಲ್ಲಿ 2021ರ ಜೂ.7ರಂದು ಅನಿಲ್ ಕುಮಾರ್ ಎಂಬುವರು 162.5 ಗ್ರಾಂ ತೂಕದ ಚಿನ್ನಾಭರಣ ಗಿರವಿ ಇಟ್ಟು 5,08,800 ರೂ. ಸಾಲ ಪಡೆದಿದ್ದರು. 2021ರ ಜುಲೈ 27ರಂದು ಸಲ್ಮಾ ಎಂಬುವರು ಹೊಸದಾಗಿ ಬ್ರಾಂಚ್ ಮ್ಯಾನೇಜರ್ ಆಗಿ ಅಧಿಕಾರ ಸ್ವೀಕರಿಸಿದ್ದು, ಈ ವೇಳೆ ಗೋಲ್ಡ್ ಇನ್ಸ್‌ಪೆಕ್ಟರ್ ಅವರು, ಸಲ್ಮಾ, ಜೈಂಟ್ ಕಸ್ಟೋಡಿಯನ್ ಕೆ.ಪಿ.ಚೇತನ್, ಸಿಬ್ಬಂದಿಗಳಾದ ಪ್ರಭು, ಮಹೇಶ್ವರಿ ಮತ್ತು ಹೆಚ್.ಬಿ.ಚಿಕ್ಕನಾಯ್ಕ ಎಂಬುವರ ಸಮಕ್ಷಮದಲ್ಲಿ ಪರೀಕ್ಷಿಸಿದಾಗ ಮೇಲ್ಕಂಡ ಚಿನ್ನಾಭರಣಗಳು ಇದ್ದವು. ನಂತರ 2021ರ ನವೆಂಬರ್ 20ರಂದು ಮತ್ತೆ ಪರೀಕ್ಷಿಸಿದಾಗ ಈ ಆಭರಣಗಳು ನಾಪತ್ತೆಯಾಗಿದ್ದವು. ಈ ಆಭರಣಗಳಿಗಾದ ಹಣವನ್ನು ಫೈನಾನ್ಸ್‌ಗೆ ಪಾವತಿಸುವುದಾಗಿ ಈ ಎಲ್ಲಾ ಆರೋಪಿಗಳು ತಿಳಿಸಿದ್ದರು. ಆದರೆ, ಹಣ ಪಾವತಿಸದೆ ವಂಚಿಸಿದ್ದಾರೆ ಎಂದು ಸಂಸ್ಥೆಯ ಪ್ರತಿನಿಧಿ ರಿಕ್ಷನ್ ಸಂಪತ್ ನೀಡಿದ ದೂರಿನ ಮೇರೆಗೆ ಬ್ರಾಂಚ್ ಮ್ಯಾನೇಜರ್ ಸೇರಿ ಐವರು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗೆಳೆಯ : ಕವಿತೆಗೂ ಪ್ರಬಂಧಕ್ಕೂ ಏನು ವ್ಯತ್ಯಾಸ?
ಆತ : ಗೆಳತಿ ಬಗ್ಗೆ ಮಾತನಾಡಿದರೆ ಕವಿತೆ,
ಹೆಂಡತಿ ಬಗ್ಗೆ ಮಾತನಾಡಿದರೆ ಪ್ರಬಂಧ!

ಮೈಸೂರು ಮಿತ್ರ
ಭಾನುವಾರ, 28 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಾವಿರಾರು ಜನರನ್ನು ಗೆಲ್ಲುವವನು ವೀರನಲ್ಲ.
ತನ್ನ ಮನಸ್ಸನ್ನು ಗೆಲ್ಲುವವನು ವೀರ. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತೋಟ ಶೃಂಗಾರ ಒಳಗೆ ಗೋಣಿಸೊಪ್ಪು

ನಿಮ್ಮ ಪತ್ರಗಳು

ರಸ್ತೆಯ ಗುಂಡಿಗಳನ್ನು ಮುಚ್ಚಲು ಮನವಿ



ಮಾನ್ಯರೆ,

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಮತ್ತು ಹುರ ಮುಖ್ಯ ರಸ್ತೆಯು ಗುಂಡಿಮಯವಾಗಿದ್ದು, ಕಾರ್ಯ, ಮಾದಾಪುರ ಗ್ರಾಮಗಳಿಗೆ ತೆರಳಲು ವಾಹನ ಸವಾರರು ಹರಸಾಹಸ ಪಡಬೇಕಾಗಿದೆ. ವಾಹನ ಸವಾರರು ಸರ್ಕಸ್ ಮಾಡಿಕೊಂಡು ಜೀವ ಭಯದಿಂದ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಅನೇಕ ಸವಾರರು ಬಿದ್ದು ಕೈ ಕಾಲು ಮುರಿದುಕೊಂಡಿರುವ ಸಾಕಷ್ಟು ಘಟನೆಗಳು ನಡೆದಿವೆ. ಈ ರಸ್ತೆಯು ಅನೇಕ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವುದರ ಮೂಲಕ ಅನೇಕ ರೈತರು ಪ್ರತಿನಿತ್ಯ ಕೆಲಸ ಕಾರ್ಯಗಳಿಗೆ ಬಳಸುವುದರಿಂದ ಸದಾ ವಾಹನಗಳ ಸಂಚಾರವಿರುತ್ತದೆ. ಇಷ್ಟೇ ಅಲ್ಲದೇ ಇದೇ ರಸ್ತೆಯ ದುಗ್ಗಹಳ್ಳಿ ಗೇಟ್, ಪೆಟ್ರೋಲ್ ಬಂಕ್‌ನ ಹತ್ತಿರವಂತೂ ರಸ್ತೆ ಸಂಪೂರ್ಣ ಗುಂಡಿಬಿದ್ದು, ಕೆಸರುಮಯವಾಗಿದೆ. ಇಲ್ಲಿ ಸುಗಮವಾಗಿ ಸಂಚರಿಸಲು ಪ್ರಯಾಸಪಡಬೇಕಾಗಿದೆ. ಮುಖ್ಯ ರಸ್ತೆಯ ಸ್ಥಿತಿ ಈ ರೀತಿ ಆದರೆ, ಇನ್ನು ಗ್ರಾಮಗಳ ರಸ್ತೆಯ ಸ್ಥಿತಿ ಹೇಳತೀರದಾಗಿದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಾಗಲೀ, ಜನಪ್ರತಿನಿಧಿಗಳಾಗಲೀ ಕೂಡಲೇ ಸ್ಪಂದಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ, ಸರಗೂರು ತಾಲೂಕು.

ಯಾರಿಗೆ ಹೇಳಿದರೂ ಏನೂ ಪ್ರಯೋಜನವಿಲ್ಲ!

ಮಾನ್ಯರೆ,

ಮೈಸೂರಿನಲ್ಲಿ ಅದ್ದೂರಿ ದಸರಾ ಆಚರಣೆಗೆ ಜಿಲ್ಲಾಡಳಿತ ಈಗಾಗಲೇ ಪೂರ್ವ ಸಿದ್ಧತಾ ಕಾರ್ಯಗಳಲ್ಲಿ ತೊಡಗಿದೆ. ಒಳ ಚರಂಡಿ ದುರಸ್ತಿ ಮಾಡುತ್ತಿರುವುದು ಮೈಸೂರಿನ ಕೆಲ ಭಾಗಗಳಲ್ಲಿ ಕಂಡುಬರುತ್ತಿದೆ. ಆದರೆ ರಾಮಾನುಜ ರಸ್ತೆಗೆ ಸೇರುವ ಸಿವೇಜ್ ಫಾರಂ ರಸ್ತೆ, ಬೆಸ್ತರ ಬ್ಲಾಕ್‌ನ 6ನೇ ಕ್ರಾಸ್ ಸೇರಿದಂತೆ ವಾರ್ಡ್ ನಂ. 54ಕ್ಕೆ ಸಂಬಂಧಿಸಿದ ಬಹುತೇಕ ರಸ್ತೆಗಳು ಹಾಗೂ ಒಳಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ.

ಮಳೆ ಜೋರಾದಂತೆ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತದೆ. ಚರಂಡಿಯ ನೀರು ಕೆಲ ಮನೆಯೊಳಗೆ ನುಗ್ಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕಾರ್ಪೋರೇಟರ್‌ಗೆ ದೂರವಾಣಿ ಕರೆ, ಪತ್ರ ಮತ್ತು ವಾಟ್ಸಾಪ್ ಮೂಲಕ ಚಿತ್ರ ಮತ್ತು ವಿಡಿಯೋ ಕಳುಹಿಸಿ ಸಮಸ್ಯೆಯನ್ನು ವಿವರಿಸಿ ಹೊಸ ಪೈಪ್‌ಲೈನ್ ಅಳವಡಿಸಿಕೊಡಲು ಕೋರಿದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ.


ಈ ಮೇಲ್ಕಂಡ ರಸ್ತೆಗಳಲ್ಲಿ ಮೋರಿಯ ವ್ಯವಸ್ಥೆಯೂ ಸಹ ಇಲ್ಲದೆ ಇರುವುದರಿಂದ ಮಳೆಯ ನೀರು ಹಾಗೂ ಮ್ಯಾನ್‌ಹೋಲ್‌ನಿಂದ ಉಕ್ಕುವ ಕೊಳಚೆ ನೀರು ಇಲ್ಲಿರುವ ಮನೆ ಬಾಗಿಲಿಗೆ ಬಂದು ನಿಲ್ಲುತ್ತಿದೆ. ಇದರ ಪರಿಣಾಮ ಇಲ್ಲಿನ ನಿವಾಸಿಗಳಿಗೆ ಅನಾರೋಗ್ಯ ಉಂಟಾಗುತ್ತಿದೆ. ಇದಕ್ಕೆ ಯಾರು ಹೊಣೆ? ಆದ್ದರಿಂದ ಕೂಡಲೇ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ತನುಜ್ ಎಂ.ಪಿ, ವಿದ್ಯಾರಣ್ಯಪುರಂ, ಮೈಸೂರು.

ಎಟಿಎಂ ಎಚ್ಚರಿಕೆಯ ಗಂಟೆ, ಜನರ ಸಾಮಾಜಿಕ ಪ್ರಜ್ಞೆ!

ಮಾನ್ಯರೆ,

ನಾನು ಮೈಸೂರಿನ ಚಾಮರಾಜಪುರಂ ಜಯಲಕ್ಷ್ಮಿ ವಿಲಾಸ ರಸ್ತೆಯಲ್ಲಿರುವ



ಎಸ್‌ಬಿಐನ ಎಟಿಎಂ ಅನ್ನು ಬಳಸುತ್ತಿದ್ದೇನೆ. ಹಣ ತೆಗೆಯುವಾಗ ಎಚ್ಚರಿಕೆಯ (ಸೈರನ್) ಗಂಟೆ ಇದ್ದಕ್ಕಿದ್ದಂತೆ ಮೊಳಗಿತು. ಈ ಅನುಭವ ಇದೇ ಮೊದಲಲ್ಲ. ಹಿಂದೆಯೂ ಆಗಿದೆ! ಎಚ್ಚರಿಕೆಯ ಗಂಟೆ ಮೊಳಗಿದ ನಂತರ ನಾನು ಹೊರಗೆ ಬಂದು ನೋಡಿದೆ. ಬಹಳಷ್ಟು ಜನರಿದ್ದರೂ ಅವರಿಗೇನೂ ಆಗದ ಹಾಗೆ ಆರಾಮವಾಗಿ ನಿಂತಿದ್ದರು. ಎಚ್ಚರಿಕೆಯ ಗಂಟೆ ಮೊಳಗಿದರೆ ಏನೋ ಆಗಬಾರದ್ದು ಆಗಿದೆ. ಬಂದು ನೋಡಬೇಕು ಎನ್ನುವ ಕಾಳಜಿಯೇ ಯಾರಿಗೂ ಇದ್ದಂತಿರಲಿಲ್ಲ. ಜನರು ಬಾರದಿದ್ದರೂ ಆ ಬೃಹತ್ ಕಟ್ಟಡದಲ್ಲಿ ಇರುವ ಭದ್ರತಾ ಸಿಬ್ಬಂದಿಯಾದರೂ ಏನಾಯಿತೆಂದು ನೋಡಲು ಬಂದರೇ? ಅದೂ ಇಲ್ಲ. ಬ್ಯಾಂಕಿನ ಸಿಬ್ಬಂದಿ ಸೈರನ್‌ನಲ್ಲಿರಬಹುದಾದ ನ್ಯೂನತೆಯನ್ನು ಸರಿಪಡಿಸಬೇಕೆಂದು ನನ್ನ ಮನವಿ.


–ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು

ರಾಜ್ಯದಲ್ಲಿ ಡೆಂಗ್ಯೂ ಪ್ರಕರಣ ಹೆಚ್ಚಳ

ಮಾನ್ಯರೆ,

ರಾಜ್ಯದಲ್ಲಿ 4055 ಡೆಂಗ್ಯೂ ಪ್ರಕರಣ ದೃಢಪಟ್ಟಿದ್ದು, 8 ಮಂದಿ ಮೃತಪಟ್ಟಿದ್ದಾರೆ. ಹವಾಮಾನ ವೈಪರೀತ್ಯ ಮತ್ತು ವಿಪರೀತ ಮಳೆಯಿಂದ ಡೆಂಗ್ಯೂ ಜ್ವರಕ್ಕೆ ಕಾರಣವಾಗಿರುವ ಈಡಿಸ್ ಈಜಿಪ್ಟಿ ಸೊಳ್ಳೆ ಉತ್ಪತ್ತಿ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗ ಹಬ್ಬುತ್ತಿದೆ. ಹೀಗಾಗಿ, ಡೆಂಗ್ಯೂವಿನಿಂದ ಪಾರಾಗಲು ಸೊಳ್ಳೆ ಕಚ್ಚದಂತೆ ಎಚ್ಚರ ವಹಿಸಬೇಕು. ಮನೆ ಮುಂಭಾಗ, ಹೂ ಕುಂಡಗಳಲ್ಲಿ, ತೆಂಗಿನ ಚಿಪ್ಪು ಸೇರಿದಂತೆ ಮತ್ತಿತರ ಸ್ಥಳಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.

– ಸಾಗರ್. ಕೆ.ಎನ್., ಮಹಾರಾಜ ಕಾಲೇಜು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಬದಲಾವಣೆ ಸಹಜ. ಆದರೂ...

ಬದಲಾವಣೆಯನ್ನು ಪ್ರಕೃತಿಯ ನಿಯಮ ಎಂದು ಹೇಳುತ್ತೇವೆ. ಪ್ರತಿವರ್ಷ ಚೈತ್ರ ಮಾಸದಲ್ಲಿ ಚಿಗುರುವ ಮರಗಿಡಗಳು, ಚಳಿಗಾಲದ ವೇಳೆಗೆ ತಮ್ಮ ಒಣಗಿದ ಎಲೆಗಳನ್ನು ಉದುರಿಸಿ ಮತ್ತೆ ಚಿಗುರೊಡೆಯಲು ಸಜ್ಜಾಗುತ್ತವೆ. ಇದನ್ನೇ ನಾವು ಜಗದ ನಿಯಮ ಎನ್ನುತ್ತೇವೆ. ಮನುಷ್ಯನಿಗೂ ವರ್ಷದಿಂದ ವರ್ಷಕ್ಕೆ ವಯಸ್ಸಾಗುತ್ತಾ ಹೋಗುತ್ತದೆ, ಹಿಂದಿನ ಐದು ವರ್ಷಕ್ಕೆ ಹೋಲಿಸಿದರೆ ಮನುಷ್ಯನ ನಡವಳಿಕೆಗಳಲ್ಲಿ ಹಲವು ಬದಲಾವಣೆಗಳನ್ನು ಕಾಣಬಹುದು. ಹತ್ತು ವರ್ಷದ ಹಿಂದಕ್ಕೆ ಹೋಲಿಸಿದರೆ ಮಧ್ಯವಯಸ್ಕರು ಶಕ್ತಿ ಕಳೆದುಕೊಂಡಂತೆ ಭಾಸವಾಗುತ್ತದೆ. ಹಿಂದಿನಂತೆ ಚಟುವಟಿಕೆಯಿಂದ ಇರಲಾಗುವುದಿಲ್ಲ. ನನಗೆ ಈ ಹಿಂದೆ ಹೀಗಾಗಿರಲಿಲ್ಲ, ಅದೇಕೋ ಈಗ ಹೀಗಾಯಿತು ಎಂದು ಚಡಪಡಿಸುವವರು ಎಲ್ಲೆಲ್ಲೂ ಕಾಣಸಿಗುತ್ತಾರೆ. ಇದಕ್ಕೆ ತಮಗೆ ವಯಸ್ಸಾಯಿತು ಎಂದು ಅವರು ಅಂದುಕೊಳ್ಳುವುದಿಲ್ಲ. ಮನಸ್ಸಿನಲ್ಲಿ ನಾನಿನ್ನೂ ಯುವಕನೇ ಎಂದುಕೊಂಡಿರುತ್ತಾರೆ. ಆದರೆ ದೇಹ ಹಾಗೆ ವರ್ತಿಸುವುದಿಲ್ಲ. ನಮ್ಮ ಮನಸ್ಸಿಗೆ ವಯಸ್ಸಾಗದಿದ್ದರೂ ದೇಹಕ್ಕೆ ವಯಸ್ಸಾಗುತ್ತಾ ಹೋಗುತ್ತದೆ. ಆಗ ಮನಸ್ಸು ಹೇಳಿದಂತೆ ಕೇಳಲಾಗುವುದಿಲ್ಲ, ಬದಲಿಗೆ ದೇಹ ಹೇಳಿದಂತೆ ಮನಸ್ಸು ಯೋಚಿಸಬೇಕಾಗುತ್ತದೆ. ಇದನ್ನು ಒಪ್ಪಿಕೊಳ್ಳಬೇಕು. ನಾವು ಯಾವಾಗಲೂ ಯುವಕರಾಗೇ ಇರಲು ಸಾಧ್ಯವಿಲ್ಲ. ಹಾಗೆಂದು ಮುದುಕರು ಎಂದು ಒಪ್ಪಿಕೊಳ್ಳಬೇಕೆಂದಿಲ್ಲ, ಆದರೆ ದೇಹಕ್ಕೆ ವಯಸ್ಸಾಗಿದೆ ಎಂಬುದನ್ನಂತೂ ಒಪ್ಪಿಕೊಳ್ಳಲೇಬೇಕು. ವಯೋಮಾನಕ್ಕೆ ಅನುಗುಣವಾದ ಆಹಾರ ಹಾಗೂ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಮುಖ್ಯವಾಗಿ ಮಾನಸಿಕ ನೆಮ್ಮದಿಯೆಡೆಗೆ ಸಾಗಬೇಕು.

ನಮಗೆ ಸಾಮಾನ್ಯವಾಗಿ ಬದಲಾವಣೆಯಾಗುತ್ತಿರಬೇಕು ಎನಿಸುವುದನ್ನು ತಪ್ಪು ಎಂದು ಹೇಳಲಾಗುವುದಿಲ್ಲ. ಆದರೆ ಆ ಬದಲಾವಣೆ ವಯೋಮಾನಕ್ಕೆ ಅನುಗುಣವಾಗಿರಬೇಕು ಎಂಬುದು ಅಪೇಕ್ಷಣೀಯ. ನಮ್ಮಲ್ಲಿ ದುಡ್ಡು ಸೇರಿದಂತೆ ಏನೆಲ್ಲಾ ಬದಲಾವಣೆಗೊಳ್ಳಬೇಕು ಎನಿಸುತ್ತದೆ, ಆದರೆ ಅದು ಆ ವಯೋಮಾನಕ್ಕೆ ತಕ್ಕುದೇ? ಎಂಬುದು ವಿವೇಚನೆಯ ವಿಷಯವಾಗುತ್ತದೆ.

ಈಗಿನ ಯುವಪೀಳಿಗೆ ಕೈಯಲ್ಲಿ ಹಣ ಸೇರುತ್ತಿದ್ದಂತೆಯೇ ಎಲ್ಲವನ್ನೂ ಬದಲಿಸಬೇಕು ಎಂಬ ಹಂಬಲ ವ್ಯಕ್ತಪಡಿಸುತ್ತಾರೆ. ಅದು ಮನೆಯ ಕಟ್ಟಡದಿಂದ ಹಿಡಿದು, ಮನೆಯ ಪೀಠೋಪಕರಣಗಳವರೆಗೆ, ಪಾತ್ರೆಗಳವರೆಗೆ ಎಲ್ಲವನ್ನೂ ಬದಲಿಸಬೇಕೆಂಬ ಧಾವಂತ. ಆದರೆ ಮುಂದಿನ ಜೀವನ ಏನು? ಎಂಬ ಬಗ್ಗೆ ಆ ಸಮಯದಲ್ಲಿ ಯೋಚನೆ ಬರುವುದಿಲ್ಲ. ಎಲ್ಲೋ ನೋಡಿದ, ಎಲ್ಲೋ ಕೇಳಿದ ವಸ್ತುಗಳನ್ನು ತರಬೇಕು, ನಾಲ್ಕು ಜನ ನಮ್ಮನ್ನು ನೋಡಿ ಮೆಚ್ಚಬೇಕು, ನಾವು ಶ್ರೀಮಂತರಂತೆ ಕಾಣಬೇಕು ಎಂಬ ಹಂಬಲ ಅವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಮನೆಯ ಹಿರಿಯರಿಗೆ ಇಷ್ಟವಾಗಿರುವುದಿಲ್ಲ. ಆದರೆ ಹಾಗೆಂದು ಹೇಳಿದರೆ ಮಗ/ಮಗಳು ಎಲ್ಲಿ ತಪ್ಪು ತಿಳಿದುಕೊಂಡುಬಿಡುತ್ತಾರೋ? ಎಂಬ ಆತಂಕ. ಅವರಿಗೆ ಸಾಮಾನ್ಯವಾಗಿ ಹಳೆಯ ವಸ್ತುಗಳ ಬಗ್ಗೆ ಇಷ್ಟ, ಇದಕ್ಕೆ ಹಲವು ಕಾರಣಗಳಿರಬಹುದು. ಅದನ್ನು ತಾನು ಕಷ್ಟಪಟ್ಟು ಸಂಪಾದಿಸಿ ತಂದಿದ್ದು, ಆದ್ದರಿಂದ ಅದನ್ನು ಬದಲಿಸಬಾರದು. ಈಗ ಅದು ಉಪಯೋಗಕ್ಕೆ ಬರುತ್ತಿದೆಯಲ್ಲವೇ? ಹಾಗಿದ್ದರೆ ಅದನ್ನು ಬದಲಿಸುವ ಅಗತ್ಯವೇನು? ಹೊಸದಾಗಿ ಸಾಮಾನು, ಸರಂಜಾಮು ತರುವುದು ಸರಿ. ಆದರೆ ಹಳೆಯದನ್ನು ಏನು ಮಾಡುವುದು? ಹಳೆಯದನ್ನೇ ಉಪಯೋಗಿಸೋಣ ಎಂದರೆ ಹೊಸದನ್ನು ಏನು ಮಾಡುವುದು? ಹೊಸದು ತಂದಾಗಿದೆ. ಹಳೆಯದನ್ನೇ ಉಪಯೋಗಿಸುತ್ತೇವೆ ಎಂದರೆ ಮಕ್ಕಳು ಏನೆನ್ನುತ್ತಾರೆ/ ಹೊಸದು ಬಂದ ಮೇಲೂ ಹಳೆಯದನ್ನು ಉಪಯೋಗಿಸುವುದು ಎಷ್ಟು ಸರಿ? ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದಕ್ಕೆ ಹಿರಿಯರಿಗೆ ಬರುವುದಿಲ್ಲ ಎಂಬ ಅಪವಾದವನ್ನೂ ಕೇಳಬೇಕಾಗುತ್ತದೆ. ಆಯಿತು, ಹಳೆಯದು ಬೇಡ ಎಂದಾದರೆ ಅದನ್ನು ಇಟ್ಟುಕೊಳ್ಳುವ ಹಾಗಿಲ್ಲ. ಅದನ್ನು ಬೇರೆಯವರು ತೆಗೆದುಕೊಳ್ಳುವುದಿಲ್ಲ. ಮಾರೋಣ ಎಂದರೆ ಹಿಂದೆ ನೀಡಿದ್ದ ಹಣದ ಶೇಕಡಾ ಹತ್ತರಷ್ಟೂ ಹಣ ಬರುವುದಿಲ್ಲ. ಅದು ತಾನು ಕಷ್ಟಪಟ್ಟು ಸಂಪಾದಿಸಿದ್ದು, ಎಷ್ಟಕ್ಕೋ ಅದನ್ನು ಕೊಟ್ಟುಬಿಡಲು ಮನಸ್ಸು ಒಪ್ಪುವುದಿಲ್ಲ. ಹೀಗೆ ಸಂದಿಗ್ಧಗಳು. ಕೊಡುವಂತಹ ಉದಾರತೆ ಇದ್ದರೆ ಅದನ್ನು ಅಗತ್ಯವಿರುವವರಿಗೆ, ಅಂದರೆ ನಮ್ಮ ಮನೆಗೆಲಸಕ್ಕೆ ಬರುವವರಿಗೆ ಕೊಡಬಹುದು. ಅವರಾದರೂ ಅದನ್ನು ಕೃತಜ್ಞತೆಯಿಂದ ಉಪಯೋಗಿಸುತ್ತಾರೆ. ಆದರೆ ಕೊಡುವ ಮನಸ್ಸು ಎಷ್ಟು ಜನರಿಗೆ ಇರುತ್ತದೆ? ಕೊನೆಗೆ 5 ಸಾವಿರ ಕೊಟ್ಟು ತಂದಿದ್ದ ವಸ್ತುವಿಗೆ ಐದು ನೂರು ರೂಪಾಯಿಯೂ ಬರುವುದಿಲ್ಲ. ಆಗ ಅನ್ಯಾಯವಾಗಿ ಅದು ಚೆನ್ನಾಗಿದ್ದರೂ ಹೊಸದನ್ನು ತಂದ ಮಕ್ಕಳ ಬಗ್ಗೆ ಬೇಸರವಾಗುತ್ತದೆ. ಆಗ ಮಕ್ಕಳು ಕೊಡುವ ಉತ್ತರ ಏನಿರುತ್ತದೆ? ಈಗ ಜಗತ್ತು ಬದಲಾಗಿದೆ, ನಾವೂ ಬದಲಾಗಬೇಕು, ಹಿಂದೆ ನಮಗೆ ಅಷ್ಟೊಂದು ಆರ್ಥಿಕ ಶಕ್ತಿ ಇರಲಿಲ್ಲ. ಈಗ ಆ ಶಕ್ತಿ ಬಂದಿದೆ. ಅದನ್ನು ಉಪಯೋಗಿಸಬೇಡವೇ? ಎಂದಾಗ ಹಿರಿಯರು ನಿರುತ್ತರರಾಗಬೇಕಾಗುತ್ತದೆ. ಕೊನೆಗೆ ಒಪ್ಪಿಗೆ ಇಲ್ಲದಿದ್ದರೂ ಹೊಸದಕ್ಕೆ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಆದರೆ ಮನಸ್ಸು ಅದನ್ನು ಅಷ್ಟು ಸುಲಭವಾಗಿ ಜೀರ್ಣಿಸಿಕೊಂಡಿರುವುದಿಲ್ಲ.

> ನಮಗೆ ಸಾಮಾನ್ಯವಾಗಿ ಬದಲಾವಣೆಯಾಗುತ್ತಿರಬೇಕು ಎನಿಸುವುದನ್ನು ತಪ್ಪು ಎಂದು ಹೇಳಲಾಗುವುದಿಲ್ಲ. ಆದರೆ ಆ ಬದಲಾವಣೆ ವಯೋಮಾನಕ್ಕೆ ಅನುಗುಣವಾಗಿರಬೇಕು ಎಂಬುದು ಅಪೇಕ್ಷಣೀಯ. ನಮ್ಮಲ್ಲಿ ದುಡ್ಡು ಸೇರಿದಂತೆ ಏನೆಲ್ಲಾ ಬದಲಾವಣೆಗೊಳ್ಳಬೇಕು ಎನಿಸುತ್ತದೆ, ಆದರೆ ಅದು ಆ ವಯೋಮಾನಕ್ಕೆ ತಕ್ಕುದೇ? ಎಂಬುದು ವಿವೇಚನೆ ವಿಷಯವಾಗುತ್ತದೆ.

ಇತ್ತೀಚೆಗೆ ಓದಿದ ಒಂದು ಕಥೆ ಇದಕ್ಕೆ ಪೂರಕವೆಂಬಂತೆ ಇದೆ. ಒಂದು ಕುಟುಂಬ, ಬಡತನದ್ದು, ತಂದೆ ಕಷ್ಟಪಟ್ಟು ಮಕ್ಕಳನ್ನು ಓದಿಸಿದ್ದ. ಅವನ ಒಬ್ಬ ಹೆಣ್ಣುಮಗಳು ತನಗೆ ಕೆಲಸ ಸಿಕ್ಕಿದ ನಂತರ ಮೊದಲ ಸಂಬಳದಲ್ಲಿ ತಂದೆಗೆ ಇಪ್ಪತ್ತೈದು ಸಾವಿರದ ಒಂದು ಮೊಬೈಲ್ ತಂದುಕೊಟ್ಟಳು. ಈ ಬಗ್ಗೆ ತನ್ನ ವಾಟ್ಸಾಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡು ಬಹಳ ಜನರ ಮೆಚ್ಚುಗೆ ಪಡೆದಳು. ಅಪ್ಪ ಕಷ್ಟಪಟ್ಟು ತನ್ನನ್ನು ಓದಿಸಿದ್ದು ಅವಳಿಗೆ ಗೊತ್ತಿತ್ತು. ಆದರೆ ಕೆಲವು ದಿನ ಕಳೆದರೂ ತಂದೆ ಆ ಹೊಸ ಮೊಬೈಲ್ ಉಪಯೋಗಿಸದಿದ್ದುದನ್ನು ಕಂಡಾಗ ಅವಳಿಗೆ ಕೋಪ ಬಂತು. ಬದಲಿಗೆ ಹಳೆಯ (ಅವಳ ಭಾಷೆಯಲ್ಲಿ ಡಬ್ಬ ಮೊಬೈಲ್) ಉಪಯೋಗಿಸುತ್ತಿದ್ದನ್ನು ಕಂಡು ಅವಳಿಗೆ ಕೋಪ ಬಂತು. ಅವಳು ಅವರ ಹಳೆಯ ಮೊಬೈಲ್ ಕಿತ್ತುಕೊಂಡು ಅದನ್ನು ಎಸೆದು ಒಡೆದು ಹಾಕಿದಳು. ಇದನ್ನು ಕಂಡು ತಾಯಿಗೆ ಕೋಪ ಬಂದಿತು. ಅವರು ಮಗಳನ್ನು ಏಕಾಂತದಲ್ಲಿ ಕರೆದು 'ನೀನು ಮಾಡಿದ್ದು ಸರಿಯಲ್ಲ. ನಿನ್ನ ಓದಿಗಾಗಿ ಮಾಡಿದ ಸಾಲವನ್ನು ಅವರು ಇಂದಿಗೂ ತೀರಿಸುತ್ತಿದ್ದಾರೆ. ಅವರು ನೀನು ಕೊಟ್ಟ ಮೊಬೈಲ್ ಬಳಸಬಾರದೆಂದಿಲ್ಲ. ಆದರೆ ಅವರಿಗೆ ಕಣ್ಣಿನ ಸಮಸ್ಯೆಯಿದೆ. ಅವರು ಹಳೆಯ ಮೊಬೈಲನ್ನು ಐದು ವರ್ಷದಿಂದ ಬಳಸುತ್ತಿದ್ದಾರೆ. ಅವರಿಗೆ ಬೇರೆ ಕನ್ನಡಕ ಬೇಕು. ಆದರೆ ಕೊಳ್ಳಲಾಗದು. ಹಳೆಯ ಮೊಬೈಲನ್ನು ಹೇಗೋ ಅವರು ಬಳಸುತ್ತಿದ್ದರು. ನೀನು ಅವರ ಹಳೆಯ ಮೊಬೈಲನ್ನು ಒಡೆದು ಹಾಕುವ ಬದಲು, ನಿನಗೆ ಸಂಬಳ ಬಂದಾಗ ಅವರಿಗೆ ಏನು ಬೇಕು? ಎಂದು ಕೇಳಬಹುದಾಗಿತ್ತು. ಹಾಗೆ ಮಾಡದೇ ನಿನ್ನ ದೊಡ್ಡಸ್ತಿಕೆ ತೋರಿಸಿದೆ ಎಂದು ಹೇಳಿದಳು. ಇದನ್ನು ಕೇಳಿ ಮಗಳಿಗೆ ನಾಚಿಕೆ ಹಾಗೂ ಜ್ಞಾನೋದಯವಾಯಿತು, ತಂದೆಯ ಹಳೆ ಮೊಬೈಲ್ ರಿಪೇರಿ ಮಾಡಿಸಿದ್ದೇ ಅಲ್ಲದೆ ಅವರಿಗೆ ಹೊಸ ಕನ್ನಡಕ ಕೊಡಿಸಿದಳು. ಆಗ ತಂದೆಯ ಮುಖದಲ್ಲಿ, ಮಗಳ ಮುಖದಲ್ಲಿ, ತಾಯಿಯ ಮುಖದಲ್ಲಿ ಮಂದಹಾಸ ಮೂಡಿತು ಎಂಬುದು ಕಥೆ.

ಇದನ್ನು ಇಂದಿನ ಪೀಳಿಗೆ ಗಮನಿಸಬೇಕು. ವಯಸ್ಸಾದರೂ ಅವರು ಯಾರಿಗೂ ಹೇಳದೇ, ತಾವು ಮಕ್ಕಳಿಗಾಗಿ ಮಾಡಿದ್ದ ಸಾಲ, ಮನೆ ಕಟ್ಟಲು ಮಾಡಿದ್ದ ಸಾಲ ತೀರಿಸುತ್ತಿರುತ್ತಾರೆ. ಬದಲಾಗಿ ಮಕ್ಕಳು ಮನೆಯಲ್ಲಿ ಉಪಯೋಗಿಸುತ್ತಿರುವ ಸಾಮಾನಿಗೆ ಬದಲಾಗಿ ಹೊಸದನ್ನು ತಂದಾಗ ಅವರಿಗೆ ಉಭಯ ಸಂಕಟವಾಗುತ್ತದೆ. ಬದಲಾವಣೆ ಬೇಡವೆಂದಲ್ಲ, ಅದರೆ ಅದರ ಅವಶ್ಯಕತೆ ಏನು? ಎಂಬುದು ಅವರ ಚಿಂತನೆಯಾಗಿರುತ್ತದೆ.

ಮಕ್ಕಳು ಹೊಸದಾಗಿ ಯಾವುದೋ ಜಾಹೀರಾತು ನೋಡಿ ತಾವೂ ಅದರಂತೆ ಇರಬೇಕು ಎಂದು ಬಯಸುತ್ತಾರೆ. ಮನೆಗೆ ಏರ್‌ಕಂಡಿಷನರ್ ಬೇಕು, ದೊಡ್ಡದಾದ ಫ್ರಿಜ್ ಬೇಕು, ಮನೆಯಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ ಅದನ್ನು ಒಡೆದು ಬೇರೆ ಕಟ್ಟಬೇಕು ಎಂದೆಲ್ಲಾ ಬಯಸುತ್ತಾರೆ. ಆದರೆ ಅದು ತಮಗೆ ಅನುಕೂಲಕ್ಕಿಂತ ಇತರರು ನೋಡಿ ಹೊಗಳಲಿ ಎಂಬ ಉದ್ದೇಶ ಹೊಂದಿರುತ್ತದೆ. ತಾವು ಯಾವುದನ್ನೇ ಬದಲಿಸುವ ಮುಂಚೆ ತಮ್ಮ ತಂದೆತಾಯಿಯರೊಡನೆ ಸಮಾಲೋಚಿಸುವುದು ಒಳಿತು. ಇರಬಹುದು, ಅವರಿಗೆ ಜೀವನದಲ್ಲಿ ವೈಭವದಿಂದ ಇರಬೇಕು ಎನಿಸುವುದು ತಪ್ಪಲ್ಲ, ಆದರೆ ಅದರ ಅವಶ್ಯಕತೆ ಹಾಗೂ ಅನಿವಾರ್ಯತೆ ಬಗ್ಗೆಯೂ ಚಿಂತಿಸಬೇಕು. ಸರಳತೆ ಎಂಬುದು ಬಡತನದ ಸಂಕೇತವಲ್ಲ. ಅದು ನಮ್ಮ ನಡವಳಿಕೆಗೆ ಸಂಬಂಧಿಸಿದ್ದು. ಸರಳತೆಯಲ್ಲಿ ಬದುಕುವವರನ್ನೂ ಈ ಸಮಾಜ ಇಷ್ಟಪಡುತ್ತದೆ ಎಂಬುದನ್ನು ಗಮನಿಸಬೇಕು. ಮನೆಗೆ ದೊಡ್ಡ ದೊಡ್ಡ, ಆದರೆ ಅಗತ್ಯವಿರದ ವಸ್ತು ತಂದಾಗ ಅದು ಸಂತೋಷ ನೀಡುವ ಬದಲು ಹೊರೆಯಾಗುತ್ತದೆ.

ನಮ್ಮ ಮತ್ತೊಂದು ನಡೆ ಎಂದರೆ ಯಾರೋ ಹೇಳಿದರು, ನಮ್ಮ ಮನೆಯ ವಾಸ್ತು ಸರಿಯಿಲ್ಲವಂತೆ ಎಂದು ಮನೆ ಒಡೆಸುವುದು ಸೂಕ್ತವಾಗುವುದಿಲ್ಲ. ಶಾಸ್ತ್ರ ಹೇಳುವುದು ಏನೆಂದರೆ ಮನೆಯಲ್ಲಿ ಅರವತ್ತು ವರ್ಷಕ್ಕೆ ಮೀರಿದವರು ಆರೋಗ್ಯವಾಗಿದ್ದರೆ, ಅಂತಹ ಮನೆಯ ವಾಸ್ತು ಗಮನಿಸಬೇಕಾಗಿಲ್ಲ ಎಂದು. ಏಕೆಂದರೆ ಅವರ ಬದುಕೇ ಆ ಮನೆಯ ವಾಸ್ತು ಎಂದು ಪರಿಗಣಿತವಾಗುತ್ತದೆ. ಇಲ್ಲಿ ವಿವೇಚನೆ ಮುಖ್ಯ. ಮನೆಯನ್ನು ಒಡೆದು ಕಟ್ಟಬೇಕು ಎಂದಾದಾಗ ಸಾಲಸೋಲ ಮಾಡಿ ಮಾಡಿದರೆ ಅವರ ಮನಸ್ಥಿತಿ ಸಾಲ ತೀರಿಸುವವರೆಗೆ ಹೇಗೆ ಹೊಸದನ್ನು ಅನುಭವಿಸಲು ಒಪ್ಪುತ್ತದೆ? ಎಂಬುದನ್ನು ಅರಿಯಬೇಕು.

ಮನೆಯಲ್ಲಿ ಗಂಡ ಹೆಂಡತಿಯರ ನಡುವೆ ಯಾವಾಗಲೂ ಜಗಳ. ಅದಕ್ಕೆ ಕಾರಣ ವಾಸ್ತು ಎಂದು ಯಾರೋ ಹೇಳಿದರು ಎಂದು ಮನೆ ಒಡೆಸುವ ಬದಲು, ಗಂಡ–ಹೆಂಡತಿ ಇಬ್ಬರೂ ಕುಳಿತು ನಮ್ಮಲ್ಲಿ ಏಕೆ ಜಗಳವಾಗುತ್ತಿದೆ? ಏನು ಮಾಡಿದರೆ ಸರಿ ಹೊಂದುತ್ತದೆ? ಎಂದು ಕುಳಿತು ಯೋಚಿಸಿದರೆ ಮುಂದೆ ಯಾವ ಸಮಸ್ಯೆಯೂ ಉದ್ಭವಿಸುವುದಿಲ್ಲ. ಅನೇಕ ಸಲ ಯಾರದ್ದೋ ಮಾತು ಕೇಳಿ ಮನೆಯೊಡೆಸಿದರೂ, ಹಿಂದಿನ ಸ್ಥಿತಿಯಲ್ಲಿ ವ್ಯತ್ಯಾಸವಾಗುವುದಿಲ್ಲ. ಇನ್ನಾರೋ ಹೇಳಿದರು ಎಂದು ಮತ್ತೆ–ಮತ್ತೆ ಮನೆ ಒಡೆಸಲಾಗುವುದೇ? ಇಲ್ಲಿ ಬದಲಾವಣೆ ಆಗಬೇಕಾಗಿದ್ದು ನಮ್ಮ ಯೋಚನಾ ವಿಧಾನದಲ್ಲಿ, ಬದಲಾವಣೆಯಾಗಬೇಕಾಗಿದ್ದು ನಮ್ಮ ಮನಸ್ಥಿತಿಯಲ್ಲಿ. ಎಲ್ಲವನ್ನೂ ಬದಲಿಸಬೇಕೆಂಬುದನ್ನು ಬಿಟ್ಟು ನಮ್ಮ ಸ್ವಭಾವ, ನಮ್ಮ ಮನಸ್ಥಿತಿ ಬದಲಿಸಿಕೊಳ್ಳಬೇಕು. ನಮ್ಮ ಮನೆ, ನನ್ನ ಇಷ್ಟದಂತೆ ನಡೆಯಬೇಕಾದರೆ ನನ್ನ ಮನೆಯಲ್ಲಿರುವವರ ಸಹಕಾರ ಮುಖ್ಯ. ಗುಡಿಸಲಲ್ಲಿ ಇರುವವರು ನಗುನಗುತ್ತಾ ಇದ್ದಾರೆ ಎಂದರೆ ಅವರು ಇಂತಹುದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ಅರ್ಥ. ಏಕೆಂದರೆ ಅವರಿಗೆ ಅವರ ಬಗ್ಗೆ ವಿಶ್ವಾಸವಿರುತ್ತದೆ. ಮಕ್ಕಳು ಮಾಡುವುದು ಸರಿಯಲ್ಲ ಎಂದು ತಂದೆತಾಯಿ ಯೋಚಿಸಬಾರದು, ಹಾಗೇ ತಂದೆತಾಯಿಯರಿಗೆ ಏನೂ ಗೊತ್ತಿಲ್ಲ ಎಂದು ಮಕ್ಕಳೂ ಭಾವಿಸಬಾರದು. ಯಾವುದಕ್ಕೂ ಕೂತು ಮಾತನಾಡುವುದರಲ್ಲಿ ಖಂಡಿತಾ ಪರಿಹಾರವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇತರರ ಮಾತು ನಮಗೆ ಸಹ್ಯವಾಗುವುದಾದರೆ, ಮನೆಯವರ ಮಾತು ಏಕೆ ಸಹ್ಯವಾಗಬಾರದು? ಇಲ್ಲಿ ಮನಸ್ಥಿತಿ ಮುಖ್ಯ. ವಾಸ್ತು ಇತ್ಯಾದಿಗಳ ಬಗ್ಗೆ ಸಲಹೆ ಕೊಡುವವರಿಗೆ ಅದರ ಬಗ್ಗೆ ಎಷ್ಟು ಜ್ಞಾನವಿದೆ? ಎಂಬುದನ್ನೂ ಗಮನಿಸಬೇಕು, ಯಾರೋ ಹೀಗೆ ಮಾಡಿದರು, ಅದರಿಂದ ಅವರಿಗೆ ಅನುಕೂಲವಾಯಿತು. ಆದ್ದರಿಂದ ನೀವೂ ಹಾಗೆ ಮಾಡಿ ಎನ್ನುವವರು ಜಾಸ್ತಿ. ಅಂತಹುದಕ್ಕೆ ತಲೆಕೆಡಿಸಿಕೊಳ್ಳುವ ಬದಲು ಮನೆಯವರೊಡನೆ ಕುಳಿತು ಸಮಾಲೋಚಿಸಬೇಕು. ಮನೆಯಲ್ಲಿ ನೆಮ್ಮದಿ ಸಿಗುವುದು ಮನೆಯರಿಂದಲೇ ಎಂಬುದನ್ನೂ ಅರ್ಥ ಮಾಡಿಕೊಳ್ಳಬೇಕು.

ರಾಹುಲ್ ಗಾಂಧಿ ಭಾರತ್ ಜೋಡೋ ಅಭಿಯಾನ ಆರಂಭಿಸಿದರೆ; ಮತ್ತೊಂದೆಡೆ ಕಾಂಗ್ರೆಸ್ ಚೋಡೋ ಅಭಿಯಾನ ಆರಂಭವಾಗಿದೆ!

ಮಾಜಿ ಸಚಿವ ಸಿ.ಎಚ್. ವಿಜಯಶಂಕರ್ ಲೇವಡಿ

ಮೈಸೂರು,ಆ.27(ಜಿಎ)–ರಾಹುಲ್ ಗಾಂಧಿ ಅವರು ಒಂದು ಕಡೆ ಭಾರತ್ ಜೋಡೋ ಅಭಿಯಾನ ಆರಂಭಿಸಿದರೆ, ಮತ್ತೊಂದೆಡೆ ಕಾಂಗ್ರೆಸ್ ಚೋಡೋ ಅಭಿಯಾನ ಆರಂಭವಾಗಿದ್ದು, ಕಾಂಗ್ರೆಸ್ ಪಕ್ಷ ದೇಶದಾದ್ಯಂತ ಶೇ.80 ರಷ್ಟು ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ರಾಷ್ಟ್ರೀಯ ಪಕ್ಷವಾಗಿದ್ದ ಕಾಂಗ್ರೆಸ್ ಪ್ರಾದೇಶಿಕ ಪಕ್ಷವಾಗುತ್ತಿದೆ ಎಂದು ಮಾಜಿ ಸಚಿವ ಸಿ.ಎಚ್.ವಿಜಯಶಂಕರ್ ಲೇವಡಿ ಮಾಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಕುಟುಂಬ ಆಧರಿತ ರಾಜಕಾರಣ ಹಾಗೂ ಆಂತರಿಕ ಪ್ರಜಾಪ್ರಭುತ್ವ ಇಲ್ಲದಿರುವುದೇ ಕಾಂಗ್ರೆಸ್ ಈಗ ಪ್ರಾದೇಶಿಕ ಪಕ್ಷದ ಸ್ಥಿತಿಗೆ ಇಳಿಯಲು ಕಾರಣವಾಗಿದೆ. ಗುಲಾಂ ನಬಿ ಆಜಾದ್ ಸೇರಿ 23 ನಾಯಕರು ಪಕ್ಷ ಬಿಡುವ ಸ್ಥಿತಿ ತಲುಪಿದೆ. ವೀರಪ್ಪಮೊಯ್ಲಿ ಅವರನ್ನು ಒಳಗೊಂಡಂತೆ 23 ಮಂದಿ ನಾಯಕರು ಕಾಂಗ್ರೆಸ್ ಒಳಗೆ ಜಿ–23 ಎಂಬ ಸಂಘಟನೆ ಮಾಡಿಕೊಂಡು ಪಕ್ಷ ಬಿಡಲು ಸಿದ್ಧರಾಗಿದ್ದು, ಅದರ ಒಂದು ಭಾಗವಾಗಿ ಗುಲಾಂ ನಬಿ ಆಜಾದ್ ಪಕ್ಷ ತೊರೆದಿದ್ದಾರೆ. ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ ಈಗಿಲ್ಲ. ಈಗಾಗಲೇ 70 ಬಾರಿ ಕಾಂಗ್ರೆಸ್ ವಿಸರ್ಜನೆ ಆಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಪಕ್ಷ, ವಿರೋಧ ಪಕ್ಷದ ಸಾಲಿನಿಂದಲೂ ಹೊರಗೆ ನಡೆಯಲಿದೆ. ಇಂತಹವರಿಂದ ಸಾವರ್ಕರ್ ಕುರಿತು ಅವಹೇಳನಕಾರಿ ಹೇಳಿಕೆ ನೀಡುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನಲ್ಲಿ ಒಂದು ಕಡೆ ರಾಷ್ಟ್ರಮಟ್ಟದ ನಾಯಕರು ಪಕ್ಷವನ್ನು ತೊರೆಯುತ್ತಿದ್ದು, ರಾಜ್ಯದಲ್ಲಿರುವ ನಾಯಕರು ಕಾಂಗ್ರೆಸ್‌ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಬದಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್,



> ಹಿಂದೆ ಕ್ಷೇತ್ರದ ವಿಚಾರಕ್ಕಾಗಿ ಪಕ್ಷವನ್ನು ತೊರೆದು ತಪ್ಪು ಮಾಡಿದ್ದೆ. ಆದರೆ, ಮತ್ತೆ ಆ ತಪ್ಪು ಮಾಡುವುದಿಲ್ಲ. ವಿಧಾನಸಭೆ ಚುನಾವಣೆಗೆ ಇನ್ನೂ 8 ತಿಂಗಳು ಬಾಕಿಯಿದ್ದು, ಪಕ್ಷ ಕೈಗೊಳ್ಳುವ ತೀರ್ಮಾನಕ್ಕೆ ತಲೆ ಬಾಗುತ್ತೇನೆ.
>
> –ಸಿ.ಎಚ್.ವಿಜಯಶಂಕರ್, ಮಾಜಿ ಸಂಸದ

ಮಲ್ಲಿಕಾರ್ಜುನ ಖರ್ಗೆ ಮತ್ತು ಎಂ.ಬಿ.ಪಾಟೀಲ್ ಸೇರಿದಂತೆ ಪ್ರಮುಖ ನಾಯಕರು ಪ್ರತ್ಯೇಕ ಗುಂಪುಗಳನ್ನು ಮಾಡಿಕೊಂಡು ತಿರುಗುತ್ತಿದ್ದಾರೆ. ನಾಶವಾಗುತ್ತಿರುವ ತಮ್ಮ ಮನೆಯನ್ನು ರಕ್ಷಿಸುವ ಬದಲು ಚುನಾವಣಾ ಪ್ರಚಾರ ಮತ್ತು ರಾಜಕೀಯ ತೆವಲಿಗಾಗಿ ಗಾಳಿಯಲ್ಲಿ ಗುಂಡು ಹೊಡೆದುಕೊಂಡು ತಪ್ಪು ಮಾಹಿತಿಗಳನ್ನು ನೀಡಿ ರಾಜ್ಯದಲ್ಲಿ ಗೊಂದಲಗಳನ್ನು ಸೃಷ್ಟಿ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.


ರಾಜ್ಯ ಸರ್ಕಾರ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಬೀದಿಯಲ್ಲಿ ಮಾತನಾಡುವುದನ್ನು ನಿಲ್ಲಿಸಿ, ದಾಖಲೆಗಳಿದ್ದರೆ ಬಿಡುಗಡೆಗೊಳಿಸಿ, ಅಧಿವೇಶನದಲ್ಲಿ ಚರ್ಚೆ ಮಾಡಿ ಅಥವಾ ಸೂಕ್ತ ತನಿಖಾ ಸಂಸ್ಥೆಗೆ ನೀಡಿ ಎಂದು ಸವಾಲು ಹಾಕಿದ ಅವರು, ಗುತ್ತಿಗೆದಾರರ ಸಂಘಗಳು ಎಷ್ಟಿವೆ, ಕೆಂಪಣ್ಣ ಹೇಗೆ ಅಧ್ಯಕ್ಷರಾಗಿದ್ದಾರೆ ಎಂಬುದನ್ನು ಎಲ್ಲರೂ ತಿಳಿಯಬೇಕಿದೆ. ಅಷ್ಟಕ್ಕೂ ಸರ್ಕಾರದ ಯಾವ ಇಲಾಖೆ ಸಚಿವರು ಭ್ರಷ್ಟಾಚಾರ ಮಾಡಿದ್ದಾರೆ ಎಂದು ಆರೋಪಿಸುವುದಾದರೆ ದಾಖಲೆ ಬಿಡುಗಡೆಗೊಳಿಸಿ. ಅದನ್ನು ಬಿಟ್ಟು ಹಾದಿ ಬೀದಿಯಲ್ಲಿ ಮಾತನಾಡಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಕೆಲಸವನ್ನು ಸಿದ್ದರಾಮಯ್ಯ ಬಿಡಬೇಕು. ರಾಜ್ಯದ ಜನರಿಗೆ ಯಾವುದು ಭ್ರಷ್ಟ ಸರ್ಕಾರ ಎಂಬುದರ ಬಗ್ಗೆ ಅರಿವಿದೆ. ಹೀಗಾಗಿ ರಾಜಕೀಯ ಉಳಿವಿಗೆ ಅಪಪ್ರಚಾರ ಮಾಡುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಬಿಜೆಪಿ ನಗರ ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಮುನ್ನಡೆಸಲು ರಾಹುಲ್ ಗಾಂಧಿ ಬಿಟ್ಟರೆ ಪರ್ಯಾಯ ನಾಯಕ ಕಾಣುತ್ತಿಲ್ಲ: ಖರ್ಗೆ

ಬೆಂಗಳೂರು: ರಾಹುಲ್‌ಗಾಂಧಿ ಅವರನ್ನು ಬಿಟ್ಟು ಬೇರೆ ಯಾರೂ ಕಾಂಗ್ರೆಸ್‌ನಲ್ಲಿ ದೇಶ ಮಟ್ಟದಲ್ಲಿ ನಾಯಕನ ವರ್ಚಸ್ಸು, ಖ್ಯಾತಿ ಗಳಿಸಿರುವ ನಾಯಕ ಇಲ್ಲದ ಕಾರಣ ಅವರನ್ನು ಮತ್ತೆ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲು ಮನವೊಲಿಸಲಾಗುವುದು ಎಂದು ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಪಕ್ಷವನ್ನು ಮುನ್ನಡೆಸುವವರು ಇಡೀ ದೇಶಕ್ಕೆ ಚಿರಪರಿಚಿತರಾಗಿರಬೇಕು. ಕನ್ಯಾಕುಮಾರಿಯಿಂದ ಹಿಡಿದು ಕಾಶ್ಮೀರದವರೆಗೆ, ಪಶ್ಚಿಮ ಬಂಗಾಳದಿಂದ ಹಿಡಿದು ಗುಜರಾತ್‌ವರೆಗೆ ಪರಿಚಿತನಾಗಿರಬೇಕು ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ರಾಹುಲ್ ಗಾಂಧಿಯವರು ಇಡೀ ದೇಶಕ್ಕೆ ಚಿರಪರಿಚಿತರು. ಕಾಂಗ್ರೆಸ್ ಪಕ್ಷದಲ್ಲಿ ಎಲ್ಲರಿಂದ ಸ್ವೀಕೃತರಾಗಿರುವ ನಾಯಕರು, ಅವರು ಬಿಟ್ಟರೆ ಬೇರೊಬ್ಬ ನಾಯಕರು ಸದ್ಯಕ್ಕೆ ಪಕ್ಷದಲ್ಲಿಲ್ಲ ಎಂದು ನಿನ್ನೆ ಪಿಟಿಐಗೆ ನೀಡಿದ



ಸಂದರ್ಶನದಲ್ಲಿ ಹೇಳಿದ್ದಾರೆ.

ಹಿಂದೆ ಸೋನಿಯಾ ಗಾಂಧಿಯವರನ್ನು ಪಕ್ಷದ ನಾಯಕರೆಲ್ಲರೂ ಕರೆದುಕೊಂಡು ಬಂದು ಪಕ್ಷ ಮುನ್ನಡೆಸಬೇಕೆಂದು ಒತ್ತಾಯಿಸಿದ್ದನ್ನು ನೆನಪಿಸಿಕೊಂಡ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿಯವರನ್ನು ಅದೇ ರೀತಿ ಪಕ್ಷವನ್ನು ಮುನ್ನಡೆಸಿ ಹೋರಾಡಿ ಎಂದು ಮನವಿ ಮಾಡಿಕೊಂಡರು. ರಾಹುಲ್ ಗಾಂಧಿ ಬಿಟ್ಟರೆ ಯಾರಿದ್ದಾರೆ ಪಕ್ಷದಲ್ಲಿ, ನನಗೆ ಬೇರೆ ಯಾರೂ ಕಾಣಿಸುತ್ತಿಲ್ಲ ಎಂದು ಖರ್ಗೆ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಮುಂದಾಳತ್ವ ವಹಿಸಿಕೊಳ್ಳಲು ಸಿದ್ಧರಿಲ್ಲ ಎಂಬ ವರದಿಗಳ ಕುರಿತು, ಖರ್ಗೆ ಅವರು "ಪಕ್ಷಕ್ಕಾಗಿ, ದೇಶಕ್ಕಾಗಿ, ಆರ್‌ಎಸ್‌ಎಸ್–ಬಿಜೆಪಿ ವಿರುದ್ಧ ಹೋರಾಡಲು ಮತ್ತು ದೇಶವನ್ನು ಉಳಿಸಿಕೊಳ್ಳಲು ಅಧಿಕಾರ ವಹಿಸಿಕೊಳ್ಳುವಂತೆ ನಾವು ವಿನಂತಿಸಿಕೊಳ್ಳುತ್ತೇವೆ ಎಂದು ಪಕ್ಷದ ಮುಂಬರುವ 'ಭಾರತ ಜೋಡೋ ಯಾತ್ರೆ' ಬಗ್ಗೆಯೂ ಉಲ್ಲೇಖಿಸಿದ ಖರ್ಗೆ, 'ಜೋಡೋ ಭಾರತ'ಗೆ ರಾಹುಲ್ ಗಾಂಧಿ ಅಗತ್ಯವಿದೆ ಎಂದು ಹೇಳಿದರು.

ಇಂದು ಆಯುರ್ವೇದ ಮಧುಮೇಹ ಚಿಕಿತ್ಸಾ ಶಿಬಿರ

ಮೈಸೂರು,ಆ.27–ಮೈಸೂರು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಚಾಮರಾಜಪೇಟೆ ಆಯುರ್ವೇದ ಅಕಾಡೆಮಿ ಮತ್ತು ಗಣಪತಿ ಸಚ್ಚಿದಾನಂದ ಆಶ್ರಮ ಸಹಯೋಗದೊಂದಿಗೆ ಆ.28ರ ಬೆಳಗ್ಗೆ 10 ಗಂಟೆಗೆ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ 'ಬನ್ನಿ, ಮಧುಮೇಹ ಗೆಲ್ಲೋಣ' ಎಂಬ ವಾಕ್ಯದೊಂದಿಗೆ ಉಚಿತ ಆಯುರ್ವೇದ ಮಧುಮೇಹ ಚಿಕಿತ್ಸಾ ಶಿಬಿರ ಆಯೋಜಿಸಿದೆ. ಆಶ್ರಮದ ಕಿರಿಯ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಶಾಸಕ ಎಸ್.ಎ. ರಾಮದಾಸ್ ಉದ್ಘಾಟಿಸಲಿದ್ದಾರೆ.

ಆನ್‌ಲೈನ್‌ನಲ್ಲಿ 3.89 ಲಕ್ಷ ವಂಚನೆ

ಮಡಿಕೇರಿ,ಆ.27–ವಿದ್ಯುತ್ ಬಿಲ್ ಅಪ್‌ಡೇಟ್ ಮಾಡಬೇಕೆಂದು ಕರೆ ಮಾಡಿ, ಉದ್ಯಮಿಯೊಬ್ಬರ ಖಾತೆಯಿಂದ 3.89 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ.

ಮಡಿಕೇರಿಯ ಮೊಣ್ಣಂಗೇರಿ ರಸ್ತೆಯಲ್ಲಿರುವ ಉದ್ಯಮಿ ಪ್ರದುಮನ್‌ಕುಮಾರ್ ಜೈನ್ (77) ಅವರ ಮೊಬೈಲ್‌ಗೆ ಡಾ.ಸಂಜಯ್ ಮೂರ್ತಿ ಎಂಬ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ ಮನೆಯ ವಿದ್ಯುತ್ ಬಿಲ್ ಅಪ್‌ಡೇಟ್ ಮಾಡಬೇಕಾಗಿದೆ ಎಂದು ತಿಳಿಸಿ, ಆ್ಯಪ್‌ವೊಂದನ್ನು ಡೌನ್‌ಲೋಡ್ ಮಾಡಿಕೊಂಡು 10 ರೂ. ವರ್ಗಾವಣೆ ಮಾಡುವಂತೆ ಹೇಳಿ ಅವರ ಬ್ಯಾಂಕ್ ಖಾತೆಯಿಂದ 3,89,500 ರೂ. ಕಡಿತಗೊಂಡಿದೆ. ಕೊಡಗು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿಗೆ ಕಾಂಗ್ರೆಸ್ ಟಾಂಗ್

ಬೆಂಗಳೂರು, ಆ.27 (ಕೆಎಂಪಿ)– ರಾಜ್ಯ ಬಿಜೆಪಿ, ಕಾಂಗ್ರೆಸ್ ಸರ್ಟಿಫಿಕೇಟ್ ಬೇಡ ಎಂದು ಹೇಳುತ್ತಿದೆ. ಆದರೆ ಜನರೇ ನಿಮಗೆ ಲಂಚಾವತಾರದ ಸರ್ಟಿಫಿಕೇಟ್ ಕೊಡುತ್ತಿದ್ದಾರೆ ಎಂದು ಕೆಪಿಸಿಸಿ ಕಾಲೆಳೆದಿದೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಪ್ರದೇಶ ಕಾಂಗ್ರೆಸ್ 'ಡೆತ್ ಸರ್ಟಿಫಿಕೇಟ್ ಪಡೆಯಲು ಕೊಡಬೇಕು ಲಂಚ, ಇಲ್ಲದಿದ್ದರೆ ಲಂಚ–ಮಂಚದ ಸರ್ಕಾರಕ್ಕೆ ಅಪಮಾನ ಈ ಕಮಿಷನ್ ಸುತನ ಸುಧಾಕರ್‌ಗೆ ತಲುಪುತ್ತದೆಯೇ ಎಂದು ಪ್ರಶ್ನೆ ಮಾಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮತ್ತೆ ಬಂದ ಗಜಾನನ...

ಬನ್ನೂರು ಕೆ.ರಾಜು
ಮೊ. 9481533167

ಪುಟ್ಟ ಪುಟ್ಟ ಮಕ್ಕಳಿಂದ ಆರಂಭಿಸಿ, ಪುಟಿದೇಳುವ ಯುವಜನರಿಂದ ಹಿಡಿದು ಪುಣ್ಯಕ್ಷೇತ್ರಗಳತ್ತ ಮುಖ ಮಾಡಿರುವ ಹಿರಿಯ ಜೀವಿಗಳ ತನಕ ಗಣಪತಿ ಎಂದರೆ ಅತ್ಯಂತ ಅಚ್ಚುಮೆಚ್ಚು. ಗಣೇಶ ಚತುರ್ಥಿಯಲ್ಲಂತೂ ಇವರೆಲ್ಲರ ಸಂಭ್ರಮಕ್ಕೆ ಪಾರವೇ ಇಲ್ಲ. ಮನೆ ಮನೆಗಳಲ್ಲಿ, ಬೀದಿ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಚಪ್ಪರ ಹಾಕಿ ಮಂಟಪ ಕಟ್ಟಿ ಗಣಪತಿ ಕೂರಿಸಿ ಪೂಜಿಸಿ ಸಂತಸಪಡುವವರಿಗೇನೂ ಕಮ್ಮಿಯಿಲ್ಲ. ಸರ್ವ ಸಂಕಷ್ಟಗಳ ಸಂಹಾರಕ, ಸಕಲ ವಿಘ್ನಗಳ ವಿನಾಶಕ, ಜಗದೋದ್ಧಾರಕ ಗಣೇಶನನ್ನು ಭಕ್ತಿಯಿಂದ ಪೂಜಿಸಿ ಸಂತುಷ್ಟಭಾವದಿಂದ ಪುನೀತರಾಗುವ ಪರಮ ಪವಿತ್ರದಿನ ಗಣೇಶ ಚತುರ್ಥಿ ಹಬ್ಬ.

ಅಬ್ಬಾ ವಿಶ್ವವಂದಿತ ವಿಶ್ವಪೂಜಿತ ಶ್ರೀ ಗಣೇಶನಿಗೆ ಅದೆಷ್ಟೊ ನಾಮಾಂಕಿತಗಳು. ಹೇಳುತ್ತಾ ಹೋದಷ್ಟೂ ಬೆಳೆಯುತ್ತಲೇ ಇರುತ್ತದೆ. ಗಣೇಶನ ಹೆಸರುಗಳ ವಿಸ್ತಾರದಂತೆಯೇ ಆತನ ಮಹಿಮೆಯೂ ಅಪಾರವೇ. ಬಹುಶಃ ಇನ್ಯಾವ ದೇವರಿಗೂ ಇಷ್ಟೊಂದು ನಾಮಾಂಕಿತವಿರಲಾರದು! ಗಣೇಶನ ವೈಶಿಷ್ಟ್ಯವೇ ಅಂತದ್ದು. ಆದರೆ, ಯಾವ ನಾಮಾಂಕಿತದಿಂದ ಸ್ಮರಿಸಿದರೂ, ಪೂಜಿಸಿದರೂ ಭಕ್ತರಿಗೊಲಿಯುವ ಭಕ್ತವತ್ಸಲ, ಭಕ್ತಾಗ್ರೇಸರ ಈ ಗಣೇಶ. ಹಾಗಾಗಿ ದೇವ ದೇವತೆಗಳಲ್ಲೆಲ್ಲಾ ಗಣೇಶನಿಗೆ ಒಂದು ವಿಶಿಷ್ಟ ಸ್ಥಾನ. ಅವನಿಗೇ ಮೊದಲ ಮನ್ನಣೆ. ಅಗ್ರ ಪೂಜೆಯ ಮಹಾರಾಧನೆ. ನಮ್ಮ ಹಿಂದೂ ಸಂಪ್ರದಾಯದಲ್ಲಿ ಯಾವುದೇ ಕಾರ್ಯ ಆರಂಭಿಸಬೇಕೆಂದರೂ, ಯಾವುದೇ ದೇವರ ಉತ್ಸಾದಿ ಕಾರ್ಯ ಪೂಜೆಗಳನ್ನು ಮಾಡಬೇಕೆಂದರೂ ಮೊದಲು ಪೂಜೆ ಗಣೇಶನಿಗೆ ಮಾಡಲಾಗುತ್ತದೆ. ಗಣನಾಥನು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನೆಂದು ವೇದಗಳು, ಉಪನಿಷತ್ತುಗಳು ಸಾರಿವೆ. ಇಡೀ ಜಗತ್ತಿಗೆ ಆಧಾರ, ಸಕಲ ಪ್ರಥಮಗಣಗಳಿಗೆ, ದೇವಗಣಗಳಿಗೆ, ಪ್ರಾಣಿಗಣಗಳಿಗೆ ಮನುಷ್ಯಗಣಗಳಿಗೆ ಅಧಿಪತಿಯಾಗಿ, ಪ್ರೇರಕ ಶಕ್ತಿಯಾಗಿ ವಿಶೇಷ ಪೂಜೆಗಳಿಗೆ ಗಣಪತಿ ಪಾತ್ರನಾಗಿದ್ದಾನೆ. ಯಾವುದೇ ಶುಭಕಾರ್ಯಗಳ ಪ್ರಾರಂಭಕ್ಕೆ ಸಕಲಗಣಗಳ ಅಧಿಪತಿಯಾದ ವಿಘ್ನವಿನಾಶಕ ಗಣೇಶನ ಅನುಮತಿಯು ಬಹುಮುಖ್ಯ.

ಗಣಪತಿಯು ಮೂಲಾಧಾರ ಚಕ್ರದ ದೇವತೆಯಾಗಿದ್ದು, ಷಟ್ಚಕ್ರದೊಳಗಿನ ಮೂಲಾಧಾರ ಚಕ್ರವು ಪ್ರಥಮ ಕ್ರಮಾಂಕವನ್ನು ಹೊಂದಿದೆ. ಈ ಚಕ್ರವು ಜಾಗೃತಗೊಂಡ ನಂತರ ಆಧ್ಯಾತ್ಮಿಕ ಉನ್ನತಿಯು ಆರಂಭವಾಗುತ್ತದೆ. ಪ್ರಾಚೀನ ಕಾಲದಲ್ಲಿ ಏನೇ ಬರೆಯಬೇಕೆಂದರೂ "ಓಂ ಶ್ರೀ ಗಣೇಶಾಯ ನಮಃ" ಎಂದು ಬರೆದು ಆರಂಭಿಸುತ್ತಿದ್ದರು. ಈಗಲೂ ಸಹ ನಾವಿದನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಕಾರಣ ಎಲ್ಲಕ್ಕೂ ಮೊದಲು ಗಣಪತಿಯ ಕೃಪೆ ಬೇಕೆಂಬುದು ಮತ್ತು ಗಣಪತಿ ಬುದ್ಧಿದಾತನಾಗಿರುವುದು. ವ್ಯಾಸ ಮಹರ್ಷಿಗಳು ಕೂಡ ಗಣಪತಿಯ ಅಸಾಮಾನ್ಯ ಬುದ್ಧಿವಂತಿಕೆಯನ್ನು ಅರಿತು 'ಮಹಾಭಾರತ'ವನ್ನು ಬರೆಯಲು ಗಣಪತಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಹೀಗೆ 'ಮಹಾಭಾರತ'ದ ರಚನೆಯಲ್ಲಿ ತೊಡಗಿದ್ದಾಗ ಅದನ್ನು ಬರೆಯಲು ಗಣಪತಿ ತನ್ನ ಒಂದು ದಂತವನ್ನು ತಾನೇ ಮುರಿದುಕೊಂಡು ಅದನ್ನೇ ಲೇಖನಿಯನ್ನಾಗಿ ಮಾಡಿಕೊಂಡಿದ್ದನಂತೆ. ಇದರಿಂದಲೇ ಅವನು 'ಏಕದಂತ' ನಾದನೆಂದು ಹೇಳುತ್ತಾರೆ. ಇನ್ನೊಂದೆಡೆ ತನ್ನನ್ನು ಅಪಮಾನಿಸಿದ ಚಂದ್ರನನ್ನು ಶಪಿಸಲು ಗಣಪತಿ ತನ್ನ ದಂತವೊಂದನ್ನು ಮುರಿದುಕೊಂಡನೆಂದೂ ಹೇಳುವುದುಂಟು. ಹಾಗೆಯೇ ಮತ್ತೊಂದೆಡೆ ಶಿವನಿಂದ ಕೊಡಲಿಯನ್ನು ವರವಾಗಿ ಪಡೆದಿದ್ದ ಪರಶುರಾಮನು ಪ್ರಯೋಗಿಸಿದ ಕೊಡಲಿಯಿಂದ ಗಣಪತಿಯ ದಂತವೊಂದು ಮುರಿಯಿತೆಂದೂ ಹೇಳುತ್ತಾರೆ. ಅದು ತನ್ನ ತಂದೆಯು ಪರಶುರಾಮನಿಗೆ ಕೊಟ್ಟಿದ್ದ ಆಯುಧವನ್ನು ಗೌರವಿಸುವ ಸಲುವಾಗಿ ಹೀಗಾಯಿತಂತೆ. ಒಟ್ಟಿನಲ್ಲಿ ಗಣಪತಿಯ ಏಕದಂತದ ಹಿಂದೆ ಇಂತಹ ಹಲವಾರು ಸ್ವಾರಸ್ಯಕರ ಕಥೆಗಳಿವೆ. ಅಷ್ಟೇ ಅಲ್ಲ ಗಣಪತಿಯ ಬಗ್ಗೆಯೇ ಬಗೆಬಗೆಯಾದ ಕಥೆಗಳು, ದೃಷ್ಟಾಂತಗಳಿವೆ.

ಇಂಥ ಗಣಪತಿಯು ವಿದ್ಯಾಧಿಪತಿಯಾಗಿದ್ದು ನಾಲ್ಕು ವೇದಗಳೊಂದಿಗೆ ಇತರ ಉಪವೇದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ ಛಂದಸ್ಸು, ಪೂರ್ವ ಮತ್ತು ಉತ್ತರ ಮೀಮಾಂಸೆ, ನ್ಯಾಯ ಪುರಾಣ, ಧರ್ಮಶಾಸ್ತ್ರ, ನೀತಿಶಾಸ್ತ್ರ ಮೊದಲಾದ ಹದಿನೆಂಟು ವಿದ್ಯೆ ಮತ್ತು ಅರವತ್ತ ನಾಲ್ಕು ಕಲೆಗಳ ಅಧಿಪತ್ಯವನ್ನು ಹೊಂದಿರುವನು.

"ವಂದೇ ಮಂದಾರು
ಮಿಂದು ಭೂಷಣ ನಂದನಂ।
ಅಮಂದಾನಂದಸಂದೋಹ
ಬಂಧುರಂ ಸಿಂಧುರಾನನಮ್॥"


ಪೂಜಿಸುವವರಿಗೆ ಕಲ್ಪವೃಕ್ಷ. ಚಂದ್ರ ಶೇಖರತನಯ ಅನಂತವಾದ ಆನಂದ ಸ್ವರೂಪಿಯಾದ ಗಣಪತಿಗೆ ವಂದಿಸುತ್ತಿದ್ದೇನೆಂಬುದು ಈ ಶ್ಲೋಕದ ಭಾವಾರ್ಥ. ಹೀಗೆ ವಂದಿಸಿ ಪೂಜಿಸುವುದರಿಂದ ಶಿವಪುತ್ರ ಕರಿಮುಖ ವಿನಾಯಕ ಬೇಡಿದ್ದನ್ನು ಕರುಣಿಸುತ್ತಾನೆಂಬ ನಂಬಿಕೆ ಭಕ್ತ ಜನಗಳದ್ದು.

ಪುಟ್ಟ ಪುಟ್ಟ ಮಕ್ಕಳಿಂದ ಆರಂಭಿಸಿ, ಪುಟಿದೇಳುವ ಯುವಜನರಿಂದ ಹಿಡಿದು ಪುಣ್ಯಕ್ಷೇತ್ರಗಳತ್ತ ಮುಖ ಮಾಡಿರುವ ಹಿರಿಯ ಜೀವಿಗಳ ತನಕ ಗಣಪತಿ ಎಂದರೆ ಅತ್ಯಂತ ಅಚ್ಚುಮೆಚ್ಚು. ಗಣೇಶ ಚತುರ್ಥಿಯಲ್ಲಂತೂ ಇವರೆಲ್ಲರ ಸಂಭ್ರಮಕ್ಕೆ ಪಾರವೇ ಇಲ್ಲ. ಮನೆ ಮನೆಗಳಲ್ಲಿ, ಬೀದಿ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಚಪ್ಪರ ಹಾಕಿ ಮಂಟಪ ಕಟ್ಟಿ ಗಣಪತಿ ಕೂರಿಸಿ ಪೂಜಿಸಿ ಸಂತಸ ಪಡುವವರಿಗೇನೂ ಕಮ್ಮಿಯಿಲ್ಲ. ಸರ್ವ ಸಂಕಷ್ಟಗಳ ಸಂಹಾರಕ, ಸಕಲ ವಿಘ್ನಗಳ ನಿವಾರಕ, ಜಗದೋದ್ಧಾರಕ ಗಣೇಶನನ್ನು ಭಕ್ತಿಯಿಂದ ಪೂಜಿಸಿ ಸಂತುಷ್ಟಭಾವದಿಂದ ಪುನೀತರಾಗುವ ಪರಮ ಪವಿತ್ರದಿನ ಗಣೇಶ ಚತುರ್ಥಿ ಹಬ್ಬ. ಆಸ್ತಿಕರ ಪಾಲಿಗಂತೂ ಇದೊಂದು ಮಹಾಪುಣ್ಯ ದಿನವೇ ಸರಿ. ಅಷ್ಟೇ ಅಲ್ಲ ಇದು ಬರೀ ಹಿಂದೂ ಧರ್ಮೀಯರಿಗಷ್ಟೇ ಅಲ್ಲದೆ ಸರ್ವಧರ್ಮೀಯರ ಭಾವೈಕ್ಯತೆಯ ಹಬ್ಬವೂ ಹೌದು. ಏಕೆಂದರೆ ಗಣೇಶ ಚತುರ್ಥಿಯ ಆಚರಣೆಯಲ್ಲಿ ಇಂಥ ಸಾರ್ಥಕತೆ ಇದೆ. ಹಾಗಾಗಿ ಹಿಂದೂ, ಮುಸ್ಲಿಂ, ಕ್ರೈಸ್ತರೆಂಬ ಬೇಧ ಭಾವ ತೊರೆದು ಎಲ್ಲರೂ ಕೂಡಿ ಸಂಭ್ರಮಿಸುವ ಮಹಾಹಬ್ಬವಿದು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರಾಷ್ಟ್ರವನ್ನು ಒಗ್ಗೂಡಿಸಲು ಬಾಲಗಂಗಾಧರ ತಿಲಕರು ದೇಶಾದ್ಯಂತ ಗಣೇಶನ ಹಬ್ಬವನ್ನು ಆಚರಿಸಲು ಕರೆಕೊಟ್ಟಿದ್ದರು. ಸಾರ್ವಜನಿಕವಾಗಿ ಗಣೇಶೋತ್ಸವವನ್ನು ನಡೆಸಲು ಮೊದಲಿಗೆ ನಾಂದಿ ಹಾಡಿದವರೇ ತಿಲಕರು. ಆಗ ಗಣೇಶೋತ್ಸವ ಎಂಬುದು ರಾಷ್ಟ್ರದಾದ್ಯಂತ ಎಲ್ಲರಿಗೂ ಸ್ಫೂರ್ತಿಯ ಚಿಲುಮೆಯಾಗಿತ್ತು. ಗಣೇಶ ಚತುರ್ಥಿಯ ಹಬ್ಬಕ್ಕೆ ಅಂತಹ ಮಹತ್ವವುಂಟು. ಹಾಗೆಯೇ ಗಣಪತಿ ಹಬ್ಬದ ನಿಮಿತ್ತ ಜರುಗುವ ಗಣೇಶೋತ್ಸವಗಳಲ್ಲಿ ಸಾರ್ವಜನಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವಷ್ಟು ಬೇರ್‍ಯಾವುದೇ ಹಬ್ಬ ಹರಿದಿನ ಉತ್ಸವಗಳಲ್ಲಿ ಕಾಣಲಾಗದು. ಸಾರ್ವಜನಿಕವಾಗಿ ವಾರಗಟ್ಟಲೆ, ತಿಂಗಳುಗಟ್ಟಲೆ ಗಣಪತಿಯನ್ನು ಕೂರಿಸಿ ಪೂಜಿಸುವುದರಿಂದ ಈ ದಿನಗಳಲ್ಲಿ ಪ್ರತಿದಿನವು ಕಲಾಸಂಸ್ಕೃತಿಯ ಸುಗ್ಗಿಯೇ ಸೃಷ್ಟಿಯಾಗಿರುತ್ತದೆ. ಒಂದು ರೀತಿ ಗಣೇಶನ ಹಬ್ಬವೆಂಬುದು ಸಾಂಸ್ಕೃತಿಕ ಮತ್ತು ಧಾರ್ಮಿಕ ಜಢತ್ವಕ್ಕೊಂದು ದಿವ್ಯೌಷಧಿ ಎನ್ನಬಹುದು.

ಭಾದ್ರಪದಶುದ್ಧ ಚತುರ್ಥಿಯಂದು ಗಣೇಶ ಚತುರ್ಥಿಯನ್ನು ಆಚರಿಸಲಾಗುತ್ತದೆ. ಗಣಪತಿಯ ಅನುಗ್ರಹವೊಂದಿದ್ದರೆ ಸರ್ವ ಕಾರ್ಯಗಳಲ್ಲೂ ಯಶಸ್ಸು ಕೈಗೂಡುತ್ತದೆಂಬ ನಂಬಿಕೆ ಎಲ್ಲರದ್ದೂ ಆಗಿದೆ. ಆದ್ದರಿಂದ 'ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭಾ ನಿರ್ವಿಘ್ನಂ ಕುರುಮೇದೇವ ಸರ್ವಕಾರ್ಯೇಷು ಸರ್ವದಾ' ಎಂಬ ಶ್ಲೋಕ ಗಣಪತಿ ಆರಾಧನೆಯಲ್ಲಿ ಅತ್ಯಂತ ವಿಶೇಷತೆ ಪಡೆದುಕೊಂಡಿದೆ.

"ಗಣೇಶಸ್ಯ ಜನ್ಮೋತ್ಸವ ಭಾದ್ರಪದ ಮಾಸೇ
ಶುಕ್ಲಪಕ್ಷೇ ಚತುರ್ಥಿ ತಿಥೌಭವತಿ"

ಗಣೇಶನ ಹುಟ್ಟಿದ ಹಬ್ಬವು ಭಾದ್ರಪದ ಮಾಸದ ಶುಕ್ಲಪಕ್ಷ ಚತುರ್ಥಿ ದಿನವಾಗಿರುವುದರಿಂದ ಅಂದು ಗಣೇಶನ ಪೂಜೆಗೆ ಅಪಾರ ಶ್ರೇಷ್ಠತೆಯುಂಟು. ಹಾಗಾಗಿ ಗಣೇಶ ಚತುರ್ಥಿಯನ್ನು ಬಹಳ ಹಿಂದಿನಿಂದಲೂ ಶ್ರದ್ಧಾಭಕ್ತಿ ಹಾಗೂ ಅತ್ಯಂತ ವಿಜೃಂಭಣೆಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ನಮ್ಮ ದೇಶದಲ್ಲಷ್ಟೇ ಅಲ್ಲದೇ ವಿದೇಶಗಳಲ್ಲೂ ಕೂಡ ಆಚರಣೆಯಲ್ಲಿದೆ. ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚು ಮಹಾರಾಷ್ಟ್ರದಲ್ಲಿ ಗಣಪತಿಯ ಪ್ರಭಾವವಿದ್ದು ಪಶ್ಚಿಮ ಮಹಾರಾಷ್ಟ್ರದ ಅಷ್ಟವಿನಾಯಕ ಮಂದಿರ, ಮುಂಬಯಿ ನಗರದಿಂದ 75 ಕಿ.ಮೀ. ದೂರವಿರುವ ಟಿಟ್ವಾಲದಲ್ಲಿನ ಮಹಾಗಣಪತಿ ದೇವಾಲಯ, ಪುಣೆ ಸಮೀಪ ಚಚ್ವಾಡದಲ್ಲಿನ ಮಂಗಳಮೂರ್ತಿ ಗಣಪತಿ ದೇವಸ್ಥಾನ, ನಾಸಿಕ್‌ನ ಶ್ರೀ ಮೋದಕೇಶ್ವರ ಮಂದಿರ, ನಾಗಪುರದ ಶ್ರೀ ಗಣೇಶ ದೇಗುಲಗಳು ಗಮನಾರ್ಹವೆನಿಸಿವೆ. ಹೊರದೇಶಗಳಲ್ಲೂ ಸಾಕಷ್ಟು ಪ್ರಾಚೀನ ಗಣಪತಿ ದೇಗುಲಗಳಿವೆ. ಚೀನಾದ ಕುಂಗ್ ಶಿಯಾಂಗ್ ಎಂಬಲ್ಲಿ ಪ್ರಾಚೀನ ಕಾಲದ ಒಂದು ಗಣಪತಿ ಮೂರ್ತಿ ದೊರೆತಿದ್ದು ಅದು ಅಲ್ಲಿ ವಿಶೇಷ ಮಹತ್ವವನ್ನು ಪಡೆದುಕೊಂಡು ಪೂಜನೀಯವಾಗಿದೆ. ಅಫ್ಘಾನಿಸ್ತಾನ, ತುರ್ಕಿಸ್ತಾನ, ಇರಾನ್, ಪರ್ಶಿಯಾ, ನೇಪಾಳ, ಟಿಬೆಟ್, ಮಂಗೋಲಿಯಾ, ಬರ್ಮಾ, ಬೋರ್ನಿಯೋ, ಚೀನಾ, ಇಂಡೋ ಚೀನಾ, ಶ್ರೀಲಂಕಾ, ಥೈಲ್ಯಾಂಡ್, ವಿಯಟ್ನಾಂ, ಕಾಂಬೋಡಿಯಾ, ಜಾವಾ ಮುಂತಾದ ದೇಶಗಳಲ್ಲೂ ಗಣಪತಿ ತನ್ನದೇ ಆದ ಅಧಿಪತ್ಯವನ್ನು ಹೊಂದಿದ್ದು ಅಲ್ಲೆಲ್ಲಾ ತನ್ನ ಮಹಾಭಕ್ತವೃಂದವನ್ನು ಪಡೆದು ಪ್ರಭಾವಿ ದೇವನೆನಿಸಿದ್ದಾನೆ. ■



ವಾರಭವಿಷ್ಯ

28.8.2022 ರಿಂದ 3.9.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಸಿಂಹ, ಚಂದ್ರ–ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ–ವೃಷಭ, ಬುಧ–ಕನ್ಯಾ, ಗುರು–ಮೀನ, ಶುಕ್ರ–ಸಿಂಹ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಮನೆಯಲ್ಲೂ, ಆಫೀಸಿನಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಆದರೆ ಕೈಯಲ್ಲಿ ಹಣ ನಿಲ್ಲುವುದಿಲ್ಲ. ಸಾಲಗಾರರ ಒತ್ತಡವೂ ಇರುತ್ತದೆ. ನಿಮ್ಮವರೇ ನಿಮ್ಮನ್ನು ಅನುಮಾನಿಸಿ ನೋಡಲು ನಿಮ್ಮ ರಾಶಿಯಲ್ಲಿ ಸ್ಥಿತನಿರುವ ರಾಹುವೇ ಕಾರಣ. ಭರಣಿ ನಕ್ಷತ್ರದವರೆಗೆ ಉದ್ಯೋಗ ಲಾಭ. ಶ್ರೀಮತಿಯೊಂದಿಗೆ ಸೋತು ಗೆಲ್ಲುವುದರಿಂದ ಮನೆಯಲ್ಲಿ ಶಾಂತಿ ನೆಲೆಸುತ್ತದೆ.
–ಶ್ರೀ ಕಾರ್ತಿಕೇಯಸ್ವಾಮಿ ದರ್ಶನ, ಶುಭಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಶುಭ ಗುರುವಿನ ಪರಿಣಾಮ ಭಾಗ್ಯದಲ್ಲಿ ವೃದ್ಧಿ, ನೂತನ ವಾಹನ, ವಸ್ತ್ರಾಭರಣ ಹೊಂದುವ ಯೋಗ. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆಯ ಭಾಗ್ಯವಿದೆ. ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸನ್ನು ಹೊಂದುವಿರಿ. ಮೃಗಶಿರಾ ನಕ್ಷತ್ರದವರಿಗೆ ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಗಳಿಕೆ. ಸರ್ಕಾರಿ ನೌಕರರು ಅಡ್ಡದಾರಿ ಹಿಡಿದರೆ ಸಂಕಷ್ಟಕ್ಕೆ ಗುರಿಯಾಗುವರು. ಕೇತು ಉತ್ತಮನಿಲ್ಲ. ನಶಾ ಪದಾರ್ಥಗಳಿಂದ ದೂರವಿರಿ.
– ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ, ಶುಭಸಂಖ್ಯೆ–5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ನೂತನ ಜವಾಬ್ದಾರಿಗಳಿಗೆ ಸಿದ್ಧರಾಗಿರಿ. ರಫ್ತು ವ್ಯಾಪಾರದಿಂದ ಹಾಗೂ ಕೂಡಿಟ್ಟ ದಾಸ್ತಾನು ಮಾರಾಟದಿಂದ ಹೆಚ್ಚಿನ ಧನ ಲಾಭವಾಗುವುದು. ಬಾಕಿ ವಸೂಲಿಯೂ ಆಗುವುದು. ನೆರೆ ಹೊರೆಯಲ್ಲಿ ಮನಸ್ತಾಪಗಳಿಗೆ ಅವಕಾಶ ಕೊಡದಿರಿ. ರಾಜಕಾರಣಿಗಳಿಗೆ ಶುಭ ಯೋಗ ನೀಡುವ ರವಿಯಿಂದ ಸರ್ವಕಾರ್ಯ ಜಯ. ಮರಮುಟ್ಟು, ಪೀಠೋಪಕರಣ ವ್ಯಾಪಾರಿಗಳಿಗೆ ಉತ್ತಮ ಆದಾಯವಾಗಲಿದೆ. ಮಾತು, ಮನಸ್ಸು, ಸ್ವಚ್ಛವಾಗಿರಲಿ
– ಶ್ರೀ ವಿಷ್ಣು ಪ್ರಾರ್ಥನೆ, ಶುಭಸಂಖ್ಯೆ–2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವಿತ್ತಲಾಭ, ಭೋಜನ, ಶಯನಾದಿ ಸುಖಗಳಿಂದ ವಾರಕ್ಕೆ ಸ್ವಾಗತ. ಗುರುಬಲದ ಪರಿಣಾಮ ಸ್ಥಗಿತಗೊಂಡಿದ್ದ ವೈಯಕ್ತಿಕ ಕೆಲಸಗಳು ಮರುಚಾಲನೆ ಹೊಂದುವುದು. ಅನಿರೀಕ್ಷಿತ ಪ್ರಯಾಣಗಳನ್ನು ತಳ್ಳಿಹಾಕಲಾಗದು. ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಇರುವವರಿಗೆ ಗೌರವ, ಪ್ರತಿಷ್ಠೆಗಳು ವೃದ್ಧಿಯಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಬಾಳ ಸಂಗಾತಿ ದೊರೆಯುವ ಸಾಧ್ಯತೆ. ಆಸ್ತಿ ವಿಷಯಗಳು ಇತ್ಯರ್ಥಗೊಳ್ಳುವುದು.
– ಶ್ರೀ ದೇವಿ ಉಪಾಸನೆ, ಶುಭಸಂಖ್ಯೆ–8.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಶುಭ ಕಾರ್ಯಗಳಿಗೆ ಪ್ರೇರಣೆ. ಹಿತೈಷಿಗಳೊಂದಿಗೆ ಸಮಾಗಮ. ಸ್ತ್ರೀಯರೊಬ್ಬರ ಸಹಾಯ, ಮಾರ್ಗದರ್ಶನದಿಂದ ನಿಮ್ಮ ಭಾಗ್ಯದಲ್ಲಿ ಬದಲಾವಣೆಯಾಗುವ ಸಾಧ್ಯತೆ ಇದೆ. ಸರ್ಕಾರಿ ಕಚೇರಿಗಳಿಗೆ ವೃಥಾ ಅಲೆದಾಟ ಹಾಗೂ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ವಾರಾಂತ್ಯಕ್ಕೆ ಧರ್ಮ ಕಾರ್ಯಗಳಲ್ಲಿ ಭಾಗಿಯಾಗುವಿರಿ. ಶೇರು ವ್ಯವಹಾರಗಳನ್ನು ಅತ್ಯಂತ ಜಾಗರೂಕತೆಯಿಂದ ಮಾಡಬೇಕು. – ಶ್ರೀ ಆದಿತ್ಯ ಹೃದಯ ಪಠಿಸಿ, ಶುಭಸಂಖ್ಯೆ–3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ನೌಕರಿ ತಲಾಶ್ ಮಾಡುವವರಿಗೆ ಶುಭ ಸಂದೇಶ ಬರುವುದು. ಪ್ರೀತಿ, ಪ್ರಣಯ ವಿಚಾರಗಳಲ್ಲಿ ಉಂಟಾಗಿದ್ದ ಕಸಿವಿಸಿಗಳು ನಿವಾರಣೆ ಆಗುವುದು. ಆಸ್ಪತ್ರೆಯಲ್ಲಿ ಶುಷ್ರೂಷೆಯಲ್ಲಿದ್ದವರಿಗೆ ಡಿಸ್ಚಾರ್ಜ್ ಆಗುವುದು. ಧಾರ್ಮಿಕ ಮಠ–ಮಾನ್ಯಗಳ ಗುರುಗಳ ಭೇಟಿಯಿಂದ ಧನ್ಯತಾ ಭಾವವನ್ನು ಹೊಂದುವಿರಿ. ನೂತನ ವಾಹನ ಖರೀದಿಯ ಕನಸು ನನಸಾಗಲಿದೆ. ನಿಮ್ಮ ನಿಕಟವರ್ತಿಗಳು ನಿಮ್ಮ ಮಹತ್ವದ ಕಾರ್ಯ ಕಲಾಪಗಳಿಗೆ ನೆರವು ನೀಡುವರು. – ಶ್ರೀ ಮನ್ನಾರಾಯಣ ನಾಮ ಸ್ಮರಣೆ, ಶುಭಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಆರಂಭ ಸ್ವಲ್ಪ ಒತ್ತಡಭರಿತವಾಗಿದ್ದರೂ ಚಂದ್ರ ಗ್ರಹ ನಿಮ್ಮ ಸಹಾಯಕ್ಕೆ ಇದ್ದಾನೆ. ಧನಾತ್ಮಕವಾಗಿ ಚಿಂತಿಸಿ. ಸಾಧನೆಯ ಮಾರ್ಗ ತೆರೆದುಕೊಳ್ಳುವುದು. ನಿಮ್ಮ ರಾಶಿ ಸ್ಥಿತ ಕೇತುವಿನ ಕಾರಣ ನಂಬಿಸಿ ಮೋಸ ಮಾಡುವವರಿದ್ದಾರೆ. ಜಾಗೃತರಾಗಿರಿ. ಸಹೋದರರಲ್ಲಿ ಒಮ್ಮತದ ಕೊರತೆಯಿಂದ ಆಸ್ತಿ ಹಂಚಿಕೆ ವಿಷಯಗಳು ಬರೆಹರಿಯದು. 'ಮಾತೇ ಮುತ್ತು'. ದುಡುಕಿ ಮಾತನಾಡದಿರಿ. ಆಹಾರ–ವಿಹಾರಗಳಲ್ಲಿ ಸಂಯಮವಿರಲಿ.
– ಶ್ರೀ ಗಾಯತ್ರಿ ಮಂತ್ರ ಜಪಿಸಿ, ಶುಭಸಂಖ್ಯೆ–9.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ವಾರದ ಆದಿಗೆ ವಿಶ್ವಾಸ ಪಾತ್ರರ ಮಾರ್ಗದರ್ಶನದಿಂದ ಕಗ್ಗಂಟಾಗಿದ್ದ ಸಮಸ್ಯೆಗೆ ಪರಿಹಾರ ದೊರಕುವುದು. ನಿಮ್ಮ ಆತ್ಮಶಕ್ತಿಯೇ ನಿಮ್ಮ ಬೆಸ್ಟ್ ಫ್ರೆಂಡ್. ಕೈಗೊಂಡ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವುದು. 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ನಿಮ್ಮ ವಾಕ್ಚಾತುರ್ಯದಿಂದ ಕಾರ್ಯ ಸಾಧನೆ ಮಾಡಿಕೊಳ್ಳುವಿರಿ. ಕೃಷಿ ಉಪಕರಣ ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ಆಧ್ಯಾತ್ಮ ಜ್ಞಾನಾರ್ಜನೆಯಲ್ಲಿ ಒಲವು ತೋರುವಿರಿ.
– ಶ್ರೀ ಗಣಪತಿ ಆರಾಧನೆ, ಶುಭಸಂಖ್ಯೆ–4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
'ಹಂಗಿನ ಹಾಲಿಗಿಂತ ರಾಗಿ ಅಂಬಲಿ ಲೇಸು' ಎಂಬ ಗಾದೆ ಈ ವಾರದಲ್ಲಿ ನಿಮ್ಮ ಅರಿವಿಗೆ ಬರುವುದು. ಸತಿ–ಸುತರು ಎದಿರಾಡುವುದರಿಂದ ಮನಸ್ಸಿಗೆ ಬೇಸರವಾಗುವುದು. ಪುಸ್ತಕ ವ್ಯಾಪಾರಿಗಳಿಗೆ ದೊಡ್ಡ ವ್ಯಾಪಾರ ಕುದುರುವುದು. ಭೂಮಿ ಕ್ರಯ–ವಿಕ್ರಯಗಳಲ್ಲಿ ಧನಪ್ರಾಪ್ತಿ ಆಗುವ ಸಂಭವವಿದೆ. ಗುರುಬಲವಿಲ್ಲದ ಕಾರಣ ಮಹತ್ತರ ಕೆಲಸಗಳನ್ನು ಸ್ವಲ್ಪ ಸಮಯ ಮುಂದೂಡಿ. ಆರೋಗ್ಯ ಅಷ್ಟಕ್ಕಷ್ಟೆ.
– ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ, ಶುಭಸಂಖ್ಯೆ–3.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ಸಾಡೇಸಾತಿಯ ಹಿಡಿತದಲ್ಲಿದ್ದೀರಿ, ಅನಿವಾರ್ಯವಲ್ಲದ ಕೆಲಸಗಳನ್ನು ಮುಂದಕ್ಕೆ ಹಾಕಿ. ಕೇಳಿಸಿಕೊಂಡಿದ್ದಕ್ಕೆಲ್ಲಾ ಮಹತ್ವ ಕೊಡಬೇಡಿ. ಕೆಲ ಸಮಯ 'ಜಾಣ ಕಿವುಡು ಬುದ್ಧಿವಂತರ ಲಕ್ಷಣ'. ಶ್ರೀಮತಿಯೊಂದಿಗೆ ಸೋತು ಗೆದ್ದಲ್ಲಿ ಮನೆಯಲ್ಲಿ ಶಾಂತಿ ನೆಲೆಸುವುದು. ದೂರ ಪ್ರಯಾಣಗಳಿಂದ ತೊಂದರೆ ಉಂಟಾದೀತು. ವಾರಾಂತ್ಯಕ್ಕೆ ಶುಭ ಚಂದ್ರನ ಪರಿಣಾಮ ನಿರೀಕ್ಷಿತ ಧನ ಕೈ ಸೇರುವುದು. ಸುಖ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ.
– ಶ್ರೀ ಆಂಜನೇಯ ದರ್ಶನ, ಶುಭಸಂಖ್ಯೆ–7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಭಾಜನರಾಗುವಿರಿ. ನಿಮ್ಮ ಬುದ್ಧಿ ಕುಶಲತೆ ಉತ್ತಮ ಮಟ್ಟದ್ದಾಗಿರುತ್ತದೆ. ಸ್ಥಿರಾಸ್ತಿ, ನೂತನ ವಾಹನ ಹೊಂದಲು ಬೃಹಸ್ಪತಿಯ ಕೃಪೆ ಇದೆ. ಸಾಮಾಜಿಕ ಜೀವನದಲ್ಲಿ ಎದುರಾಗುವ ಆತಂಕಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಅದೃಶ್ಯವಾಗುವುದು. ವಿವಾಹಯೋಗ್ಯರಿಗೆ ಸೂಕ್ತ ವಧು–ವರ ದೊರೆಯುವ ಸಾಧ್ಯತೆ ಇದೆ. ವ್ಯಯಸ್ಥಿತ ಶನಿಯಿಂದ ಅನಿರೀಕ್ಷಿತ ದೊಡ್ಡ ಖರ್ಚುಗಳ ಎದುರಾಗಿ ಕಂಗಾಲಾಗುವಿರಿ. – ಶ್ರೀ ಶನಿ ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ–1.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಆಪ್ತೇಷ್ಟರ ಮಿಲನ, ಸಂತೋಷ ಕೂಟಗಳು ನಡೆದೀತು. ಹಲವು ಮೂಲಗಳಿಂದ ಧನ ಸಂಚಯವಾದರೂ ಮನಸ್ಸಿನ ಅಸ್ಥಿರತೆ ನಿವಾರಣೆ ಆಗದು. ಕೃಷಿಕರಿಗೆ ಬೆಳೆದ ಫಸಲಿಗೆ ಸೂಕ್ತ ಬೆಲೆ ದೊರೆಯಲಿದೆ. ವಿದ್ಯಾಸಾಧನಗಳಲ್ಲಿ ಗೌರವ, ಪ್ರಶಸ್ತಿಗಳು ದೊರೆಯುವುದು. ಗುರುದೇವ ಅಶುಭನಿದ್ದು ಯೋಚಿಸಿದ್ದೆಲ್ಲವನ್ನೂ ಮಾತನಾಡಬೇಡಿ, ಕೊಂಚ ಯೋಚಿಸಿ ಮಾತನಾಡಿ, ಅನರ್ಥಗಳನ್ನು ಅವಾಯ್ಡ್ ಮಾಡಿ, ವಾರಾಂತ್ಯಕ್ಕೆ ಧರ್ಮಕ್ಷೇತ್ರಕ್ಕೆ ಭೇಟಿ.
– ಶ್ರೀ ಗುರುರಾಯರ ಪ್ರಾರ್ಥನೆ, ಶುಭಸಂಖ್ಯೆ–9.

ಪರಿಸರ ಸ್ನೇಹಿಯಾಗಿಯೂ ಗಣಪನ ಆರಾಧನೆ



ಡಾ. ಸುಧಾ. ಎಂ.ಎನ್. ಮೊ: 9448071933

ಶ್ರಾವಣ ಮಾಸವೆಂದರೆ ಹಬ್ಬಗಳ ಸಾಲು ಸಾಲು, ಆಯಾ ಋತುಗಳಿಗೆ ಅನುಸಾರವಾಗಿ ಆಯಾ ದೇವ ದೇವತೆಯರ ಹಬ್ಬಕ್ಕಾಗಿ ಸಿದ್ಧಪಡಿಸುವ ನಮ್ಮ ವಿವಿಧ ಆಹಾರ ವಿಧಾನಗಳು, ನಮ್ಮ ಸಂಸ್ಕೃತಿಯನ್ನು ಆರೋಗ್ಯ ಪದ್ಧತಿಯನ್ನು ಪ್ರತಿನಿಧಿಸಿದರೆ, ಆಯಾ ಹಬ್ಬದ ಅಧಿದೇವತೆಗಳು ನಮ್ಮ ಜೀವನದ ಎಲ್ಲ ಸ್ತರಗಳನ್ನು, ಪುರುಷಾರ್ಥಗಳನ್ನು ಪ್ರತಿನಿಧಿಸುತ್ತಾರೆ. ಮೊನ್ನೆ ಮೊನ್ನೆಯಷ್ಟೇ ಮುಗಿದ ಕೃಷ್ಣ ಜನ್ಮಾಷ್ಟಮಿಯು ಮನೆ ಮನೆಯಲ್ಲಿನ ಪುಟ್ಟ ತುಂಟ ಮಕ್ಕಳ ಆನಂದವನ್ನು ನೆನಪಿಸಿದರೆ, ಪರಶಿವನ ಆದರ್ಶ ಸಂಸಾರದ ಅಮ್ಮ ಪಾರ್ವತಿ, ಮಗ ಗಣಪನನ್ನು ಆಧರಿಸಿ ಗೌರವಿಸುವ ಹಬ್ಬ ನಮ್ಮ ಗೌರಿ ಗಣೇಶ ಚತುರ್ಥಿ. ನಮ್ಮ ಯಾವುದೇ ಹಬ್ಬ, ಪೂಜೆ, ಯಜ್ಞ, ಯಾಗ ಯಾವುದೇ ದೇವತೆಯರದ್ದೇ ಆಗಿದ್ದರೂ ಅದರ ಆದಿಯಲ್ಲಿ ಪೂಜೆ ಸಲ್ಲುವುದು ವಿಘ್ನ ನಿವಾರಕ ಗಣಪನಿಗೆ. ನಾನಾ ರೂಪ, ಗುಣವನ್ನು ಧರಿಸಿ ನಾನಾ ಹೆಸರುಗಳಿಂದ ಪೂಜಿತನಾಗುವ ಗಣಪ ಕಲಾರಾಧಕ.



ಓಂಕಾರ ಸ್ವರೂಪಿ ಗಣಪ ತ್ರಿಕಾಲ ವಂದಿತ, ತ್ರಿಗುಣಾತ್ಮಕ (ಸತ್ವ, ರಜ, ತಮಸ್ ಗುಣಗಳು) ಗಣಪ, ಆದಿ ವಂದಿತನಾಗಿರುವುದರಿಂದ ಬ್ರಹ್ಮ ಸ್ವರೂಪಿ, ವಿಘ್ನವಿನಾಶಕನಾಗಿರುವುದರಿಂದ ಹರಸ್ವರೂಪಿ, ಭಕ್ತರ ಕಾಪಾಡುವ ಸೃಷ್ಟಿಕರ್ತ ವಿಷ್ಣು ಸ್ವರೂಪಿಯೂ ಹೌದು. ಮಾನವ ಶರೀರದ ಷಟ್ ಚಕ್ರಗಳಲ್ಲಿಯ ಮೂಲಾಧರ ಚಕ್ರ ಸ್ಥಿತ ಗಣಪನ ವಂದನೆಯಿಂದ ಶುರುಮಾಡಿ ಆಜ್ಞಾನುಚಕ್ರದಲ್ಲಿಯ ಪಾರ್ವತಿ ಪರಮೇಶ್ವರರ (ಪ್ರಕೃತಿ ಪುರುಷ) ದರ್ಶನವಾಗುವತನಕ ಗಣಪನ ಅನುಗ್ರಹ ಮುಖ್ಯವಾದದ್ದು, ಯೋಗಕಾರಕ ಗಣಪನಿಂದಲೇ.

ಭಾರತದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ನಾನಾ ರೂಪ, ಸ್ತುತಿ, ಆಚರಣೆಗಳ ವಿಧಿಯಲ್ಲಿ ಗಣಪನಿಗೆ ಪೂಜೆ ಸಲ್ಲುತ್ತದೆ. ಗಣಪತಿಯ ಆರಾಧನೆ ಭೌಗೋಳಿಕ ಮತ್ತು ಸಾಂಸ್ಕೃತಿಕವಾಗಿ ಭಾರತಕ್ಕೆ ಮಾತ್ರ ಸಂಬಂಧಿಸಿರದೇ ಇಂಡೋನೇಷಿಯಾ, ಫಿಲಿಫೈನ್ಸ್, ಬಾಲಿ, ಜಪಾನ್, ಟಿಬೆಟ್, ಥೈಲ್ಯಾಂಡ್ ಎಲ್ಲ ದೇಶಗಳಲ್ಲಿಯೂ ಕಂಡುಬರುತ್ತದೆ. ಇಂಡೋನೇಷಿಯಾದ ಕರೆನ್ಸಿಯಲ್ಲಿ ಗಣಪತಿಯ ಚಿತ್ರವನ್ನು ಬಳಸಿದ್ದರೆ, ಥೈಲ್ಯಾಂಡಿನ ಸಿಲ್ಪಕಾರ್ನ ವಿಶ್ವವಿದ್ಯಾಲಯದ ಕಲಾ ವಿಭಾಗದ ಮುದ್ರಿಕೆ (ಸೀಲ್)ಯಲ್ಲಿ ನಮ್ಮ ಗಣೇಶನಿದ್ದಾನೆ. ವೈದಿಕರು ಮಾತ್ರವಲ್ಲದೇ ಬೌದ್ಧರೂ, ಜೈನರೂ ಗಣೇಶನನ್ನು ವಿವಿಧ ರೂಪದಲ್ಲಿ ಪೂಜಿಸುತ್ತಾರೆ. ತಾಂತ್ರಿಕರು, ಆಗಮಿಕರು ಎಲ್ಲರ ಆರಾಧನೆಯಲ್ಲಿ ಗಣೇಶನಿಲ್ಲದ ವಿಷಯವೇ ಇಲ್ಲ ! ಕಡಬು, ಮೋದಕ, ಚಕ್ಕುಲಿಗಳ ಪ್ರಿಯ. ಬುದ್ಧಿ ವಿವೇಕಗಳ ನಮ್ಮ ಗಣಪ ವಿಶ್ವವಿನಾಯಕ, ಎಲ್ಲ ಜಾತಿ–ಧರ್ಮಗಳನ್ನು ಮೀರಿ ಪ್ರಜಾಮಿತ್ರನಾಗಿದ್ದಾನೆ. ಅಜಂನಿರ್ವಿಕಲ್ಪಂ ಅಂದರೆ ಕಲ್ಪನೆಗೆ ನಿಲುಕದ ವಿಶ್ವ ವಿನಾಯಕ ನಮ್ಮ ಹೃದಯದಲ್ಲಿ ಚಿರವಾಗಿ ನೆಲಸಲಿ.


ನಿಮಗಿದು ಗೊತ್ತೇ?: ನಮ್ಮ ಕರ್ನಾಟಕಕ್ಕೂ ಗಣಪನಿಗೂ ಇರುವ ನಂಟು ಏನು ಗೊತ್ತೆ? ಪವಿತ್ರ ಗಂಗಾನದಿ ಉತ್ತರ ಭಾರತದ ಜೀವನದಿಯಾಗಿತ್ತು. ದಕ್ಷಿಣದಲ್ಲಿ ಪ್ರಮುಖ ನದಿಗಳಿಲ್ಲದೆ ಜನತೆ ತೊಂದರೆ ಅನುಭವಿಸುತ್ತಿದ್ದರಂತೆ. ಬ್ರಹ್ಮರ್ಷಿ ಅಗಸ್ತ್ಯರು ಬ್ರಹ್ಮರ ಅಣತಿಯಂತೆ ಕೈಲಾಸಕ್ಕೆ ತೆರಳಿ ಜನರ ಕಷ್ಟ ನೀಗಿಸಲು ಶಿವಧ್ಯಾನಕ್ಕೆ ಕುಳಿತರಂತೆ, ಶಿವನು ಅಗಸ್ತ್ಯರ ಕಮಂಡಲಕ್ಕೆ ನೀರನ್ನು ಹಾಕಿ ಸೂಕ್ತ ಸ್ಥಳದಲ್ಲಿ ಚೆಲ್ಲುವಂತೆ ಆದೇಶಿಸಿದನಂತೆ. ಕಮಂಡಲ ಹಿಡಿದ ಅಗಸ್ತ್ಯರು ನಮ್ಮ ಕೊಡಗಿನ ತಲಕಾವೇರಿ ತಲುಪಿದರು. ಅಲ್ಲಿ ಪುಟ್ಟ ಬಾಲಕನ ರೂಪದಲ್ಲಿದ್ದ ಗಣಪನಿಗೆ ಕಮಂಡಲ ನೋಡಿಕೊಳ್ಳಲು ಹೇಳಿ ವಿಶ್ರಾಂತಿ ಪಡೆಯುವಾಗ, ಪಕ್ಷಿಯೊಂದು ಹಾರಿ ಬಂದು ಗಣಪತಿ ನೆಲದ ಮೇಲಿಟ್ಟಿದ್ದ ಕಮಂಡಲವನ್ನು ಉರುಳಿಸಿತು. ಅದೇ ಪವಿತ್ರ ಜಲ ನಮ್ಮ ಕರುನಾಡಿನ ಜೀವನದಿ ದಕ್ಷಿಣ ಭಾರತದ ಗಂಗೆ, ತಾಯಿ ಕಾವೇರಿ. ಗುರು ಅಗಸ್ತ್ಯನ ಧರ್ಮಪತ್ನಿ ಕಾವೇರಿ. ನೋಡಿ ನಮ್ಮ ಗಣಪನಿಗೂ ನಮ್ಮ ಜೀವನಾಡಿ ಕಾವೇರಿಗೂ ನಂಟು !

ಸಂತಸ, ಸಂಯಮ, ಸಮಾಧಾನದ ಸಂಕೇತನಾದ ಗಣ ನಾಯಕನ ಆರಾಧನೆಯನ್ನು ಪರಿಸರ ಸ್ನೇಹಿಯಾಗಿಯೂ ಆಚರಿಸೋಣ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ದೇಶಪ್ರೇಮದ ಉದ್ದೀಪನವಾಗಿ ಸಾರ್ವಜನಿಕ ಗಣೇಶೋತ್ಸವ ವೇದಿಕೆಯಾಯಿತು. ಸ್ವಾತಂತ್ರ್ಯದ'ಅಮೃತೋತ್ಸವ'ದ ಈ ಸಮಯದಲ್ಲಿ ಬೇರೆಲ್ಲ ಸಂಘರ್ಷಗಳನ್ನು ಮರೆತು, ಮೌಢ್ಯವಿಲ್ಲದೆ, ಜಾತಿ ಮತದ ಬಂಧನವಿಲ್ಲದೇ, ಮಾನವೀಯವಾಗಿ ವಿಶ್ವಪ್ರಜ್ಞೆ, ಸಾಮಾಜಿಕ ಸಾಮರಸ್ಯದ ಸಂಕೇತವಾಗಿ ಆಚರಿಸಬೇಕಾಗಿದೆ. ■

ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಇನ್ನು ಮಂಗಳವಾರ ವಾರದ ರಜೆ

ಮಡಿಕೇರಿ,ಆ.27– ನಗರದ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಸೋಮವಾರ ನೀಡಲಾಗುತ್ತಿದ್ದ ವಾರದ ರಜೆ ದಿನವನ್ನು ಬದಲಿಸಿ, ಮುಂದಿನ ವಾರದಿಂದ ಪ್ರತೀ ಮಂಗಳವಾರ, ವಾರದ ರಜೆ ನೀಡಲು ಜಿಲ್ಲಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಜನರಲ್ ತಿಮ್ಮಯ್ಯ ಸ್ಮಾರಕ ಭವನ ನಿರ್ವಹಣಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.



ಪ್ರವಾಸಿ ಸಂದರ್ಶಕರ ಬೇಡಿಕೆಗೆ ಅನುಗುಣವಾಗಿ ಸೋಮವಾರ ಮ್ಯೂಸಿಯಂ ತೆರೆದು, ಪ್ರತಿ ಮಂಗಳವಾರ ತಿಮ್ಮಯ್ಯ ಮ್ಯೂಸಿಯಂಗೆ ವಾರದ ರಜೆ ನೀಡಲಾಗುತ್ತದೆ. ಆದ್ದರಿಂದ ಆ.29ರಿಂದ ಅನ್ವಯ ಆಗುವಂತೆ ಪ್ರತೀ ಸೋಮವಾರ ತಿಮ್ಮಯ್ಯ ಸ್ಮಾರಕ ಭವನ ಸಾರ್ವಜನಿಕರ ಸಂದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕಸಾಪ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ



ವಿರಾಜಪೇಟೆ, ಆ.27– ಕನ್ನಡ ಸಾಹಿತ್ಯ ಪರಿಷತ್ ಸದಸ್ಯತ್ವ ಅಭಿಯಾನಕ್ಕೆ ವಿರಾಜಪೇಟೆ ತಾಲೂಕು ಘಟಕದ ವತಿಯಿಂದ ನಗರದ ನಿರೀಕ್ಷಣಾ ಮಂದಿರ ಆವರಣದಲ್ಲಿ ಪತ್ರಕರ್ತರ ಸದಸ್ಯತ್ವ ನೋಂದಾಯಿಸುವ ಮೂಲಕ ಚಾಲನೆ ನೀಡಲಾಯಿತು.

ಪರಿಷತ್ ತಾಲೂಕು ಅಧ್ಯಕ್ಷ ಡಿ.ಪಿ.ರಾಜೇಶ್ ಪದ್ಮನಾಭ ಅವರು ಮಾತನಾಡಿ, ತಾಲೂಕಿನಲ್ಲಿ ಸುಮಾರು 10,000 ಮಂದಿ ಸದಸ್ಯರನ್ನಾಗಿಸುವ ಗುರಿ ಹೊಂದಿದ್ದೇವೆ. ಜಿಲ್ಲಾಧ್ಯಕ್ಷರ ಆಶಯದಂತೆ ಜಿಲ್ಲೆಯಲ್ಲಿ 50,000 ಮಂದಿ ಸದಸ್ಯರನ್ನು ಕನ್ನಡ ಸಾಹಿತ್ಯ ಪರಿಷತ್‌ಗೆ ಸದಸ್ಯರನ್ನಾಗಿ ದಾಖಲಿಸುವ ಯೋಜನೆ ಹೊಂದಲಾಗಿದೆ. ಸದಸ್ಯತ್ವ ಅಭಿಯಾನ ಸರ್ಕಾರಿ ನೌಕರರು, ಶಿಕ್ಷಕರು ಮತ್ತು ಕನ್ನಡ ಅಭಿಮಾನಿಗಳನ್ನು ನೋಂದಣಿ ಮಾಡುವುದಾಗಿದೆ ಎಂದರು. ಮಾಜಿ ಸೈನಿಕರಿಗೆ ಸದಸ್ಯತ್ವ ನೋಂದಣಿ ಉಚಿತವಾಗಿರುತ್ತದೆ ಎಂದ ರಾಜೇಶ್ ಸದಸ್ಯತ್ವ ನೋಂದಣಿಗಾಗಿ ಪರಿಷತ್‌ನಿಂದ ಹೊಸದಾಗಿ ಆ್ಯಪ್ ಒಂದು ಬಿಡುಗಡೆಗೊಳಿಸಿದ್ದು, ಸಾರ್ವಜನಿಕರು ಡೌನ್‌ಲೋಡ್ ಮಾಡಿಕೊಂಡು ನೋಂದಾಯಿಸಬಹುದು ಎಂದು ಮಾಹಿತಿ ನೀಡಿದರು. ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಜಿಲ್ಲಾಧ್ಯಕ್ಷ ಎಂ.ಎಸ್. ಪೂವಯ್ಯ, ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಕಾರ್ಯದರ್ಶಿ ಟೋಮಿ ತೋಮಸ್ ಮತ್ತು ಪತ್ರಕರ್ತರಾದ ಎಂ.ಕೆ.ರವಿಕುಮಾರ್, ಟಿ.ಜೆ.ಕಿಶೋರ್ ಕುಮಾರ್ ಶೆಟ್ಟಿ, ಯುವರಾಜ್ ಕೃಷ್ಣ, ಶಶಿ ಮತ್ತಿತರರು ಭಾಗವಹಿಸಿದ್ದರು.

ಶ್ರೀ ನಾರಾಯಣಗುರು ಸಾಮಾಜಿಕ ಕ್ರಾಂತಿಯ ಹರಿಕಾರ

ಶ್ರೀ ನಾರಾಯಣಗುರು, ಮಹಾತ್ಮ ಅಯ್ಯನ್ ಕಾಳಿ ಜನ್ಮದಿನೋತ್ಸವದಲ್ಲಿ ಬಣ್ಣನೆ

ಕುಶಾಲನಗರ, ಆ.27– ಸಮಾಜದಲ್ಲಿನ ಮೌಢ್ಯ, ಅಂಧಕಾರ ಹಾಗೂ ಅಸ್ಪೃಶ್ಯತಾ ನಿರ್ಮೂಲನೆಗಾಗಿ ಹೋರಾಟ ನಡೆಸಿದ ಸಾಮಾಜಿಕ ಕ್ರಾಂತಿಯ ಹರಿಕಾರ ಶ್ರೀ ನಾರಾಯಣ ಗುರು ಎಂದು ಜಿಲ್ಲಾ ಶ್ರೀ ನಾರಾಯಣ ಧರ್ಮಪರಿಪಾಲನ ಸಮಿತಿ ಅಧ್ಯಕ್ಷ ವಿ.ಕೆ.ಲೋಕೇಶ್ ಬಣ್ಣಿಸಿದರು.



ಕೊಡಗು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನಿವೃತ್ತ ನೌಕರರ ಸಂಘದ ವತಿಯಿಂದ ಇಲ್ಲಿನ ಮಹಾಲಕ್ಷ್ಮಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಶ್ರೀ ನಾರಾಯಣ ಗುರು ಹಾಗೂ ಮಹಾತ್ಮ ಅಯ್ಯನ್ ಕಾಳಿ ಅವರ ಜನ್ಮದಿನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾರಾಯಣ ಗುರುಗಳು ಹೇಳಿದಂತೆ ನಮಗೆ ಬೇಕಾಗಿರುವುದು ದೇವಸ್ಥಾನವಲ್ಲ. ನಮಗೆ ಬೇಕಿರುವುದು ಶಾಲೆ, ಶಿಕ್ಷಣ ಎಂಬುದನ್ನು ಅರಿಯಬೇಕು. ಸಂಘಟನೆಯಾಗಿ ಶಕ್ತರಾಗಬೇಕು. ಸಮುದಾಯದ ಬಾಂಧವರು ಮದ್ಯ ಕುಡಿಯಬೇಡಿ, ತಯಾರಿಸಬೇಡಿ, ಮಾರಾಟ ಮಾಡಬೇಡಿ. ದುಶ್ಚಟದಿಂದ ದೂರ ಇದ್ದರೆ ಮಾತ್ರ ಸಮಾಜದಲ್ಲಿ ಸಮಾನತೆ ಕಾಣಲು ಸಾಧ್ಯ ಎಂದು ಹೇಳಿದರು.

ಪ್ರತಿಯೊಬ್ಬರು ಶಿಕ್ಷಣ ಪಡೆದು ವಿದ್ಯಾವಂತ ಸಮಾಜ ನಿರ್ಮಾಣ ಮಾಡಬೇಕು. ಆರ್ಥಿಕವಾಗಿ ಶಕ್ತಿವಂತರಾಗಬೇಕು. ಆಡಂಬರ, ವೈಭವದ ಮದುವೆಗಳಿಗೆ ಕಡಿವಾಣ ಹಾಕಿ ಸರಳ ವಿವಾಹಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಬಾಳೆಲೆ ವಿಜಯಲಕ್ಷ್ಮಿ ಪಿಯು ಕಾಲೇಜು ನಿವೃತ್ತ ಪ್ರಾಂಶುಪಾಲ ಡಾ.ಜೆ.ಸೋಮಣ್ಣ ಮಾತನಾಡಿ, ಸ್ವಾಮಿ ವಿವೇಕಾನಂದರು ಕೇರಳಕ್ಕೆ ಭೇಟಿ ನೀಡಿದ ಸಂದರ್ಭ ಅಲ್ಲಿ ನಡೆಯುತ್ತಿದ್ದ ಅಮಾನುಷ ಕೃತ್ಯಗಳನ್ನು ಕಂಡು ಕೇರಳ ಒಂದು ಹುಚ್ಚ ಆಸ್ಪತ್ರೆ ಎಂದಿದ್ದರು. ಜಾತಿ ಪದ್ಧತಿ, ಮೌಢ್ಯತೆ ವಿರುದ್ಧ ನಾರಾಯಣ ಗುರುಗಳು ಏಕಾಂಗಿಯಾಗಿ ಹೋರಾಟ ಮಾಡಿ ದೊಡ್ಡ ಕ್ರಾಂತಿಯನ್ನು ಮಾಡಿದರು ಎಂದು ಬಣ್ಣಿಸಿದರು.

ನಿವೃತ್ತ ಪ್ರಾಂಶುಪಾಲ ಎಚ್.ವಿ.ಬೆಳ್ಳಿಯಪ್ಪ ಮಾತನಾಡಿ, ಶ್ರೀ ನಾರಾಯಣಗುರು, ಮಹಾತ್ಮ ಅಯ್ಯನ್ ಕಾಳಿ ಅವರು ಜನರಲ್ಲಿ ಜಾಗೃತಿ ಮೂಡಿಸಿ ಸಮಾನತೆ ಹಾದಿಗೆ ತರಲು ಪ್ರಯತ್ನ ಮಾಡುತ್ತಿದ್ದರು. ಇಂಥ ನಾಯಕರ ಹುಟ್ಟಿನಿಂದ ಇದೀಗ ಸಮಾಜದಲ್ಲಿ ಸಮಾನತೆ, ಏಕತೆ ಹಾಗೂ ಸಹೋದರತ್ವ ಕಾಣುತ್ತಿದ್ದೇವೆ ಎಂದರು.

ಎಸ್ಸಿ, ಎಸ್ಟಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮಹಾ ಬೋಧಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಸಿ.ಸತೀಶ್, ಡಾ.ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಎಸ್.ಜೆ.ಸತೀಶ್, ದಸಂಸ ಜಿಲ್ಲಾ ಸಂಯೋಜಕ ಜೆ.ಆರ್.ಪಾಲಾಕ್ಷ, ಜಿಲ್ಲಾ ಸಂಚಾಲಕ ಕೆ.ಬಿ.ರಾಜು,ಜಿಲ್ಲಾ ಸಂಚಾಲಕಿ ಗಾಯಿತ್ರಿ ನರಸಿಂಹ, ಮುಖಂಡರಾದ ಎಂ.ಎಸ್.ವೀರೇಂದ್ರ, ಪರಶುರಾಮ, ಮೊಗೇರ ಸಮಾಜದ ಜಿಲ್ಲಾಧ್ಯಕ್ಷ ಗೌತಮ್ ಶಿವಪ್ಪ ಆದಿದ್ರಾವಿಡ ಸಮಾಜದ ಎಚ್.ಎಂ.ಸೋಮಪ್ಪ, ಎಸ್ಸಿ, ಎಸ್ಟಿ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಬಿ.ಸಿ.ರಾಜು, ಖಜಾಂಚಿ ನಿಂಗರಾಜು, ನಿರ್ದೇಶಕ ರಾಮಚಂದ್ರ, ನಾಗೇಶ್, ಬೇಲಯ್ಯ ಇತರರಿದ್ದರು.

ಮಹಿಳೆ ನಾಪತ್ತೆ

ಗೋಣಿಕೊಪ್ಪ, ಆ.27– ಮಾಯಮುಡಿ ಗ್ರಾಮದ ಬಲ್ಯಂಡ ಆರ್. ವೀಣಾ(62) ಅವರು ಆ.25 ರಿಂದ ಕಾಣೆಯಾಗಿ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರು ಕೊಡವ, ಕನ್ನಡ ಮಾತನಾಡುತ್ತಾರೆ.



ಈ ಬಗ್ಗೆ ಅವರ ಸಂಬಂಧಿ ಕೆ.ಬಿ.ಸತೀಶ ಗೋಣಿಕೊಪ್ಪ ಠಾಣೆಯಲ್ಲಿ ದೂರು ದಾಖಲಿಸಿದ್ದು, ಸುಳಿವು ಸಿಕ್ಕವರು 08274247333 ಸಂಖ್ಯೆಗೆ ಮಾಹಿತಿ ನೀಡುವಂತೆ ಗೋಣಿಕೊಪ್ಪ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಗೋವಿಂದ ಕುಂಜತ್ತಾಯ ನಿಧನ

ನಾಪೋಕ್ಲು, ಆ.27– ವಿರಾಜಪೇಟೆ ಪಟ್ಟಣದ ಕೂಕ್ಲೂರು ನಿವಾಸಿ ಗೋವಿಂದ ಕುಂಜತ್ತಾಯ (85) ಶುಕ್ರವಾರ ನಿಧನರಾಗಿದ್ದು, ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ಜರುಗಿತು. ಮೃತರು ಪತ್ನಿ ಹಾಗೂ ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ.



ನಾಪೋಕ್ಲು ಸಮೀಪ ಹುಚ್ಚು ನಾಯಿ ಕಡಿತಕ್ಕೆ ಎರಡು ಹಸು ಸಾವು

ಮಡಿಕೇರಿ,ಆ.27– ನಾಪೋಕ್ಲು ಸಮೀಪದ ಬೇತು ಗ್ರಾಮದಲ್ಲಿ ಹುಚ್ಚು ನಾಯಿ ದಾಳಿಗೆ ಎರಡು ಗಬ್ಬದ ಹಸುಗಳು ಸಾವನ್ನಪ್ಪಿದ ಘಟನೆ ನಡೆದಿದೆ.

ಬೇತು ಗ್ರಾಮದ ನಿವಾಸಿ ಐರೀರ ಪೂಣಚ್ಚ ಎಂಬವರಿಗೆ ಸೇರಿದ ಗಬ್ಬದ ಹಸು ಹುಚ್ಚು ನಾಯಿ ಕಚ್ಚಿದ ಪರಿಣಾಮ ಸಾವನ್ನಪ್ಪಿದೆ. ಪ್ರತಿ ದಿನ ಮೇಯಲು ಬಿಡುತ್ತಿದ್ದ ಹಸು ಕಳೆದ ಎರಡು ದಿನಗಳಿಂದ ರಾತ್ರಿ ಹಗಲು ಏಕಾಏಕಿ ಚೀರಾಡುತ್ತಾ ಬಾಯಿಯಲ್ಲಿ ನೊರೆ ಹಾಗೂ ರಕ್ತ ಬರುತ್ತಿರುವುದನ್ನು ಗಮನಿಸಿದ ಪೂಣಚ್ಚ ಸ್ಥಳೀಯ ಪಶುವೈದ್ಯಾಧಿಕಾರಿಗಳಿಗೆ ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಪಶುವೈದ್ಯಾಧಿಕಾರಿ ಪರಿಶೀಲಿಸಿದಾಗ ಹಸುವಿನ ಮೇಲೆ ನಾಯಿ ಕಚ್ಚಿದ ಗಾಯದ ಗುರುತು ಗೋಚರಿಸಿದ್ದು, ಇದು ಹುಚ್ಚು ನಾಯಿ ಕಚ್ಚಿರುವುದಾಗಿ ವೈದ್ಯರು ಸ್ಪಷ್ಟಪಡಿಸಿದ್ದಾರೆ. ಹಸುವಿನ ಹಾಲು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದ ಪೂಣಚ್ಚ ಕುಟುಂಬ ಕಂಗಾಲಾಗಿದ್ದು ಸಂಬಂಧಪಟ್ಟ ಇಲಾಖೆ ಸರ್ಕಾರದಿಂದ ನಷ್ಟ ಭರಿಸಿ ಕೊಡಬೇಕೆಂದು ಮನವಿ ಮಾಡಿದ್ದಾರೆ. ಅಲ್ಲದೆ ಎಂ.ಎಸ್.ಸುಬ್ರಮಣ್ಯ ಎಂಬವರ ಮೂರು ತಿಂಗಳ ಗಬ್ಬದ ಹಸು ಹಾಗೂ ಸಾಕು ನಾಯಿಗೂ ಹುಚ್ಚುನಾಯಿ ಕಚ್ಚಿದ್ದು ವೈದ್ಯರನ್ನು ಕರೆಸಿ ನಾಯಿಗೆ ರೇಬಿಸ್ ಚುಚ್ಚು ಮದ್ದು ನೀಡಿ ರಕ್ಷಿಸಲಾಗಿದೆ.

30 ಸಾವಿರ ರೂ. ಬೆಲೆ ಬಾಳುವ ಮೂರು ತಿಂಗಳ ಗಬ್ಬದ ಹಸು ಕಳೆದೆರಡು ದಿನಗಳಿಂದ ಇದೇ ರೀತಿ ಹಗಲು–ರಾತ್ರಿಯೆನ್ನದೆ ಚೀರಾಡುತ್ತಿರುವುದು ಕಂಡುಬಂದಿದೆ. ಬಾಣೆಯಲ್ಲಿ ಮೇಯಲು ಬಿಟ್ಟಿದ್ದಾಗ ಹಸು ಚೀರಾಡಿ ಕೆಲಸಗಾರನ ಮೇಲೆ ದಾಳಿ ಮಾಡಲು ಮುಂದಾಗಿದೆ. ಇದರಿಂದ ಸಂಶಯಗೊಂಡ ಸುಬ್ರಮಣ್ಯ ವೈದ್ಯರ ಗಮನಕ್ಕೆ ತಂದಿದ್ದಾರೆ. ಹುಚ್ಚು ನಾಯಿ ಕಚ್ಚಿದ್ದರಿಂದ ಈ ರೀತಿ ವರ್ತಿಸುತ್ತಿದೆ. ಅದನ್ನು ಅಲ್ಲೇ ಬಿಡಲು ವೈದ್ಯರು ಸೂಚಿಸಿದ್ದು, ಹಸು ಸಾವನ್ನಪ್ಪಿದೆ. ಇದರಿಂದ ಸಾಕಷ್ಟು ನಷ್ಟ ಸಂಭವಿಸಿದೆ ಎಂದು ಸುಬ್ರಮಣ್ಯ ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಬೀದಿನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಎರಡು ದಿನಗಳ ನಂತರ ಹಸುಗಳಿಗೆ ಕಚ್ಚಿದ ಹುಚ್ಚುನಾಯಿ ಸಾವನ್ನಪ್ಪಿರುವುದಾಗಿ ಗ್ರಾಮಸ್ಥರು ತಿಳಿಸಿದ್ದಾರೆ.



ಮಂಡ್ಯ, ಮದ್ದೂರಿನಲ್ಲಿ ರಣ ಮಳೆ: ಭಾರೀ ಅವಾಂತರ

• ಮನೆ, ಶಾಲೆಗಳಿಗೆ ನುಗ್ಗಿದ ನೀರು • ರಸ್ತೆ, ಸೇತುವೆ, ಹೊಲ–ಗದ್ದೆ ಜಲಾವೃತ

ಮದ್ದೂರು, ಆ.27– ಮಂಡ್ಯ, ಮದ್ದೂರು ಸೇರಿದಂತೆ ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ ಸುರಿದ ಭಾರಿ ಬಿರುಗಾಳಿ ಸಹಿತ ಮಳೆಗೆ 2 ಮೇಕೆ ಮೃತಪಟ್ಟು, ಲಕ್ಷಾಂತರ ರೂ. ಬೆಳೆ ಬಾಳುವ ತೆಂಗಿನಕಾಯಿ ಹಾಗೂ ರಸ್ತೆ, ಸೇತುವೆ ನೀರಿಗೆ ಕೊಚ್ಚಿಕೊಂಡು ಹೋಗಿ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ.

ಮಾದಪುರದೊಡ್ಡಿ: ತಾಲೂಕಿನ ಮಾದಪುರದೊಡ್ಡಿ ಗ್ರಾಮದಲ್ಲಿ ಮಳೆ ಬಂದ ಪರಿಣಾಮ ತೋಟದ ಮನೆಯಲ್ಲಿ ಹಾಕಿದ್ದ ಜಯಮುದ್ದೇಗೌಡರಿಗೆ ಸೇರಿದ್ದ 75 ಸಾವಿರ ತೆಂಗಿನಕಾಯಿ, ಮರಿಸ್ವಾಮಿ ಅವರಿಗೆ ಸೇರಿದ್ದ 9 ಸಾವಿರ ತೆಂಗಿನಕಾಯಿ ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಗ್ರಾಮದ ಪ್ರಮೀಳ ಎಂಬುವರು 2 ಎಕರೆ ಪ್ರದೇಶದಲ್ಲಿ, ಗೋಪಾಲಕೃಷ್ಣ ಹಾಗೂ ಮಹೇಂದ್ರ ಎಂಬುವರು ಒಂದೂವರೆ ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬೂದಗುಂಬಳ ನೀರಿಗೆ ಆಹುತಿಯಾಗಿ ಅಪಾರ ನಷ್ಟ ಉಂಟಾಗಿದೆ. ಗ್ರಾಮದ ಸೇತುವೆ ಶಿಥಿಲಗೊಂಡು ಸಂಚಾರಕ್ಕೆ ಅಡಚಣೆ ಉಂಟಾಗುವ ಜೊತೆಗೆ ಮಳೆ ನೀರು ಬೆಳೆಗಳಿಗೆ ನುಗ್ಗಿ ಬಹಳಷ್ಟು ನಷ್ಟ ಉಂಟಾಗಿದೆ.

ತಿಪ್ಪೂರು: ಗ್ರಾಮದ ಲೀಲಾವತಿ ಅವರ ತೋಟದ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿದ್ದ 2 ಮೇಕೆಗಳು ಮಳೆ ನೀರು ಬಂದ ಹಿನ್ನೆಲೆಯಲ್ಲಿ ಮೃತಪಟ್ಟಿವೆ. ಲೀಲಾವತಿ ಹಾಗೂ ಲಾಯರ್ ಮಲ್ಲಯ್ಯ ಅವರಿಗೆ ಸೇರಿದ್ದ ಸುಮಾರು 30 ಸಾವಿರ ತೆಂಗಿನಕಾಯಿ ನೀರಿನಲ್ಲಿ ತೇಲಿ ಹೋಗಿ ನಷ್ಟ ಉಂಟಾಗಿದೆ.

ಕೊಚ್ಚಿ ಹೋದ ಸೇತುವೆ: ತಿಪ್ಪೂರು ನಿಡಘಟ್ಟ ಸಂಪರ್ಕ ಕಲ್ಪಿಸುವ ಸೇತುವೆ ಮಳೆ ನೀರಿಗೆ ಕೊಚ್ಚಿ ಹೋದ ಪರಿಣಾಮ ಸಂಚಾರಕ್ಕೆ ಅಡಚಣೆ ಉಂಟಾಗಿ ಈ ಮಾರ್ಗದ ಜನರು ಸುಮಾರು 8ಕಿ.ಮೀ. ಸುತ್ತಿಕೊಂಡು ತಮ್ಮ ಗ್ರಾಮಗಳಿಗೆ ಹೋಗಬೇಕಾದ ಅನಿವಾರ್ಯತೆ ಬಂದಿದೆ. ಜೊತೆಗೆ ಬಾಳೆ ತೋಟ, ನಾಟಿ ಮಾಡಿದ್ದ ಭತ್ತ ಫಸಲು, ರೇಷ್ಮೆ ಸೇರಿದಂತೆ ವಿವಿಧ ಬೆಳೆಗಳು ನೀರಿಗೆ ಜಲಾವೃತಗೊಂಡಿದೆ.





ಕುದುರಗುಂಡಿ: ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಕೊಠಡಿಗಳಿಗೆ ಮಳೆ ನೀರು ನುಗ್ಗಿದ ಪರಿಣಾಮ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ತೊಂದರೆಯಾಗಿತ್ತು. ಸೋಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣಕ್ಕೆ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ಶಾಲೆಗೆ ರಜೆ ಘೋಷಿಸಲಾಗಿತ್ತು.

ಶಿಂಷಾ ನದಿ ಪ್ರವಾಹ ಮುನ್ನೆಚ್ಚರಿಕೆ: ತುಮಕೂರು ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದಾಗಿ ಶಿಂಷಾ ನದಿಯಲ್ಲಿ ಪ್ರವಾಹ ಭೀತಿ ಎದುರಾಗಿದೆ. ತುಮಕೂರು ಜಿಲ್ಲೆಯ ಮಾರ್ಕೋನಹಳ್ಳಿ ಅಣೆಕಟ್ಟು ಹಾಗೂ ಮಂಡ್ಯ ಜಿಲ್ಲೆಯ ಕೊಪ್ಪ ಮತ್ತು ಆತಗೂರು ಹೋಬಳಿಗಳಲ್ಲಿ ಹೆಚ್ಚಿನ ಮಳೆಯಾಗುತ್ತಿರುವುದರಿಂದ ಶಿಂಷಾ ನದಿಯಲ್ಲಿ ಪ್ರವಾಹ ಭೀತಿ ಎದುರಾಗಿದ್ದು, ನದಿ ವ್ಯಾಪ್ತಿಯ ಇಕ್ಕೆಲಗಳ ಗ್ರಾಮದ ಜನರು ಜಾನುವಾರುಗಳೊಂದಿಗೆ ನದಿಗೆ ಇಳಿಯದಂತೆ ತಾಲೂಕು ಆಡಳಿತ ಎಚ್ಚರಿಕೆ ನೀಡಿದೆ.

ಕುರಿ ಸಾಗಿಸುತ್ತಿದ್ದ ಕ್ಯಾಂಟರ್‌ಗೆ ಲಾರಿ ಡಿಕ್ಕಿ: ಚಾಲಕ ಸಾವು, ಇಬ್ಬರಿಗೆ ಗಾಯ

ಗಾಯಾಳುಗಳ ರಕ್ಷಣೆ ನೆಪದಲ್ಲಿ ಕುರಿಗಳ ಹೊತ್ತೊಯ್ದ ಸ್ಥಳೀಯರು!

ಮದ್ದೂರು, ಆ.27– ಲಾರಿ ಹಾಗೂ ಕ್ಯಾಂಟರ್ ನಡುವೆ ಅಪಘಾತ ಸಂಭವಿಸಿ, ಚಾಲಕ ಸಾವನ್ನಪ್ಪಿದ್ದು, ಇಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಹೆಮ್ಮನಹಳ್ಳಿ ಸಮೀಪದ ಮದ್ದೂರು–ತುಮಕೂರು ಹೆದ್ದಾರಿಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಟ್ಯಾಂಕರ್ ಚಾಲಕ ಮೂಲತಃ ತಮಿಳುನಾಡಿನ ನೀಲಿಕೋಟ ಸಂಜಯ್‌ಕುಮಾರ್ ಮೃತಪಟ್ಟ ಚಾಲಕ. ಈತನೊಂದಿಗೆ ಕ್ಯಾಂಟರ್‌ನಲ್ಲಿ ಪ್ರಯಾಣಿಸುತ್ತಿದ್ದ ಕೃಷ್ಣವೇಲು ಹಾಗೂ ಮುರುಗೇಶ್ ಗಾಯಗೊಂಡು ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ತುಮಕೂರಿನಿಂದ ತಮಿಳುನಾಡಿನತ್ತ ಕುರಿಗಳ ಸಾಗಾಟ ಮಾಡುತ್ತಿದ್ದ ಕ್ಯಾಂಟರ್‌ಗೆ ಎದುರಿನಿಂದ ಬಂದ ಮದ್ದೂರಿನಿಂದ ತುಮಕೂರಿಗೆ ಹೋಗುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಕ್ಯಾಂಟರ್ ಚಾಲಕ ಸ್ಥಳದಲ್ಲಿಯೇ ಸಾವನ್ನಪ್ಪಿ, ಇಬ್ಬರು ಗಾಯಗೊಂಡಿದ್ದಾರೆ. ಈ ವೇಳೆ ಸ್ಥಳೀಯರು ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕುರಿಗಳ ಕಳವು: ಅಪಘಾತ ಸಂಭವಿಸಿದ ಕೂಡಲೇ ಗಾಯಗೊಂಡವರ ರಕ್ಷಣೆ ನೆಪದಲ್ಲಿ ಬಂದ ಕೆಲವರು ಕ್ಯಾಂಟರ್‌ನಲ್ಲಿದ್ದ ಕುರಿಗಳನ್ನು ಕಳವು ಮಾಡಿದ್ದಾರೆ. ಅಂದಾಜು 10ಕ್ಕೂ ಹೆಚ್ಚು ಕುರಿಗಳ ಕಳವಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಘಟನೆ ಸಂಬಂಧ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧರ್ಮದ ಹೆಸರಿನಲ್ಲಿ ಬಿಜೆಪಿ ರಾಜಕಾರಣ: ಬಿ.ಕೆ.ಹರಿಪ್ರಸಾದ್

ಶ್ರೀರಂಗಪಟ್ಟಣ, ಆ.27– ಬಿಜೆಪಿ ಸರ್ಕಾರಗಳು ಕೋಮು ಸೌಹಾರ್ದತೆ ಕಾಪಾಡದೆ ಅದನ್ನು ಬದಿಗಿಟ್ಟು ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿ ಧರ್ಮ ಧರ್ಮಗಳನ್ನು ಎತ್ತಿಕಟ್ಟುವ ಮೂಲಕ ಸರ್ಕಾರದ ಮೇಲಿನ ಶೇ.40 ಭ್ರಷ್ಟಾಚಾರದ ಆರೋಪವನ್ನು ಮುಚ್ಚಿ ಹಾಕುವ ಕೆಲಸ ಮಾಡುತ್ತಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

ಪಟ್ಟದ ಪ್ರವಾಸಿ ಮಂದಿರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮ, ಜಾತಿ, ಭಾಷೆ ಹೆಸರಿನಲ್ಲಿ ಬಿಜೆಪಿ ರಾಜಕಾರಣ ಮಾಡುವ ಮೂಲಕ ಆರ್‌ಎಸ್‌ಎಸ್ ನೊಂದಿಗೆ ಸೇರಿ ದೇಶವನ್ನು ಕಲುಷಿತಗೊಳಿಸುತ್ತಿದೆ ಎಂದರು.

ಪಾದಯಾತ್ರೆ: ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಮುಂದಿನ ತಿಂಗಳು ಕಾಂಗ್ರೆಸ್‌ನಿಂದ ಪಾದಯಾತ್ರೆ ಹಮ್ಮಿಕೊಂಡಿದ್ದು, ಇದೇ ಸೆ.7ರಂದು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ಸುಮಾರು 3,700 ಕಿಮೀ 21 ದಿನಗಳ ಕಾಲ ಕೇರಳ ಮಾರ್ಗವಾಗಿ ಕರ್ನಾಟಕದಲ್ಲಿ ಚಾಮರಾಜನಗರ ಮೂಲಕ ಮೈಸೂರು ಮಂಡ್ಯ ಮಾರ್ಗವಾಗಿ ಬಳ್ಳಾರಿವರೆಗೂ 521 ಕಿಮೀ ರಾಜ್ಯ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಪಾದಯಾತ್ರೆಯನ್ನು ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.



ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಸಲೀಂ ಅಹಮದ್, ಮಾಜಿ ಶಾಸಕ ರಮೇಶ ಬಂಡಿಸಿದ್ದೇಗೌಡ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್, ಸಿ.ಡಿ.ಗಂಗಾಧರ್ ಇತರರಿದ್ದರು.

ರೈಲು ಡಿಕ್ಕಿ, ರೈತ ಸಾವು

ಮಂಡ್ಯ, ಆ.27– ರೈಲು ಡಿಕ್ಕಿ ಹೊಡೆದು ರೈತ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೊಸಬೂದನೂರು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಹೊಸ ಬೂದನೂರು ಗ್ರಾಮದ ಶೇಖರ್(48) ಮೃತಪಟ್ಟ ರೈತನಾಗಿದ್ದು, ಜಮೀನಿಗೆ ತೆರಳುವ ಸಂದರ್ಭದಲ್ಲಿ ರೈಲ್ವೆ ಹಳಿ ದಾಟುವಾಗ ಘಟನೆ ಸಂಭವಿಸಿದೆ.

ಡಬಲ್ ಟ್ರಾಕ್‌ನ ಎರಡು ಹಳಿಗಳ ಮೇಲೆ ರೈಲು ಬಂದ ಹಿನ್ನೆಲೆಯಲ್ಲಿ ಗಲಿಬಿಲಿಗೊಂಡ ರೈತ ಹಳಿಯ ಮೇಲೆಯೇ ನಿಂತ ಪರಿಣಾಮ ರೈಲು ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡು ಶೇಖರ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಲಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಎಂ.ರೇಖಾ ಆಯ್ಕೆ



ಶ್ರೀರಂಗಪಟ್ಟಣ, ಆ.27– ತಾಲೂಕಿನ ಪಾಲಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಎಂ.ರೇಖಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಂಚಾಯಿತಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಚುನಾವಣಾಧಿಕಾರಿಯಾಗಿ ಶ್ರೀರಂಗಪಟ್ಟಣದ ಕೃಷಿ ಇಲಾಖೆ ಉಪ ನಿರ್ದೇಶಕ ನಿಶಾಂತ್ ಕೀಲಾರ ಹಾಗೂ ಪಿಡಿಓ ಆರ್.ರವಿ ಕರ್ತವ್ಯ ನಿರ್ವಹಿಸಿದರು.

ಈ ವೇಳೆ ಉಪಾಧ್ಯಕ್ಷ ನವೀನ್‌ಕುಮಾರ್, ಮುಖಂಡರಾದ ಪೈಲ್ವಾನ್ ಮುಕುಂದ, ಪಿ.ಎಸ್.ರಮೇಶ್ ಬಾಬು, ಪಿ.ಎಸ್.ರಾಮಚಂದ್ರ ನಾಗರಾಜಣ್ಣ, ಪಿ.ಎಂ.ಪ್ರಭಾಕರ್, ಪಿ.ಎಂ. ಶ್ರೀಧರ್, ಕೃಷ್ಣಪ್ಪ ಶಂಕರೇಗೌಡ, ಪೈಲ್ವಾನ್ ವಿಜೇಂದ್ರ ಸುಕೇಶ್, ಶೇಖರ್, ಜೈಶೇಖರ್, ಎಂ.ನಾರಾಯಣ್, ಸುರೇಶ್, ಗಿರೀಶ್, ಬಿ.ನಾರಾಯಣ್, ಸುನೀಲ್ ಗ್ರಾಪಂ ಸದಸ್ಯರು, ಸಿಬ್ಬಂದಿ ಹಾಜರಿದ್ದರು.

ಜಿಲ್ಲೆಯ ವಿವಿಧೆಡೆ ಸಾವರ್ಕರ್ ರಥ ಸಂಚಾರ



ಹನೂರು ಪಟ್ಟಣಕ್ಕೆ ಬಂದ ಸಾವರ್ಕರ್ ರಥಯಾತ್ರೆಯನ್ನು ಜ್ಯೋತಿಪುರದಲ್ಲಿ ಅಪಾರ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.

ಚಾಮರಾಜನಗರ, ಆ.27–ಸಾವರ್ಕರ್ ಪ್ರತಿಷ್ಠಾನ ಹಮ್ಮಿಕೊಂಡಿರುವ ಸಾವರ್ಕರ್ ರಥಯಾತ್ರೆ ಜಿಲ್ಲಾ ಕೇಂದ್ರ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ತಾಲೂಕುಗಳಲ್ಲಿ ಸಂಚರಿಸಿತು. ಎಲ್ಲೆಡೆ ಬಿಜೆಪಿ ಮುಖಂಡರು, ಕಾರ್ಯಕರ್ತರು ರಥವನ್ನು ಅದ್ದೂರಿಯಾಗಿ ಸ್ವಾಗತಿಸಿದರು.

ಚಾಮರಾಜನಗರ: ನಗರದ ವಿವಿಧ ಭಾಗಗಳಲ್ಲಿ ರಥ ಯಾತ್ರೆ ಸಾಗಿ, ವೀರ ಸಾವರ್ಕರ್ ಅವರ ಸ್ವಾತಂತ್ರ್ಯ ಹೋರಾಟದ ಕುರಿತು ಜನರಲ್ಲಿ ಜಾಗೃತಿ ಮೂಡಿಸಿತು. ಚಾಮರಾಜೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಎನ್.ಮಹೇಶ್, ನಾನು ಅಂಬೇಡ್ಕರ್ ವಾದಿ. ಆ ದೃಷ್ಟಿಕೋನದಲ್ಲೇ ಸಾವರ್ಕರ್ ಅವರನ್ನು ನೋಡುತ್ತಿದ್ದೇನೆ. ಅವರು ಬ್ರಿಟಿಷರಿಗೆ ಅತ್ಯಂತ ಅಪಾಯಕಾರಿ ವ್ಯಕ್ತಿಯಾಗಿದ್ದರು. ಆ ಕಾರಣಕ್ಕಾಗಿ ಅವರಿಗೆ 51 ವರ್ಷಗಳ ಶಿಕ್ಷೆ ವಿಧಿಸಲಾಗಿತ್ತು ಎಂದು ಸ್ಮರಿಸಿದರು. ಈ ವೇಳೆ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಸುಂದರ್, ಕಾಡಾ ಅಧ್ಯಕ್ಷ ನಿಜಗುಣರಾಜು ಸೇರಿದಂತೆ ಮುಖಂಡರು ಇದ್ದರು. ನಗರದಲ್ಲಿ ಸಂಚರಿಸಿದ ರಥ ಕೊಳ್ಳೇಗಾಲ, ಯಳಂದೂರಿನತ್ತ ತೆರಳಿತು.

ಕೊಳ್ಳೇಗಾಲ: ಪಟ್ಟಣಕ್ಕೆ ಆಗಮಿಸಿದ ರಥವನ್ನು ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಜಿ.ಎನ್.ನಂಜುಂಡಸ್ವಾಮಿ ಬರಮಾಡಿಕೊಂಡು ಮಾತನಾಡಿ, ವೀರ ಸಾವರ್ಕರ್ ಅಪ್ರತಿಮ ದೇಶಭಕ್ತ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಸಾವರ್ಕರ್ ಪ್ರಮುಖರು ಎಂದು ಬಣ್ಣಿಸಿದರು. ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ರಥ ನಂತರ ಹನೂರಿನತ್ತ ತೆರಳಿತು.

ಹನೂರು: ಪಟ್ಟಣಕ್ಕೆ ಬಂದ ಸಾವರ್ಕರ್ ರಥಯಾತ್ರೆಯನ್ನು ಜ್ಯೋತಿಪುರದಲ್ಲಿ ಅಪಾರ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು, ಅದ್ದೂರಿಯಾಗಿ ಸ್ವಾಗತಿಸಿದರು. ಬಳಿಕ ಕೌದಳ್ಳಿಯಲ್ಲಿ ಏರ್ಪಡಿಸಿದ್ದ ವೇದಿಕೆ ಕಾರ್ಯಕ್ರಮದ ಸ್ಥಳಕ್ಕೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಬಿಜೆಪಿ ಹಾಗೂ ಕೇಸರಿ ಬಾವುಟ ಹಾಗೂ ಸಾವರ್ಕರ್ ಭಾವಚಿತ್ರವನ್ನು ಪ್ರದರ್ಶಿಸುತ್ತಾ, ಸಾವರ್ಕರ್ ಅವರ ಭಾವಚಿತ್ರಕ್ಕೆ ಹೂಮಳೆಗೈದು ಕರೆತಂದರು.

ಓಬಿಸಿ ಜಿಲ್ಲಾ ಸಂಚಾಲಕ ಬಿ.ವೆಂಕಟೇಶ್, ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್ ಸೇರಿದಂತೆ ಅನೇಕರು ಮಳೆಯನ್ನು ಲೆಕ್ಕಿಸದೆ ಸಾವರ್ಕರ್ ಅವರ ಯಶೋಗಾಥೆ ಸಾರುವ ಕುರಿತಾದ ವಿಡಿಯೋ ಸಂದೇಶ ಬೃಹತ್ ಪರದೆ ಮೂಲಕ ವೀಕ್ಷಿಸಿದರು.

ಬಳಿಕ ನಡೆದ ವೇದಿಕೆ ಉದ್ಘಾಟಿಸಿ ಮಾತನಾಡಿದರು. ತಾಲೂಕಿನ ಕೌದಳ್ಳಿ ಮೂಲಕ ಸಾಗಿ ರಥಯಾತ್ರೆ ರಾಮಾಪುರದಲ್ಲಿ ಸಮಾಪ್ತಿಗೊಂಡಿತು. ಈ ವೇಳೆ ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ಹನೂರು ಮಂಡಲ ಓಬಿಸಿ ಮೋರ್ಚಾ ಅಧ್ಯಕ್ಷ ಕೃಷ್ಣಪ್ಪ, ಮಹದೇಶ್ವರ ಮಂಡಲ ಮಹಿಳಾ ಅಧ್ಯಕ್ಷೆ ಮೀನಾ, ಹನೂರು ಮಂಡಲ ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜೇಶ್, ಮಹದೇಶ್ವರಬೆಟ್ಟ ಯುವ ಮೋರ್ಚಾ ಅಧ್ಯಕ್ಷ ಚಂದ್ರು, ಕುರಟ್ಟಿ ಹೊಸೂರು ಗ್ರಾಪಂ ಅಧ್ಯಕ್ಷ ನಟರಾಜು, ಗ್ರಾಪಂ ಸದಸ್ಯರಾದ ವರಪ್ರಸಾದ್, ರಾಜಪ್ಪ, ಜಬಿವುಲ್ಲಾ, ಮಂಜು, ಕೌದಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಸದಸ್ಯರು ಹಾಗೂ ಕೌದಳ್ಳಿ ಗ್ರಾಮಸ್ಥರಿದ್ದರು.

ಕರ್ತವ್ಯಲೋಪ; ಕಾನ್‌ಸ್ಟೇಬಲ್ ಅಮಾನತು

ಚಾಮರಾಜನಗರ, ಆ.27–ಕರ್ತವ್ಯ ಲೋಪ ಹಿನ್ನೆಲೆಯಲ್ಲಿ ಸಂತೇಮರಳ್ಳಿ ಠಾಣೆ ಪೇದೆಯೊಬ್ಬರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಪೊಲೀಸ್ ಪೇದೆ ರಮೇಶ್ ಅಮಾನತು ಗೊಂಡವರು. ವಾರದ ಹಿಂದೆ ಹೋಬಳಿಯ ಬಾನಳ್ಳಿ ಚೆಕ್‌ಪೋಸ್ಟ್ ಬಳಿ 2 ಕಂಟೈನರ್‌ಗಳಲ್ಲಿ ಅಕ್ರಮವಾಗಿ 40ಕ್ಕೂ ಹೆಚ್ಚು ಜಾನುವಾರುಗಳನ್ನು ಸಾಗಿಸಲಾಗುತ್ತಿತ್ತು. ಪೊಲೀಸರು ವಾಹನ ತಡೆದು ತಪಾಸಣೆ ನಡೆಸುವ ವೇಳೆ ಪ್ರಕರಣ ಬೆಳಕಿಗೆ ಬಂದಿದೆ. ಈ ಬಗ್ಗೆ ರಮೇಶ್ ಅವರು ಮಾಹಿತಿ ನೀಡದೆ ಕರ್ತವ್ಯ ಲೋಪ ಎಸಗಿದ ಕಾರಣ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಎಸ್‌ಪಿ ಶಿವಕುಮಾರ್ ತಿಳಿಸಿದ್ದಾರೆ.

ಆಜಾದಿ ಕಾ ಅಮೃತ ಮಹೋತ್ಸವ

ಚಾ.ನಗರದಲ್ಲಿ ವಿವಿಧ ಸೇವಾ ಕಾರ್ಯಕ್ರಮ

ಚಾಮರಾಜನಗರ, ಆ.27–ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ವಿವಿಧ ಸೇವಾ ಕಾರ್ಯಕ್ರಮಗಳು ನಡೆದವು.

ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ(ಕಾಡಾ) ಅಧ್ಯಕ್ಷ ಜಿ.ನಿ. ನಿಜಗುಣರಾಜು ಅವರು ಆಯೋಜಿಸಿದ್ದ ಈ ಸೇವಾ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ, ಕೃಷಿಕರಿಗೆ ಸಸಿಗಳ ವಿತರಣೆ, ನೇತ್ರಾ ತಪಾಸಣಾ ಶಿಬಿರ ಜರುಗಿತಲ್ಲದೆ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮಾಜಿ ಸೈನಿಕರನ್ನು ಸನ್ಮಾನಿಸಲಾಯಿತು. ನೂರಾರು ಜನರು ಸೇವಾ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡರು.

ಹಗರಣಗಳ ಆಗರ: ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಸೇವಾ ಕಾರ್ಯಕ್ರಮಗಳ ಸಮಾರಂಭ ಉದ್ಘಾಟಿಸಿ ಮಾತನಾಡಿ, ಇಂದು ರಾಜಕೀಯ ಕ್ಷೇತ್ರ ಹಗರಣಗಳ ಆಗರವಾಗಿದೆ. ಇದರಿಂದ ರಾಜಕೀಯ ಕ್ಷೇತ್ರದ ಗೌರವ ಹಾಳಾಗಿದೆ ಎಂದು ವಿಷಾದಿಸಿದರು.



ರಾಜಕೀಯ ಎಂದರೆ ಮೂಗು ಮುರಿಯುವ ಪ್ರಸ್ತುತ ಸನ್ನಿವೇಶದಲ್ಲಿ ತನಗೆ ಅವಕಾಶ ದೊರೆತಾಗ ಜನಸೇವೆಯಲ್ಲಿ ತೊಡಗುವ ಜನಬಹು ವಿರಳ ಆದರೆ ಈ ಸಾಲಿಗೆ ನಿಜಗುಣರಾಜು ಸೇರದೆ ಜನಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಾನು ರಾಜಕೀಯ ಲಾಭಕ್ಕಾಗಿ ಸೇವಾ ಕಾರ್ಯಗಳನ್ನು ಮಾಡುತ್ತಿಲ್ಲ. ನನ್ನ ಸಂಪಾದನೆಯ ಲಾಭಾಂಶದಲ್ಲಿ ಸ್ವಲ್ಪ ಭಾಗದ ಹಣವನ್ನು ಸೇವಾ ಕಾರ್ಯಗಳಿಗೆ ವಿನಿಯೋಗಿಸುವ ಮೂಲಕ ಬಡವರಿಗೆ ನೆರವಾಗುತ್ತಿದ್ದೇನೆ. ಇನ್ನು ಮುಂದೆಯೂ ಮುಂದುವರೆಸಿಕೊಂಡು ಹೋಗುವೆ ಎಂದರು.

ಶಾಸಕರಾದ ಸಿ.ಎಸ್.ನಿರಂಜನ ಕುಮಾರ್, ಎನ್.ಮಹೇಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಚಾಮುಲ್ ಅಧ್ಯಕ್ಷ ನಾಗೇಂದ್ರ, ಮಾಜಿ ನಿರ್ದೇಶಕ ಕಿಲಗೆರೆ ಬಸವರಾಜು, ನಗರಸಭಾ ಸದಸ್ಯ ಸುರೇಶ್, ಜಿಪಂ ಮಾಜಿ ಸದಸ್ಯ ಸಿ.ಎಸ್.ಬಾಲರಾಜು ಮುಖಂಡರಾದ ಬೇಡರಪುರ ಬಸವಣ್ಣ, ಹನುಮಂತಶೆಟ್ಟಿ, ಮಾಂಬಳ್ಳಿ ನಂಜುಂಡಸ್ವಾಮಿ, ಸಂತೇಮರಳ್ಳಿ ಮಹದೇವಸ್ವಾಮಿ, ನಾರಾಯಣ ಪ್ರಸಾದ್, ಅಯ್ಯಪುರ ವಿಜೇಂದ್ರ ಸೇರಿದಂತೆ ಇತರರಿದ್ದರು.

ರಂಗಸಂದ್ರ ಬಳಿ ಕಾಡಾನೆಗಳ ದಾಳಿ: ಬೆಳೆ ನಾಶ

ಚಾಮರಾಜನಗರ, ಆ.27– ತಾಲೂಕಿನ ರಂಗಸಂದ್ರ ಗ್ರಾಮದ ರೈತರ ಜಮೀನುಗಳಿಗೆ ಗುರುವಾರ ರಾತ್ರಿ ಕಾಡಾನೆಗಳ ಹಿಂಡು ಲಗ್ಗೆ ಇಟ್ಟು ಬೆಳೆ ನಾಶ ಮಾಡಿವೆ. ಗ್ರಾಮದ ರಂಗಸ್ವಾಮಿ, ಜಡೆಯಪ್ಪ ಹಾಗೂ ಇತರ ರೈತರ ಜಮೀನು, ತೋಟಗಳಿಗೆ ಮೂರು ಕಾಡಾನೆಗಳು ನುಗ್ಗಿ ತೆಂಗು, ಅಡಿಕೆ ಕಬ್ಬು, ಜೋಳ ಫಸಲು ತುಳಿದು ತಿಂದು ನಾಶಪಡಿಸಿವೆ.



ಕಾಡಾನೆಗಳು ನಮ್ಮ ಜಮೀನು, ತೋಟಗಳಿಗೆ ರಾತ್ರಿ ವೇಳೆಯಲ್ಲಿ ನುಗ್ಗಿ ತೆಂಗು, ಅಡಿಕೆ, ಕಬ್ಬು, ಜೋಳ ನಾಶ ಮಾಡಿದ್ದು, ತುಂಬಾ ನಷ್ಟ ಉಂಟು ಮಾಡಿದೆ. ಅರಣ್ಯ ಇಲಾಖೆಯವರು ಕೂಡ ಗಸ್ತಿಗೆ ಬರುತ್ತಿಲ್ಲ. ಜಮೀನುಗಳಿಗೆ ನುಗ್ಗಿದ ಕಾಡಾನೆಗಳ ಓಡಿಸಲು ಹೋದರೆ ನಮ್ಮ ಮೇಲೆ ದಾಳಿ ಮಾಡುತ್ತದೆ. ಇದರಿಂದ ಕೈ ಬಂದ ಫಸಲು ನಾಶವಾಗುತ್ತಿದ್ದು, ಸಾಲ ಮಾಡಿ ವ್ಯಯಿಸಿದ ಖರ್ಚಿನ ಹಣವು ಸಿಗದೇ ತೊಂದರೆ ಅನುಭವಿಸುವಂತಾಗಿದೆ. ಅರಣ್ಯ ಇಲಾಖೆ ಸ್ಥಳ ಪರಿಶೀಲಿಸಿ, ಸೂಕ್ತ ಪರಿಹಾರ ನೀಡಬೇಕು. ಈ ಭಾಗದ ರೈತರ ಜಮೀನು, ತೋಟಗಳಿಗೆ ಕಾಡಾನೆ ಬಾರದಂತೆ ಕ್ರಮ ಕೈಗೊಳ್ಳಬೇಕು ಎಂದು ರೈತ ಜಡೆಯಪ್ಪ ಆಗ್ರಹಿಸಿದ್ದಾರೆ.

ಕಾಲು ಜಾರಿ ಕೆರೆಗೆ ಬಿದ್ದು ಕೂಲಿ ಕಾರ್ಮಿಕ ಸಾವು



ಗುಂಡ್ಲುಪೇಟೆ, ಆ.27–ಕೂಲಿ ಕಾರ್ಮಿಕನೋರ್ವ ಕಾಲು ಜಾರಿ ಕೆರೆಗೆ ಬಿದ್ದು, ಸಾವನ್ನಪ್ಪಿರುವ ಘಟನೆ ತಾಲೂಕಿನ ಬರಗಿ ಕೆರೆಯಲ್ಲಿ ನಡೆದಿದೆ. ತಾಲೂಕಿನ ಕಾಡಂಚಿನ ಗ್ರಾಮ ಮೂಖಹಳ್ಳಿ ಕಾಲೋನಿ ನಿವಾಸಿ ನಾಗರಾಜು(35) ಮೃತಪಟ್ಟವರು. ಮೃತ ನಾಗರಾಜುಗೆ ಪತ್ನಿ ಮತ್ತು 7 ವರ್ಷದ ಪುತ್ರ ಇದ್ದಾರೆ. ಶುಕ್ರವಾರ ಮಧ್ಯಾಹ್ನ ಮನೆಯಿಂದ ಹೊರ ಹೋದವರು ಮರಳಿ ಮನೆಗೆ ಬಂದಿರಲಿಲ್ಲ. ಕುಟುಂಬಸ್ಥರು ಕೂಲಿ ಕೆಲಸಕ್ಕೆ ಹೋಗಿ, ಅಲ್ಲೆ ರಾತ್ರಿ ಉಳಿದಿರಬೇಕೆಂದು ಭಾವಿಸಿದ್ದರು. ಶನಿವಾರ ಬೆಳಗ್ಗೆ ಕೆರೆಯಲ್ಲಿ ನಾಗರಾಜು ಮೃತದೇಹ ಪತ್ತೆಯಾಗಿದ್ದು, ದಾರಿಹೋಕರು ಪೊಲೀಸ್ ಠಾಣೆಗೆ ಸುದ್ದಿ ಮುಟ್ಟಿಸಿದ್ದಾರೆ. ತಕ್ಷಣ ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲಿಸಿದರಲ್ಲದೆ, ನಾಗರಾಜು ಕಾಲು ಜಾರಿ ಕೆರೆಗೆ ಬಿದ್ದು, ಸಾವನ್ನಪ್ಪಿರಬಹುದೆಂದು ತಿಳಿಸಿದ್ದಾರೆ. ನಂತರ ಅಗ್ನಿಶಾಮಕ ಸಿಬ್ಬಂದಿಯಿಂದ ಕಾರ್ಯಾಚರಣೆ ನಡೆಸಿ ಶವ ಹೊರ ತೆಗೆದು ಪಟ್ಟಣ ತಾಲೂಕು ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಯಿತು. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯ ಕುಟುಂಬದ ಏಳು ಮಂದಿ ಹತ್ಯೆ ಪ್ರಕರಣ

ಜೀವಾವಧಿ ಶಿಕ್ಷೆಗೊಳಗಾಗಿದ್ದ 11 ಮಂದಿ ಬಿಡುಗಡೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು,ಆ.27(ಪಿಎಂ)–ಬಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯ ಕುಟುಂಬದ 7 ಮಂದಿ ಹತ್ಯೆ ಮಾಡಿದ್ದ ಪ್ರಕರಣ ಸಂಬಂಧ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಎಲ್ಲಾ 11 ಮಂದಿಯನ್ನು ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ಕ್ರಮ ಖಂಡಿಸಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, 11 ಮಂದಿ ಅಪರಾಧಿಗಳ ಅವಧಿಪೂರ್ವ ಬಿಡುಗಡೆ ಮತ್ತು ಶಿಕ್ಷೆ ಕಡಿತ ಮಾಡಿರುವ ಗುಜರಾತ್ ಸರ್ಕಾರದ ನಡೆ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

2002ರ ಆ.15ರಂದು ಗುಜರಾತ್‌ನಲ್ಲಿ ಕೋಮು ಗಲಭೆ ಸಂದರ್ಭದಲ್ಲಿ ಬಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದಲ್ಲದೆ, ಆಕೆಯ ಕುಟುಂಬ ಸದಸ್ಯರನ್ನು ಹತ್ಯೆ ಮಾಡಲಾಯಿತು. ಈ ಪ್ರಕರಣದ ಎಲ್ಲಾ ಅಪರಾಧಿಗಳನ್ನು ಬಿಡುಗಡೆ ಮಾಡಿರುವುದು ಯಾವ ನ್ಯಾಯ? ಗುಜರಾತ್ ಸರ್ಕಾರದ ಈ ಕ್ರಮವು ಅತ್ಯಾಚಾರ ಮತ್ತು ಹಿಂಸಾಚಾರ ಧೋರಣೆಯನ್ನು ಬಲಪಡಿಸಲಿದೆ ಎಂದು ಕಿಡಿಕಾರಿದರು.

'ನನ್ನ ಮನೆಯ 4 ಮಂದಿ ಪುರುಷರನ್ನು ಕ್ರೂರವಾಗಿ ಕೊಂದರು. ಹೆಂಗಸರನ್ನು ಬೆತ್ತಲೆಗೊಳಿಸಿದರು. ಅವರ ಮೇಲೆ ಅತ್ಯಾಚಾರ ಎಸಗಿದರು. ನನ್ನ ಮೂರು ವರ್ಷದ ಮಗುವಿನ ತಲೆಯನ್ನು ಗೋಡೆಗೆ ಜಜ್ಜಿ ಹತ್ಯೆ ಮಾಡಿದರು. ಒಬ್ಬೊಬ್ಬರಾಗಿ ನನ್ನ ಮೇಲೆ ಅತ್ಯಾಚಾರ ಮಾಡಿದರು. ನನ್ನ ಕಣ್ಣೆದುರಿನಲ್ಲೇ ಅವರು ನನ್ನ ಅಮ್ಮ, ಸೋದರಿಯರು ಸೇರಿದಂತೆ ಸಂಬಂಧಿಗಳನ್ನೂ ಕೊಂದರು. ಅತ್ಯಾಚಾರ ಎಸಗಿದ ಪುರುಷರು ನಮಗೆ ತಿಳಿದವರೇ ಆಗಿದ್ದರು. ಅವರನ್ನು ಹೇಗೆ ಕ್ಷಮಿಸಲಿ' ಎಂದು ಬಲ್ಕಿಸ್ ಬಾನು ಅತ್ಯಂತ ನೋವಿನಿಂದ ಹೇಳಿಕೆ ನೀಡಿದ್ದಾಳೆ. ಇಂತಹ ಕೃತ್ಯ ಎಸಗಿದವರನ್ನು ಬಿಡುಗಡೆ ಮಾಡಿರುವುದು ನ್ಯಾಯವೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರು ಪುರಭವನದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಗುಜರಾತ್ ಸರ್ಕಾರವು ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲಿ ಈ 11 ಅಪರಾಧಿಗಳನ್ನು ಸನ್ನಡತೆ ಹೆಸರಲ್ಲಿ ಬಿಡುಗಡೆ ಮಾಡಿದೆ. ಹಾಗಾದರೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಮಹಿಳೆಯರ ಘನತೆ ಮತ್ತು ಸುರಕ್ಷೆ ಬಗ್ಗೆ ನೀಡಿದ ಭರವಸೆ ಪೊಳ್ಳು ಎಂದು ಭಾವಿಸಬೇಕೇ? ಈ ಅಪರಾಧಿಗಳು ಬಿಡುಗಡೆಗೊಂಡಾಗ ಅವರಿಗೆ ಹಾರ ಹಾಕಿ ಅಭಿನಂದಿಸಿ, ಸಿಹಿ ಹಂಚಲಾಗಿದೆ. ಇದನ್ನು ನಾವು ಭಾರತೀಯರು ಹಿಂದೂ ಸಂಸ್ಕೃತಿ ಎಂದು ಭಾವಿಸಬೇಕೇ? ಎಂದು ಕಿಡಿಕಾರಿದರು.

2018ರಲ್ಲಿ ಪ್ರಧಾನಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸನ್ನಡತೆಯ ಆಧಾರದ ಬಿಡುಗಡೆ ವಿಚಾರ ಸಂಬಂಧ ವರದಕ್ಷಿಣೆ ಸಾವು, ಅತ್ಯಾಚಾರ, ಕೊಲೆ, ಮಾನವ ಕಳ್ಳಸಾಗಾಣಿಕೆ ಮೊದಲಾದ ಹೀನ ಅಪರಾಧಗಳಿಂದ ಜೀವಾವಧಿ ಶಿಕ್ಷೆಗೆ ಒಳಗಾದವರಿಗೆ ಶಿಕ್ಷೆಯಿಂದ ವಿನಾಯಿತಿ ನೀಡುವಂತಿಲ್ಲ ಎಂದು ನಿರ್ಧರಿಸಲಾಗಿದೆ. ಆದಾಗ್ಯೂ ಈ ಪ್ರಕರಣದಲ್ಲಿ ಅಪರಾಧಿಗಳನ್ನು ಬಿಡುಗಡೆ ಮಾಡಿರುವುದು ದೇಶದ ಸಮಸ್ತರೂ ತಲೆತಗ್ಗಿಸುವ ವಿಚಾರ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುಪ್ರಿಂಕೋರ್ಟ್, ಗುಜರಾತ್ ರಾಜ್ಯಪಾಲರು ಹಾಗೂ ಕೇಂದ್ರ ಗೃಹ ಸಚಿವಾಲಯ ಈ ಪ್ರಕರಣವನ್ನು ಅಪರೂಪದಲ್ಲಿ ಅಪರೂಪ ಪ್ರಕರಣ ಎಂದು ಪರಿಗಣಿಸಿ, ಎಲ್ಲಾ 11 ಅಪರಾಧಿಗಳ ಶಿಕ್ಷೆಯನ್ನು ಮುಂದುವರೆಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಬಹುಭಾಷಾ ಸಿನಿಮಾ ನಟ ಪ್ರಕಾಶ್ ರಾಜ್, ಸಮಾಜವಾದಿ ಮುಖಂಡ ಪ.ಮಲ್ಲೇಶ್, ರಂಗಾಯಣ ಮಾಜಿ ನಿರ್ದೇಶಕರಾದ ಹೆಚ್. ಜನಾರ್ಧನ್ (ಜನ್ನಿ), ಬಸವಲಿಂಗಯ್ಯ, ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಕಾಳಚೆನ್ನೇಗೌಡ, ಪ್ರೊ.ಆರ್.ಇಂದಿರಾ, ಭಾರತೀಯ ಮಹಿಳಾ ಒಕ್ಕೂಟದ ಮಹದೇವಮ್ಮ, ಮುಸ್ಲಿಂ ಮುಖಂಡ ಖಲೀಲ್, ಎಐಟಿಯುಸಿ ಸಂಘಟನೆಯ ಉಮಾದೇವಿ, ಪತ್ರಕರ್ತ ಕೆ.ದೀಪಕ್, ಸಮತಾ ವೇದಿಕೆಯ ರತಿರಾವ್, ಆಮ್ ಆದ್ಮಿ ಪಕ್ಷದ ಮುಖಂಡರಾದ ಮಾಲವಿಕ ಗುಬ್ಬಿವಾಣಿ, ರೈತ ಸಂಘದ ಮುಖಂಡ ಮರಂಕಯ್ಯ, ದಸಂಸ ಮುಖಂಡ ಕಲ್ಲಹಳ್ಳಿ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಈ ಬಿಡುಗಡೆ ಇಡೀ ದೇಶಕ್ಕೆ ಮಾಡಿದ ಅನ್ಯಾಯ

ಬಹುಭಾಷಾ ಸಿನಿಮಾ ನಟ ಪ್ರಕಾಶ್ ರಾಜ್ ಕಿಡಿನುಡಿ

ಮೈಸೂರು,ಆ.27(ಪಿಎಂ)–ಬಲ್ಕಿಸ್ ಬಾನು ಪ್ರಕರಣದ ಎಲ್ಲಾ 11 ಮಂದಿಯನ್ನು ಬಿಡುಗಡೆ ಮಾಡಿರುವುದು ಬಲ್ಕಿಸ್ ಬಾನುಗೆ ಮಾಡಿದ ಅನ್ಯಾಯ ಮಾತ್ರವಲ್ಲ, ಇಡೀ ದೇಶಕ್ಕೆ ಮಾಡಿದ ಅನ್ಯಾಯ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಕಿಡಿಕಾರಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಕೊಳೆತು ನಾರುವ ಸಿದ್ಧಾಂತ ಪ್ರತಿಪಾದಿಸುವವರು ನಾರಿ ಶಕ್ತಿ ಬಗ್ಗೆ ಮಾತನಾಡುತ್ತಾರೆ. ಅತ್ಯಾಚಾರ ಮತ್ತು ಹತ್ಯೆ ಮಾಡಿದ ಈ ಪ್ರಕರಣದ ಎಲ್ಲಾ 11 ಮಂದಿಯೂ ಸನ್ನಡತೆ ಹೊಂದಿದ್ದಾರೆಯೇ? ಇದರ ಹಿಂದಿರುವ ಹುನ್ನಾರವನ್ನು ನಾವು ಅರ್ಥ ಮಾಡಿಕೊಳ್ಳಬೇಕು ಎಂದರು. ನಮ್ಮ ಸಿದ್ಧಾಂತಗಳು, ನಮ್ಮ ಆಳ್ವಿಕೆಯನ್ನು ಸಮರ್ಥಿಸಿಕೊಳ್ಳಲು ಅತ್ಯಾಚಾರ ಮಾಡಿದರೂ ಕಾಪಾಡಲು ನಾವಿದ್ದೇವೆ ಎಂದು ಸಂದೇಶ ನೀಡುತ್ತಿದ್ದಾರೆ. ಅಧಿಕಾರ ಇದೆ ಎಂಬ ಉದ್ಧಟತನ ಇದು. ಇವರ ವಿರುದ್ಧ ಜನಾಂದೋಲನ ಅಗತ್ಯವಿದೆ. ಪ್ರಜ್ಞಾವಂತರಾದ ನಾವು ಇಂತಹ ಅನ್ಯಾಯಗಳನ್ನು ನಿರಂತರವಾಗಿ ಪ್ರಶ್ನೆ ಮಾಡಬೇಕು. ಇಂತಹವರನ್ನು ಅಧಿಕಾರದ ಗದ್ದುಗೆಯಿಂದ ಇಳಿಸಿ, ಜನಪರ ಕೆಲಸ ಮಾಡುವವರನ್ನು ಅಧಿಕಾರಕ್ಕೆ ತರುವ ಕೆಲಸ ಮಾಡಬೇಕಿದೆ ಎಂದರು.

ಅತ್ಯಾಚಾರ ಅಪರಾಧಿಗಳ ಬಿಡುಗಡೆ ಖಂಡಿಸಿ ಆಮ್ ಆದ್ಮಿ ಪ್ರತಿಭಟನೆ

ಮೈಸೂರು, ಆ.27(ಪಿಎಂ)– ಬಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯ ಕುಟುಂಬದ 7 ಮಂದಿ ಹತ್ಯೆ ಮಾಡಿದ್ದ ಪ್ರಕರಣ ಸಂಬಂಧ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಎಲ್ಲಾ 11 ಮಂದಿಯನ್ನು ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ಕ್ರಮ ಖಂಡಿಸಿ ಆಮ್ ಆದ್ಮಿ ಪಕ್ಷದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು. ಮೈಸೂರಿನ ಎಫ್‌ಟಿಎಸ್ ವೃತ್ತದ ಡಾ.ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಬಿಡುಗಡೆ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಪಕ್ಷದ ಮುಖಂಡರಾದ ಧರ್ಮಶ್ರೀ ಸಿಂಗ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.



ಮುಡಾ ಆಯುಕ್ತರಾಗಿದ್ದ ನಟೇಶ್ ವಿರುದ್ಧ ಲೋಕಾಯುಕ್ತಗೆ ದೂರು

ಮೈಸೂರು, ಆ. 27– ಲಂಚ ನೀಡಲಿಲ್ಲ ಎಂಬ ಕಾರಣಕ್ಕಾಗಿ ಹಿನಕಲ್ ಸರ್ವೆ ನಂಬರ್ 105ರಲ್ಲಿರುವ ಡಿ ನೋಟಿಫೈ ಆಗಿದ್ದ ತಮ್ಮ ಜಮೀನನ್ನು ಮುಡಾ ವಶಕ್ಕೆ ಪಡೆದಂತೆ ಕಾನೂನುಬಾಹಿರವಾಗಿ ಮುಡಾ ಹಿಂದಿನ ಆಯುಕ್ತ ಡಿ.ಬಿ. ನಟೇಶ್ ಅವರು ಆದೇಶ ಹೊರಡಿಸಿ ಪತ್ರಿಕಾ ಹೇಳಿಕೆ ನೀಡಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಟಿ. ಕೃಷ್ಣಾರೆಡ್ಡಿ ಲೋಕಾಯುಕ್ತಗೆ ದೂರು ಸಲ್ಲಿಸಿದ್ದಾರೆ.

ಒಂದನೇ ಪುಟದಿಂದ

ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ

ಸರ್ಕಾರಿ ಶಾಲೆಯಲ್ಲಿ ಕೆಎಸ್.ನವೀನ್‌ಕುಮಾರ್ ಹಾಗೂ 22ನೇ ವಾರ್ಡಿನ ಮಾತೃ ಮಂಡಳಿ ಶಾಲೆಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಎನ್.ಮೋಹನ್ ವಿಶೇಷ ಅಭಿಯಾನ ನಡೆಸಿದರು.

ಮಕ್ಕಳ ಮೂಲಕ ಮಾಹಿತಿ: ಮನೆ ಬಳಿ ಹೋದರೂ ಲಭ್ಯವಾಗದವರು ಹಾಗೂ ಮತಗಟ್ಟೆಗಳಿಗೆ ಬಾರದ ಮತದಾರರ ಮಾಹಿತಿಯನ್ನು ಶಾಲಾ ಮಕ್ಕಳ ಮೂಲಕ ಸಂಗ್ರಹಿಸಲು ಪಾಲಿಕೆ ಅಧಿಕಾರಿಗಳು ನಿರ್ಧರಿಸಿದ್ದಾರೆ. ಹೀಗೆ ಸಂಗ್ರಹಿಸಿದ ಮತದಾರರ ಚೀಟಿ ಹಾಗೂ ಆಧಾರ್ ಸಂಖ್ಯೆಯನ್ನು ಡೇಟಾ ಎಂಟ್ರಿ ಆಪರೇಟರ್‌ಗಳ ಮೂಲಕ ಜೋಡಣೆ ಮಾಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಮತದಾರರ ಸಹಾಯಕ ನೋಂದಣಾಧಿಕಾರಿಗಳು, ನಿಮ್ಮಲ್ಲಿನ ವಿದ್ಯಾರ್ಥಿಗಳ ಪೋಷಕರ ಹೆಸರು, ಮತದಾರರ ಗುರುತಿನ ಚೀಟಿ ಸಂಖ್ಯೆ, ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂನೆಯಲ್ಲಿ ನಮೂದಿಸಿ ಕಳುಹಿಸುವಂತೆ ಶಾಲಾ ಶಿಕ್ಷಕರಿಗೆ ಮನವಿ ಮಾಡಿ, ಪತ್ರದ ಮಾದರಿ ಹಾಗೂ ಮುದ್ರಿತ ನಮೂನೆಯ ಪ್ರತಿಗಳನ್ನು ಅವರಿಗೆ ನೀಡಿದ್ದಾರೆ. ಮಕ್ಕಳು ತಮ್ಮ ಪೋಷಕರಿಂದ ಭರ್ತಿ ಮಾಡಿಸಿ ತಂದು ಶಾಲಾ ಶಿಕ್ಷಕರಿಗೆ ತಲುಪಿಸಿದ ಬಳಿಕ ಅವುಗಳನ್ನು ಪಾಲಿಕೆ ಅಧಿಕಾರಿಗಳು ಸಂಗ್ರಹಿಸಿ ಮುಂದಿನ ಕ್ರಮ ವಹಿಸಲಿದ್ದಾರೆ.

ಇಂದು ವಿಶೇಷ ಅಭಿಯಾನ ನಡೆಸಿ ಸಾವಿರಾರು ಮತದಾರರ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡಲಾಗಿದೆ. ಈ ಪ್ರಕ್ರಿಯೆ ಮುಂದುವರೆಯಲಿದ್ದು ಸಾರ್ವಜನಿಕರು ಅಗತ್ಯ ಮಾಹಿತಿ ನೀಡಿ, ಸಹಕರಿಸಬೇಕು. ಆನ್‌ಲೈನ್ ಮೂಲಕವೂ ಆಧಾರ್ ಸಂಖ್ಯೆ ಜೋಡಣೆ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಅಕ್ರಮ ತಡೆಗೆ ನೆರವು: ಎಪಿಕ್ ಹಾಗೂ ಆಧಾರ್ ಸಂಖ್ಯೆ ಜೋಡಣೆಯಿಂದ ಚುನಾವಣಾ ಅಕ್ರಮ ಹಾಗೂ ಗೊಂದಲ ತಡೆಯಬಹುದು ಎನ್ನಲಾಗಿದೆ. ವ್ಯಕ್ತಿಯೊಬ್ಬ ಖಾಯಂ ಹಾಗೂ ತಾತ್ಕಾಲಿಕ ವಿಳಾಸ ಹೊಂದಿರುವ 2 ಮತದಾರರ ಚೀಟಿ ಹೊಂದಿರಬಹುದು. ಇದರಿಂದ ಮತದಾರರ ಸಂಖ್ಯೆ ಖಚಿತವಾಗಿ ಲಭ್ಯವಾಗುವುದಿಲ್ಲ. ಅಲ್ಲದೆ ನಕಲಿ ಮತದಾನವೂ ನಡೆಯಬಹುದು. ಇಲ್ಲವೇ ಎರಡೂ ಕಡೆಯೂ ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಬಹುದು. ಎಪಿಕ್ ಹಾಗೂ ಆಧಾರ್ ಸಂಖ್ಯೆ ಜೋಡಣೆ ಮಾಡಿದರೆ ಈ ರೀತಿಯ ದೋಷಗಳಾಗುವುದಿಲ್ಲ ಎಂದು ಹೇಳಲಾಗುತ್ತಿದೆ. ಈ ನಿಟ್ಟಿನಲ್ಲಿ ಚುನಾವಣಾ ಆಯೋಗ 2015ರಲ್ಲಿ ಮೊದಲ ಬಾರಿಗೆ ಎಪಿಕ್ ಆಧಾರ್ ಜೋಡಣೆ ಯೋಜನೆ ರೂಪಿಸಿತ್ತಾದರೂ ಅದಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿತು. ನಂತರ ಚುನಾವಣಾ ಆಯೋಗ 2019ರಲ್ಲಿ ಮತದಾನ ಸುಧಾರಣೆಗೆ ಸಂಬಂಧಿಸಿ ಕೇಂದ್ರ ಸರಕಾರಕ್ಕೆ ಸಲ್ಲಿಸಿದ್ದ ಶಿಫಾರಸ್ಸಿನಲ್ಲಿ ಈ ಅಂಶವೂ ಇತ್ತು. ಕೇಂದ್ರ ಸರ್ಕಾರ ಚುನಾವಣಾ ಸುಧಾರಣಾ ಮಸೂದೆ ಮಂಡಿಸಿ, ಅನುಮೋದನೆ ಪಡೆದಿದ್ದರಿಂದ ಅದೀಗ ಕಾಯಿದೆಯಾಗಿದೆ.

ಬೆಂಗಳೂರು–ಮೈಸೂರು ಹೆದ್ದಾರಿ ಬಂದ್!

ಅಲ್ಲದೇ, ಹೆದ್ದಾರಿ ದುರಸ್ತಿಗೊಂಡಿರುವುದರಿಂದ ಹಾಗೂ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಹೆದ್ದಾರಿಯಲ್ಲಿನ ಸುಗಮ ಪ್ರಯಾಣಕ್ಕೆ ತೊಂದರೆಯಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಶನಿವಾರದಿಂದ ಮೂರು ದಿನಗಳವರೆಗೆ ಬೆಂಗಳೂರು ಮೈಸೂರು ಮಾರ್ಗವಾಗಿ ಪ್ರಯಾಣಿಸುವ ಪ್ರಯಾಣಿಕರು ಬೆಂಗಳೂರು–ಕನಕಪುರ–ಮೈಸೂರು ಮಾರ್ಗ ಅಥವಾ ಬೆಂಗಳೂರು–ಕುಣಿಗಲ್–ಮೈಸೂರು ಮಾರ್ಗವಾಗಿ ಪ್ರಯಾಣ ಮಾಡುವಂತೆ ಸೂಚಿಸಿದ್ದಾರೆ. ರಾತ್ರಿಯಿಡೀ ಸುರಿದ ಭಾರಿ ಮಳೆಗೆ ಜಿಲ್ಲೆಯ ಜನತೆ ನಲುಗಿ ಹೋಗಿದ್ದಾರೆ. ನಗರ ಹಾಗೂ ಗ್ರಾಮೀಣ ಭಾಗದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ ಹಿನ್ನೆಲೆ ನೂರಾರು ಕುಟುಂಬಗಳು ಬೀದಿಗೆ ಬಂದಿವೆ. ಹಾನಿಗೊಳಗಾದ ಪ್ರದೇಶಗಳಿಗೆ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಈಗಾಗಲೇ ಅಧಿಕಾರಿಗಳ ಬಳಿ ಮಾಹಿತಿ ಪಡೆದಿರುವ ಸಿಪಿವೈ, ತಕ್ಷಣವೇ ನಿರಾಶ್ರಿತ ಕೇಂದ್ರ ಸೇರಿದಂತೆ ಪರಿಹಾರ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಇಂಡೋ–ಪಾಕ್ ಹೈವೋಲ್ಟೇಜ್ ಪಂದ್ಯ

ಕೇವಲ ಐಸಿಸಿ, ಏಷ್ಯಾ ಸೇರಿದಂತೆ ಪ್ರಮುಖ ಟೂರ್ನಿಗಳಲ್ಲಿ ಮಾತ್ರ ಈ ಎರಡೂ ತಂಡಗಳು ಸೆಣಸುವ ಹಿನ್ನೆಲೆಯಲ್ಲಿ ಈ ಪಂದ್ಯ ತೀವ್ರ ಕುತೂಹಲ ಕೆರಳಿಸಿದೆ. ಮತ್ತೊಂದೆಡೆ ಈ ಪಂದ್ಯವನ್ನು ಕಣ್ತುಂಬಿಸಿಕೊಳ್ಳಲು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಭಾರತವೇ ಫೇವರೇಟ್: ಪಾಕ್ ವಿರುದ್ಧದ ಪಂದ್ಯದ ಮೂಲಕ ತನ್ನ ಅಭಿಯಾನ ಆರಂಭಿಸುವ ಟೀಂ ಇಂಡಿಯಾ ಏಷ್ಯಾ ಕಪ್ ಗೆಲ್ಲುವ ಹಾಗೂ ಪಾಕ್ ವಿರುದ್ಧದ ಪಂದ್ಯ ಗೆಲ್ಲುವ ನೆಚ್ಚಿನ ತಂಡವಾಗಿದೆ. ಕಳೆದ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನದ ವಿರುದ್ಧ 10 ವಿಕೆಟ್‌ಗಳಿಂದ ಸೋಲು ಅನುಭವಿಸಿದ್ದ ಭಾರತಕ್ಕೆ ಸಾಂಪ್ರದಾಯಿಕ ಎದುರಾಳಿ ವಿರುದ್ಧ ಸೇಡು ತೀರಿಸಿಕೊಳ್ಳಲು ಇದೀಗ ಅವಕಾಶ ಲಭಿಸಿದೆ.

ಏಷ್ಯಾ ಕಪ್‌ನಲ್ಲಿ ಭಾರತ ಹಾಗೂ ಪಾಕಿಸ್ತಾನ ಒಟ್ಟು 15 ಬಾರಿ ಕಾದಾಟ ನಡೆಸಿವೆ. ಇದರಲ್ಲಿ ಭಾರತ 8ರಲ್ಲಿ ಗೆಲುವು ಪಡೆದಿದ್ದರೆ, ಪಾಕಿಸ್ತಾನ 5ರಲ್ಲಿ ಜಯಿಸಿದೆ. ಇನ್ನುಳಿದ ಎರಡು ಪಂದ್ಯಗಳು ಫಲಿತಾಂಶವಿಲ್ಲದೆ ರದ್ದಾಗಿವೆ. ಈ ಅಂಶಗಳನ್ನು ನೋಡುವುದಾದರೆ ಭಾರತ ಮುನ್ನಡೆ ಸಾಧಿಸಿರುವುದು ಮನವರಿಕೆಯಾಗುತ್ತದೆ.

ಪಾಕಿಸ್ತಾನ ವಿರುದ್ಧ ಕೆಎಲ್ ರಾಹುಲ್ ಹಾಗೂ ರೋಹಿತ್ ಶರ್ಮಾ ಇನ್ನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ. ಇನ್ನು ಮಧ್ಯಮ ಕ್ರಮಾಂಕದಲ್ಲಿ ನಿರೀಕ್ಷೆಯಂತೆ ವಿರಾಟ್ ಕೊಹ್ಲಿ, ರಿಷಭ್ ಪಂತ್ ಹಾಗೂ ಸೂರ್ಯಕುಮಾರ್ ಯಾದವ್ ಆಡಬಹುದು. ಆಲ್ ರೌಂಡರ್‌ಗಳಾಗಿ ಹಾರ್ದಿಕ್ ಪಾಂಡ್ಯ ಹಾಗೂ ರವೀಂದ್ರ ಜಡೇಜಾ ಆಡಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಮೂವರು ವೇಗಿಗಳು ಹಾಗೂ ಏಕೈಕ ಸ್ಪಿನ್ನರ್ ಅನ್ನು ಕಣಕ್ಕೆ ಇಳಿಸುವ ಸಾಧ್ಯತೆ ಇದೆ. ವೇಗದ ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್ ಹಾಗೂ ಅರ್ಷದೀಪ್ ಸಿಂಗ್ ಕಣಕ್ಕೆ ಇಳಿಯಲಿದ್ದಾರೆ. ಇನ್ನು ಪಂದ್ಯದ ಪರಿಸ್ಥಿತಿಗಳನ್ನು ನೋಡಿಕೊಂಡು, ಆವೇಶ್ ಖಾನ್ ಅಥವಾ ಆರ್ ಅಶ್ವಿನ್ ಅವರಲ್ಲಿ ಒಬ್ಬರನ್ನು ಆಡಿಸುವ ಸಾಧ್ಯತೆ ಇದೆ. ಸ್ಪಿನ್ ವಿಭಾಗದಲ್ಲಿ ಯುಜ್ವೇಂದ್ರ ಚಹಲ್ ಕಣಕ್ಕೆ ಇಳಿಯುವುದು ಬಹುತೇಕ ಖಚಿತ.

ನವೆಂಬರ್‌ನಲ್ಲಿ ನನ್ನ ನಡೆ ನಿರ್ಧಾರ

ಶಾಸಕ ಜಿ.ಟಿ.ದೇವೇಗೌಡರ ಸ್ಪಷ್ಟನೆ



ಮೈಸೂರು,ಆ.27(ಆರ್‌ಕೆ)–ಹಳೆ ಮೈಸೂರು ಭಾಗದ ಪ್ರಭಾವಿ ರಾಜಕಾರಣಿಗಳಲ್ಲಿ ಒಬ್ಬರಾದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಮುಂದಿನ ರಾಜಕೀಯ ನಡೆಯ ಬಗ್ಗೆ ನವೆಂಬರ್‌ನಲ್ಲಿ ತಮ್ಮ ನಿಲುವು ಪ್ರಕಟಿಸುವುದಾಗಿ ಹೇಳಿದ್ದಾರೆ.

ಮೈಸೂರಿನಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರ ಬಗ್ಗೆ ಅಪಾರವಾದ ಗೌರವ, ಪ್ರೀತಿ, ಅಭಿಮಾನವಿದೆ. ನನ್ನ ಬಗ್ಗೆಯೂ ಅವರು ಪ್ರೀತಿ, ಅಭಿಮಾನವಿಟ್ಟಿದ್ದಾರೆ. ಹುಣಸೂರಿನಲ್ಲಿ ನಡೆದ ಕೆಂಪೇಗೌಡರ ಜಯಂತಿಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರೂ ಹೇಳಿದರು. ತಂದೆಯವರ ಆರೋಗ್ಯ ಸುಧಾರಿಸಿದೆ. ಆದರೆ ನಿಮ್ಮ ವಿಚಾರವಾಗಿ ಯೋಚನೆ ಮಾಡುತ್ತಿರುತ್ತಾರೆ. ಒಮ್ಮೆ ಅವರನ್ನು ಭೇಟಿಯಾಗುವಂತೆ ಹೇಳಿದರು ಎಂದರು.

ಕೆಂಪೇಗೌಡರ ಜಯಂತಿಯಲ್ಲಿ ಸಾನ್ನಿಧ್ಯ ವಹಿಸಿದ್ದ ಶ್ರೀ ಆದಿ ಚುಂಚನಗಿರಿ ಕ್ಷೇತ್ರದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವಂತೆ ತಿಳಿಸಿದರು. ಸಮ್ಮಿಶ್ರ ಸರ್ಕಾರವಿದ್ದಾಗ ಸಚಿವ ಸ್ಥಾನ ನೀಡುವಂತೆ ನಾನು ಕೇಳಿರಲಿಲ್ಲ. ನನ್ನ ಪುತ್ರ ಹರೀಶ್‌ಗೌಡನಿಗೆ ಟಿಕೆಟ್ ನೀಡುವಂತೆಯೂ ಕೇಳಿರಲಿಲ್ಲ. ಬೇರೆ ವಿಚಾರಗಳಿಂದ 3 ವರ್ಷದಿಂದ ದೂರ ಉಳಿಯಬೇಕಾಯ್ತು. ಆದರೆ ದೇವೇಗೌಡರು, ಕುಮಾರಸ್ವಾಮಿ ಹಾಗೂ ರೇವಣ್ಣ ಅವರ ಬಗ್ಗೆ ವೈಯಕ್ತಿಕವಾಗಿ ನಾನೆಂದೂ ಮಾತನಾಡಿಲ್ಲ. ಅವರ ಮೇಲಿನ ಗೌರವ ಹಾಗೆಯೇ ಇದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೂ ಆತ್ಮೀಯರು. ಜಿ.ಟಿ.ದೇವೇಗೌಡರು ನಮ್ಮೊಂದಿಗೆ ಇರುತ್ತಾರೆ ಎಂದು ಕಾರ್ಯಕ್ರಮದಲ್ಲಿ ಹೇಳಿದರು. ಆದರೆ ನಾವು ಯಾವುದೇ ರಾಜಕೀಯ ವಿಚಾರ ಮಾತನಾಡಿಲ್ಲ. ನಾನು ಹೆಚ್.ಡಿ.ದೇವೇಗೌಡರನ್ನು ಭೇಟಿ ಮಾಡಿ, ಎಲ್ಲಾ ವಿಚಾರಗಳ ಬಗ್ಗೆಯೂ ಮಾತನಾಡುತ್ತೇನೆ. ಹಿತೈಷಿಗಳು ಹಾಗೂ ಕ್ಷೇತ್ರದ ಜನರ ಅಭಿಪ್ರಾಯ ಕೇಳಿ ನನ್ನ ಮುಂದಿನ ರಾಜಕೀಯ ನಡೆಯ ಬಗ್ಗೆ ನವೆಂಬರ್‌ನಲ್ಲಿ ತಿಳಿಸುತ್ತೇನೆ. ಜಯಪ್ರಕಾಶ್ ನಾರಾಯಣ್ ಅವರು ಕಟ್ಟಿದ ಜನತಾ ಪರಿವಾರ, ಹೆಚ್.ಡಿ.ದೇವೇಗೌಡರು ಕಟ್ಟಿ ಬೆಳೆಸಿರುವ ಜೆಡಿಎಸ್ ಉಳಿಯಲು ಸಂಘಟನೆ ಬಹಳ ಮುಖ್ಯ ಎಂದು ಕುಮಾರಸ್ವಾಮಿ ಅವರೊಂದಿಗೆ ಮಾತನಾಡುವಾಗ ಹೇಳಿದ್ದೇನೆ. ಸದ್ಯಕ್ಕೆ ಜೆಡಿಎಸ್‌ನ ಕಾರ್ಯಕ್ರಮಗಳಲ್ಲಿ ನಾನು ಭಾಗಿಯಾಗುವುದಿಲ್ಲ. ಮೈಸೂರು ನಗರ ಪಾಲಿಕೆ ಮೇಯರ್ ಚುನಾವಣೆ ಸಂಬಂಧ ಜೆಡಿಎಸ್ ಪ್ರಕ್ರಿಯೆಗಳನ್ನು ಸಾ.ರಾ.ಮಹೇಶ್ ನಿರ್ವಹಿಸುತ್ತಿದ್ದಾರೆ. ನಾನು ಮತದಾನದಲ್ಲಿ ಮಾತ್ರ ಭಾಗಿಯಾಗುತ್ತೇನೆ ಎಂದು ಸ್ಪಷ್ಟಪಡಿಸಿದರು.

ಹೊಸಹಳ್ಳಿ ಜಮೀನಲ್ಲಿ ಸಿದ್ದರಾಮಯ್ಯನವರ ಸಹೋದರ ರಾಮೇಗೌಡರ ಅಂತ್ಯಕ್ರಿಯೆ

ಮೈಸೂರು, ಆ.27–ಶುಕ್ರವಾರ ರಾತ್ರಿ ನಿಧನರಾದ ಮಾಜಿ ಸಿಎಂ ಸಿದ್ದರಾಮಯ್ಯ ಕಿರಿಯ ಸಹೋದರ ರಾಮೇಗೌಡರ ಅಂತ್ಯಕ್ರಿಯೆಯು ಶನಿವಾರ ಸಿದ್ದರಾಮನಹುಂಡಿ ಪಕ್ಕದ ಹೊಸಹಳ್ಳಿ ಸಮೀಪದ ಜಮೀನಿನಲ್ಲಿ ನೆರವೇರಿತು. ಸಿದ್ದರಾಮಯ್ಯ ಅವರ ತಂದೆ, ತಾಯಿ, ಅಣ್ಣನ ಸಮಾಧಿ ಬಳಿಯೇ ರಾಮೇಗೌಡ ಅಂತ್ಯಕ್ರಿಯೆ ಮಾಡಲಾಯಿತು. ತೀವ್ರ ಅನಾರೋಗ್ಯದಿಂದ ರಾಮೇಗೌಡ ಅವರು ಶುಕ್ರವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಶನಿವಾರ ಬೆಳಗ್ಗೆ ಬೆಂಗಳೂರಿನಿಂದ ಮೈಸೂರಿನ ಸಿದ್ದರಾಮನಹುಂಡಿಗೆ ಆಗಮಿಸಿದ ಸಿದ್ದರಾಮಯ್ಯ, ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ, ಪಾರ್ಥಿವ ಶರೀರದ ದರ್ಶನ ಪಡೆದರು. ಚಿಕ್ಕಪ್ಪನ ಪಾರ್ಥಿವ ಶರೀರಕ್ಕೆ ಹೆಗಲು ಕೊಟ್ಟು ಶಾಸಕ ಡಾ.ಯತೀಂದ್ರ ಭಾವುಕರಾದರು. ಈ ವೇಳೆ ರಾಮೇಗೌಡರ ಪತ್ನಿ ರುಕ್ಮಿಣಿ, ಪುತ್ರರಾದ ರವಿ, ರಘು, ಪುತ್ರಿ ನಾಗರತ್ನ ಅಲಿಯಾಸ್ ಬೋರಮ್ಮ ಹಾಗೂ ಅಪಾರ ಬಂಧು ವರ್ಗ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.



ನೋಯ್ಡಾದ 40 ಮಹಡಿಯ ಅವಳಿ ಅಕ್ರಮ ಕಟ್ಟಡಗಳು

ಇಂದು ನೆಲಸಮ

ನೋಯ್ಡಾ: ನೋಯ್ಡಾದ ಸೂಪರ್ ಟೆಕ್ ಕಂಪನಿ ನಿರ್ಮಿಸಿದ್ದ ಅಕ್ರಮ ಅವಳಿ ಕಟ್ಟಡಗಳನ್ನು ಭಾನುವಾರ ಮಧ್ಯಾಹ್ನ ಸ್ಫೋಟಕಗಳನ್ನು ಬಳಸಿ ಧ್ವಂಸಗೊಳಿಸಲು ಮುನ್ನೆಚ್ಚರಿಕೆ ಕ್ರಮವಾಗಿ ಸಮೀಪದ ಕಟ್ಟಡಗಳಿಂದ 5000 ನಾಗರಿಕರು, 2700 ವಾಹನ, 200 ಸಾಕು ಪ್ರಾಣಿ ತೆರವುಗೊಳಿಸಲಾಗಿದೆ. ಅವಳಿ ಗೋಪುರಗಳ ಸಮೀಪದಲ್ಲಿರುವ 2 ವಸತಿ ಸಂಕೀರ್ಣಗಳಾದ ಎಮೆರಾಲ್ಡ್ ಕೋರ್ಟ್ ಹಾಗೂ ಎಟಿಎಸ್ ವಿಲೇಜ್‌ನಿಂದ 5000 ನಿವಾಸಿಗಳಿಗೆ ಮುಂಜಾನೆ 7ರ ಒಳಗೆ ಕಟ್ಟಡವನ್ನು ತೆರವುಗೊಳಿಸಲು ಸೂಚನೆ ನೀಡಲಾಗಿದೆ. ಅವಳಿ ಕಟ್ಟಡಗಳ ಸುತ್ತ 500 ಮೀ. ಪ್ರದೇಶವನ್ನು ನಿರ್ಬಂಧಿತ ವಲಯ ಎಂದು ಘೋಷಿಸಲಾಗಿದ್ದು, ಅಲ್ಲಿ ಸ್ಫೋಟ ಕಾರ್ಯಾಚರಣೆ ಸಿಬ್ಬಂದಿ ಹೊರತುಪಡಿಸಿ ಯಾವುದೇ ಇತರೆ ವ್ಯಕ್ತಿಗಳು ಅಥವಾ ಪ್ರಾಣಿಗಳಿಗೆ ಪ್ರವೇಶದ ಅನುಮತಿ ಇಲ್ಲ.



ಮತ್ತೊಂದು ಇತಿಹಾಸ ಸೃಷ್ಟಿಸಿದ ನೀರಜ್ ಚೋಪ್ರಾ

ಡೈಮಂಡ್ ಲೀಗ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಅಥ್ಲೀಟ್

ಲಾಸನ್: ಫೀನಿಕ್ಸ್‌ನಂತೆ ಎದ್ದು ಬಂದಿರುವ ನೀರಜ್ ಚೋಪ್ರಾ ಇತಿಹಾಸ ನಿರ್ಮಿಸಿದ್ದಾರೆ. ಲಾಸನ್‌ನಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ ಅಗ್ರಸ್ಥಾನ ಪಡೆದುಕೊಂಡಿದ್ದು, ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎಂಬ ದಾಖಲೆ ಬರೆದಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ, ಲಾಸನ್‌ನಲ್ಲಿ ನಡೆದ ಡೈಮಂಡ್ ಲೀಗ್ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.



ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ನೀರಜ್ 89.08 ಮೀ. ಸಾಧನೆಯೊಂದಿಗೆ ಮೊದಲ ಸ್ಥಾನ ಪಡೆದರು. ಈ ವಿಶಿಷ್ಟ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎಂಬ ಗೌರವಕ್ಕೆ ನೀರಜ್ ಪಾತ್ರರಾಗಿದ್ದಾರೆ. ಈ ಜಯದೊಂದಿಗೆ ಮುಂದಿನ ತಿಂಗಳು ಜ್ಯೂರಿಚ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ.

ಮೊದಲ ಪ್ರಯತ್ನದಲ್ಲೇ ನೀರಜ್ ಈ ಸಾಧನೆ ಮಾಡಿದ್ದು ವಿಶೇಷ. ಜೇಕಬ್ ವಾಡ್ಲೆಚ್ (85.88 ಮೀ.) 2ನೇ ಸ್ಥಾನ ಪಡೆದರೆ, ಅಮೆರಿಕದ ಕರ್ಟಿಸ್ ಥಾಂಪ್ಸನ್ (83.72 ಮೀ.) 3ನೇ ಸ್ಥಾನ ಗಳಿಸಿದರು. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಗೆದ್ದ ಬಳಿಕ ಇವರು ಗಾಯಕ್ಕೆ ತುತ್ತಾಗಿದ್ದರು. ಹೀಗಾಗಿ ಕಾಮನ್‌ವೆಲ್ತ್ ಗೇಮ್ಸ್‌ನಿಂದ ಕೂಡ ಹೊರಗುಳಿಯಬೇಕಾಯಿತು. ಇದೀಗ ಸ್ವಿಸ್‌ನ ಡೈಮಂಡ್ ಲೀಗ್‌ನಲ್ಲಿ 89.08 ಮೀಟರ್ ದೂರ ಜಾವೆಲಿನ್ ಎಸೆಯುವ ಮೂಲಕ ಪ್ರಶಸ್ತಿ ಜಯಿಸಿಕೊಂಡಿದ್ದಾರೆ. ಈ ಗೆಲುವಿನೊಂದಿಗೆ ನೀರಜ್ ಚೋಪ್ರಾ ಸೆಪ್ಟೆಂಬರ್ 7 ಮತ್ತು 8ರಂದು ಸ್ವಿಟ್ಜರ್ಲೆಂಡ್‌ನ ಜ್ಯೂರಿಚ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೇ, 2023ರ ವಿಶ್ವ ಚಾಂಪಿಯನ್‌ಶಿಪ್‌ಗೆ ನೀರಜ್ ಅರ್ಹತೆ ಪಡೆದಿದ್ದಾರೆ. ಇವರ ಸಾಧನೆಗೆ ಕೇಂದ್ರ ಸಚಿವ ನಿತಿನ್ ಗಡ್ಕರ್, ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ, ಮಾಜಿ ಸಚಿವ ಅರವಿಂದ ಲಿಂಬಾವಳಿ ಅಭಿನಂದಿಸಿದ್ದಾರೆ.



ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ಮಕ್ಕಳು ಶನಿವಾರ ಶಾಲಾ ಆವರಣದಲ್ಲಿ ಗಣೇಶ ಹಬ್ಬದ ಅಂಗವಾಗಿ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳನ್ನು ಮಾಡಿ ತಮ್ಮ ತಮ್ಮ ಮನೆಗೆ ಕೊಂಡೊಯ್ದರು.

ಆ.30, ಶ್ರೀ ವೀರಭದ್ರೇಶ್ವರ ಜಯಂತೋತ್ಸವ ಆಚರಣೆ

ಮೈಸೂರು,ಆ.27–ಶ್ರೀ ವೀರಭದ್ರೇಶ್ವರ ಜಯಂತಿ ಪ್ರಯುಕ್ತ ನಂಜನಗೂಡು ತಾಲೂಕು ಸುತ್ತೂರು ಶ್ರೀಕ್ಷೇತ್ರದಲ್ಲಿ ಆ.30ರ ಮಂಗಳವಾರ ಶ್ರೀ ವೀರಭದ್ರೇಶ್ವರ ದೇವಸ್ಥಾನ (ಗುಡ್ಡ) ಹಾಗೂ ಶ್ರೀಮಠದ ಆವರಣದ ಶ್ರೀವೀರಭದ್ರೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿದೆ. ಭಾದ್ರಪದ ಶುಕ್ಲ ಮೊದಲನೇ ಮಂಗಳವಾರ ಶ್ರೀ ವೀರಭದ್ರೇಶ್ವರ ಸ್ವಾಮಿ ಜನ್ಮ ತಾಳಿದ ಧಾರ್ಮಿಕ ಹಿನ್ನೆಲೆಯಲ್ಲಿ ಜಯಂತಿಯನ್ನು ಆಚರಿಸಲಾಗುತ್ತಿದೆ.

ಕಂಡ ಕಂಡಲ್ಲಿ ಕಸ ಹಾಕುವುದಕ್ಕೆ ಕಡಿವಾಣ ಹಾಕಲು ಸೆಕ್ಯೂರಿಟಿ ಕಾವಲು

ತಮ್ಮ ವಾರ್ಡ್ ಸ್ವಚ್ಛತೆಗಾಗಿ ಸ್ವಂತ ಹಣದಲ್ಲಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ವಿಶೇಷ ಕಾಳಜಿ

ಮೈಸೂರು, ಆ.27(ಜಿಎ)– ಕಂಡ ಕಂಡಲ್ಲಿ ಕಸ ಹಾಕುವುದನ್ನು ತಪ್ಪಿಸಲು ಭದ್ರತಾ ಸಿಬ್ಬಂದಿ ನಿಯೋಜಿಸುವ ಮೂಲಕ, ಸ್ವಚ್ಛತಾ ಬದ್ಧತೆ ಪ್ರದರ್ಶಿಸಿರುವ ಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್ ಅವರ ಬಗ್ಗೆ ಸಾರ್ವಜನಿಕರಿಂದ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

ಮೈಸೂರಿನ ವಾರ್ಡ್ ನಂ.3ರ ಪಾಲಿಕೆ ಸದಸ್ಯರಾದ ಕೆ.ವಿ. ಶ್ರೀಧರ್ ತಮ್ಮ ವಾರ್ಡ್ ಅನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸ್ವಾತಂತ್ರ್ಯ ದಿನಾಚರಣೆಯಂದು ವಾರ್ಡ್‌ನ 8 ಸ್ಥಳದಲ್ಲಿ ತಮ್ಮ ಸ್ವಂತ ಹಣ ನೀಡಿ ಭದ್ರತಾ ಸಿಬ್ಬಂದಿ ನೇಮಿಸಿ, ಕಸ ಹಾಕುವುದಕ್ಕೆ ಕಡಿವಾಣ ಹಾಕಿದ್ದಾರೆ.

ನಿತ್ಯವು ಪ್ರತಿ ವಾರ್ಡ್‌ಗಳಲ್ಲಿ ಪೌರಕಾರ್ಮಿಕರು ಮನೆ ಬಾಗಿಲಿಗೆ ತೆರಳಿ ಆಟೋ ಮೂಲಕ ಕಸ ಸಂಗ್ರಹಿಸಿ, ಅದನ್ನು ವಿಲೇವಾರಿ ಮಾಡುತ್ತಿದ್ದಾರೆ. ಇದರ ನಡುವೆಯೂ ಕೆಲ ಬೇಜವಾಬ್ದಾರಿ ಜನ ಬೆಳಗ್ಗೆ ಕೆಲಸಕ್ಕೆ, ಸಂಜೆ ವಾಕಿಂಗ್‌ಗೆ ಹೋಗುವಾಗ ಹಾಗೂ ರಾತ್ರಿ ಹೊತ್ತು ಪ್ಲಾಸ್ಟಿಕ್ ಕವರ್, ಚೀಲಗಳಲ್ಲಿ ತಮ್ಮ ಮನೆಯ ಕಸವನ್ನು ತುಂಬಿಕೊಂಡು ಬಂದು ಮನಸ್ಸೋ ಇಚ್ಛೆ ಕಂಡ ಕಂಡಲ್ಲಿ ಬಿಸಾಡುತ್ತಿದ್ದಾರೆ.

ದುಬಾರಿ ಕಾರಿನಲ್ಲಿ ಬಂದೂ ಇಂತಹ ಹೇಸಿಗೆ ಕೆಲಸ ಮಾಡುವುದು. ಉನ್ನತ ಹುದ್ದೆಗಳಲ್ಲಿದ್ದರೂ ಬೇಜವಾಬ್ದಾರಿಯಿಂದ ವರ್ತಿಸುವುದು. ಮತ್ತೊಬ್ಬರಿಗೆ ಬುದ್ಧಿ ಹೇಳುವಂತಿದ್ದರೂ ತಾವೇ ಬುದ್ಧಿಹೀನರಂತೆ ವರ್ತಿಸುತ್ತಿರುವುದು ನಗರದ ಸ್ವಚ್ಛತೆಗೆ ಮಾರಕವಾಗಿದೆ. ಅಲ್ಲದೆ ಹೆಬ್ಬಾಳ, ಮೇಟಗಳ್ಳಿ, ಬಿಎಂಶ್ರೀನಗರ, ವಿಜಯನಗರ ರೈಲ್ವೆ ಬಡಾವಣೆ, ಮಂಚೇ ಗೌಡನಕೊಪ್ಪಲು, ಬೃಂದಾವನ, ಗೋಕುಲಂ ಸೇರಿದಂತೆ ನಗರದ ಹಲವೆಡೆ ನೆಲೆಸಿರುವ ಹೊರ ರಾಜ್ಯಗಳ ಜನರಿಂದ ಕಂಡ ಕಂಡಲ್ಲಿ ಕಸದ ರಾಶಿ ಹೆಚ್ಚಾಗುತ್ತಿದೆ. ಸ್ವಚ್ಛತೆಯ ಕನಿಷ್ಠ ಪರಿಜ್ಞಾನವಿಲ್ಲದಂತೆ ಕಸ ಬಿಸಾಡುವುದು ಸರ್ವೇ ಸಾಮಾನ್ಯವಾಗಿದೆ.



ಈ ರೀತಿ ಕಂಡ ಕಂಡಲ್ಲಿ ಕಸ ಹಾಕುವವರಿಗೆ ಪಾಲಿಕೆ ಅನೇಕ ಅಭಿಯಾನಗಳ ಮೂಲಕ ಎಚ್ಚರಿಸುತ್ತಿದ್ದು, ಇದರೊಟ್ಟಿಗೆ ದಂಡವನ್ನು ವಿಧಿಸುತ್ತಿದೆ. ಇಷ್ಟೆಲ್ಲಾ ಅಭಿಯಾನ ಮತ್ತು ಎಚ್ಚರಿಕೆಗಳನ್ನು ಪಾಲಿಕೆ ನೀಡುತ್ತಿದ್ದರೂ ಕಂಡ ಕಂಡಲ್ಲಿ ಕಸ ಹಾಕುವವರ ಸಂಖ್ಯೆ ಏನು ಕಡಿಮೆಯಾಗಿಲ್ಲ. ಇದೇ ರೀತಿಯ ಸಮಸ್ಯೆ ಪಾಲಿಕೆಯ ವಾರ್ಡ್ ನಂ 3ರಲ್ಲಿ ಸಾಮಾನ್ಯವಾಗಿತ್ತು. ಇದನ್ನು ತಪ್ಪಿಸಲು ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ವಿನೂತನ ಪ್ರಯತ್ನಕ್ಕೆ ಕೈಹಾಕಿ, ಯಶಸ್ವಿಯಾಗಿದ್ದಾರೆ. ವಾರ್ಡಿನಲ್ಲಿ ಸ್ವಚ್ಛತೆಯೊಂದಿಗೆ ಕಸಮುಕ್ತ ವಾರ್ಡ್ ಮಾಡಲು ಪಣ ತೊಟ್ಟಿರುವ ಅವರು, ಸ್ವಚ್ಛತೆ ಕುರಿತು ವಾರ್ಡ್‌ನ ಪ್ರತಿ ಮನೆ ಮನೆಗೆ ತೆರಳಿ ಅರಿವು ಮೂಡಿಸುವ ಕೆಲಸಕ್ಕೂ ಮುಂದಾಗಿದ್ದರು. ಆದರೂ ವಾರ್ಡಿನ ಸುಮಾರು 23 ಸ್ಥಳಗಳಲ್ಲಿ ಎಷ್ಟೇ ಹೇಳಿದರೂ ಕಸ ಸುರಿಯುತ್ತಿದ್ದರು. ಇದರಿಂದ ಇಡೀ ಬಡಾವಣೆಗೆ ಮಾಲಿನ್ಯ ಸಮಸ್ಯೆ ಎದುರಾಗಿತ್ತು. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡ ಕಾರ್ಪೊರೇಟರ್ ಶ್ರೀಧರ್, ಹೀಗೆ ಕಸ ಸುರಿಯುವ ಸ್ಥಳಗಳಲ್ಲಿ ತಾವೇ ಖುದ್ದಾಗಿ ಕಾರ್ಯಾಚರಣೆ ನಡೆಸಿ ಕೆಲವರಿಗೆ ಛೀಮಾರಿ ಹಾಕಿದ್ದರು. ಇದರ ಪರಿಣಾಮ ವಾರ್ಡ್‌ನಲ್ಲಿ ಸುಮಾರು 15 ಕಡೆ ಕಸ ಸುರಿಯುವುದು ತಪ್ಪಿತಾದರೂ, ಉಳಿದ ಏಳೆಂಟು ಕಡೆ ಮಾತ್ರ ನಿರಂತರವಾಗಿ ರಾಶಿಗಟ್ಟಲೆ ಕಸ ರಾಶಿ ಬೀಳುತ್ತಲೇ ಇತ್ತು. ಈ ಸ್ಥಳಗಳಿಗೆ ತಮ್ಮ ಸ್ವಂತ ಹಣ ನೀಡಿ, ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದ್ದು, ಅವರು ಬೆಳಗ್ಗೆ 6ರಿಂದ ಸಂಜೆ 6ರವರೆಗೂ ಕಾವಲು ಕಾಯುತ್ತಿದ್ದಾರೆ. ಇವರ ಈ ಪ್ರಯತ್ನಕ್ಕೆ ಸ್ಥಳೀಯವಾಗಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ವಾರ್ಡ್‌ನಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ ಮೊದಲು ಪೌರಕಾರ್ಮಿಕರು ಮತ್ತು ಸ್ನೇಹಿತರ ಸಹಕಾರದಿಂದ ಸ್ವಚ್ಛತಾ ಕಾರ್ಯವನ್ನು ಆರಂಭಿಸಲಾಗಿತ್ತು. ಮುಂದಿನ ಹಂತವಾಗಿ ಆ.15ರಂದು ಸ್ವಾತಂತ್ರ್ಯ ದಿನಾಚರಣೆಯಂದು ಈ ವಿನೂತನ ಪ್ರಯತ್ನವನ್ನು ವಾರ್ಡ್‌ನಲ್ಲಿ ಜಾರಿಗೆ ತರಲಾಯಿತು. ಈ ಪ್ರಯತ್ನಕ್ಕೆ ಸಾರ್ವಜನಿಕರಿಂದಲೂ ಮೆಚ್ಚುಗೆ ವ್ಯಕ್ತವಾಗಿದ್ದು, ಅವರೇ ಸ್ವಯಂ ಪ್ರೇರಣೆಯಿಂದ ಕಂಡ ಕಂಡಲ್ಲಿ ಕಸ ಹಾಕುವುದನ್ನು ನಿಲ್ಲಿಸಿದ್ದಾರೆ. ಇದು ಸಂತಸದ ವಿಚಾರ. ಈ ಸಮಸ್ಯೆ ಇಡೀ ಮೈಸೂರು ನಗರಾದ್ಯಂತ ಇದ್ದು, ನಿವಾರಣೆಗೆ ಪಾಲಿಕೆ ಆಡಳಿತ ವರ್ಗ, ಪಕ್ಷಾತೀತವಾಗಿ ಸ್ಥಳೀಯ ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು, ಸಾರ್ವಜನಿಕರು ಕೈಜೋಡಿಸಬೇಕಿದೆ. **–ಕೆ.ವಿ.ಶ್ರೀಧರ್, ಕಾರ್ಪೊರೇಟರ್, ವಾರ್ಡ್ ನಂ.3**

ಒಂದನೇ ಪುಟದಿಂದ

4 ಅನಧಿಕೃತ ಬಡಾವಣೆ ತೆರವು

ಪ್ರದೇಶದಲ್ಲಿ ನಿವೇಶನ ರಚಿಸಿ ಹಂಚಿಕೆ ಮಾಡಬೇಕು. ಇನ್ನುಳಿದ ಜಾಗವನ್ನು ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಡಬೇಕು ಎಂದು ತಿಳಿಸಿದ್ದಾರೆ.

ಆದರೆ ಸಾರ್ವಜನಿಕ ಉಪಯೋಗಕ್ಕೆ ಬಿಡಬೇಕಾದ ಜಾಗದಲ್ಲೂ ನಿವೇಶನ ರಚನೆ ಮಾಡಿ ಹಂಚುವ ಹಾಗೂ ಅನುಮೋದನೆ ಶುಲ್ಕ ಪಾವತಿಯಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ರೆವಿನ್ಯೂ ಪ್ರದೇಶದಲ್ಲಿ ಬಡಾವಣೆ ನಿರ್ಮಿಸಿ, ನಿವೇಶನ ಮಾರಾಟ ಮಾಡುತ್ತಾರೆ. ಹೀಗೆ ಅನಧಿಕೃತವಾಗಿ ಸುಮಾರು 6 ಎಕರೆ ಜಾಗದಲ್ಲಿ ಬಡಾವಣೆ ನಿರ್ಮಿಸಲಾಗಿತ್ತು. ರಸ್ತೆ, ವಿದ್ಯುತ್ ಕಂಬ, ನಿವೇಶನ ವಿಭಜನೆ ಮಾಡಲಾಗಿತ್ತು. ಈ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿತ್ತು. ಅಲ್ಲದೆ ಕ್ಷೇತ್ರ ಪರಿವೀಕ್ಷಣೆ ಸಂದರ್ಭದಲ್ಲಿ ನಮ್ಮ ಇಂಜಿನಿಯರ್‌ಗಳು ಗುರುತಿಸಿದ್ದರು. ನಿಯಮಬದ್ಧವಾಗಿ ಬಡಾವಣೆ ನಿರ್ಮಿಸುವಂತೆ ತಿಳಿ ಹೇಳಿದ್ದರು. ಆದರೂ ನಿರ್ಮಾಣ ಕಾರ್ಯ ಮುಂದುವರೆಸಿದ್ದ ಕಾರಣ ಇಂದು ಕಾರ್ಯಾಚರಣೆ ನಡೆಸಿ, ನೆಲಸಮಗೊಳಿಸಲಾಯಿತು ಎಂದರು.

ಖರೀದಿಸುವಾಗ ಎಚ್ಚರ: ಅನಧಿಕೃತ ಬಡಾವಣೆ ಎಂದು ಗುರುತಿಸಿದರೆ ಅದರಲ್ಲಿ ಬಡಾವಣೆ ನಿರ್ಮಾಣ ಮಾಡಿದವರೊಂದಿಗೆ ನಿವೇಶನ ಖರೀದಿ ಮಾಡಿದವರೂ ಪಾಲುದಾರರಾಗುತ್ತಾರೆ. ನಿವೇಶನ ಖರೀದಿ ಮಾಡುವ ಮುನ್ನ ಆ ಪ್ರದೇಶದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು. ಭೂಪರಿವರ್ತನೆ, ಮುಡಾ ಅನುಮೋದನೆ ಇನ್ನಿತರ ಅಂಶಗಳ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ನಿರ್ಲಕ್ಷ್ಯದಿಂದ ನಿವೇಶನ ಖರೀದಿಸಿದರೆ ನಷ್ಟ ಅನುಭವಿಸಬೇಕಾಗುತ್ತದೆ. ಬಡಾವಣೆ ನಿರ್ಮಿಸಿ, ನಿವೇಶನ ಮಾರಿ ಹೋದವರು ಮತ್ತೆ ಬರುವುದಿಲ್ಲ. ಹಾಗಾಗಿ ಈ ಬಗ್ಗೆ ತುಂಬಾ ಎಚ್ಚರಿಕೆ ವಹಿಸಬೇಕೆಂದು ಮನವಿ ಮಾಡಿದ್ದಾರೆ.

ಸಾರ್ವಜನಿಕರಿಗೆ ಮಹಾಮೋಸ: ಮೈಸೂರಿನ ಸುತ್ತಲೂ ನಾಯಿ ಕೊಡೆಗಳಂತೆ ಬಡಾವಣೆಗಳು ಎದ್ದಿವೆ. ರೆವಿನ್ಯೂ ಜಾಗದಲ್ಲಿ ಮನಸ್ಸೋಇಚ್ಛೆ ಬಡಾವಣೆ ನಿರ್ಮಿಸಿ, ಭಾರೀ ಬೆಲೆಗೆ ನಿವೇಶನ ಬಿಕರಿ ಮಾಡಲಾಗುತ್ತಿದೆ. ಮೊದಲು ಖರೀದಿದಾರರನ್ನು ಹುಡುಕಿ ಅವರಿಂದ ಮುಂಗಡ ಪಡೆದು ನಂತರ ಬಡಾವಣೆ ನಿರ್ಮಾಣ ಆರಂಭಿಸಲಾಗುತ್ತದೆ. ಬಳಿಕ ಕಂತುಗಳಲ್ಲಿ ಹಣ ಪಡೆದು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಇದರ ನಡುವೆ ಅಗ್ರಿಮೆಂಟ್ ಮಾಡಿಕೊಟ್ಟು ಖರೀದಿದಾರರ ವಿಶ್ವಾಸ ಕಾಯ್ದುಕೊಳ್ಳಲಾಗುತ್ತದೆ. ಹೀಗೆ ಸಾರ್ವಜನಿಕರು ಹಣ ನೀಡಿ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಖರೀದಿಸಿರುವ ಸಾಧ್ಯತೆ ಇದೆ. ಮುಡಾ ಅಧಿಕಾರಿಗಳು ಇಂದು ನೆಲಸಮಗೊಳಿಸಿದ ಬಡಾವಣೆಗಳಲ್ಲೂ ಅದೆಷ್ಟೋ ಜನ ನಿವೇಶನ ಖರೀದಿಸಿರಬಹುದು. ಆದರೆ ಮನೆ ಕಟ್ಟುವ ಅವರ ಕನಸು ಇಂದೇ ನೆಲಸಮವಾದಂತಾಗಿದೆ.

ಸಾರ್ವಜನಿಕರು ಸ್ಥಳೀಯ ಯೋಜನಾಪ್ರದೇಶ ಸರಹದ್ದಿನಲ್ಲಿ ನಿವೇಶನ ಖರೀದಿಸುವ ಮುನ್ನ ಆ ಬಡಾವಣೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಅನುಮೋದನೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಹಾಗೂ ಅನಧಿಕೃತವಾಗಿ ಬಡಾವಣೆಗಳ ನಿರ್ಮಾಣವಾಗುತ್ತಿದ್ದರೆ ತಕ್ಷಣ ಮುಡಾಗೆ ಮಾಹಿತಿ ನೀಡಬೇಕೆಂದು ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಸಹ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಪೋಕ್ಸೋ ಪ್ರಕರಣ ದಾಖಲು

16 ವರ್ಷದ ಬಾಲಕಿ ಮೇಲೆ ಕಳೆದ ಮೂರೂವರೆ ವರ್ಷದಿಂದ ಹಾಗೂ 15 ವರ್ಷದ ಬಾಲಕಿ ಮೇಲೆ ಕಳೆದ ಒಂದೂವರೆ ವರ್ಷದಿಂದ ಶಿವಮೂರ್ತಿ ಮುರುಘಾ ಶರಣರು ನಿರಂತರವಾಗಿ ಲೈಂಗಿಕ ದೌರ್ಜನ್ಯವೆಸಗುತ್ತಿದ್ದರು. ಶ್ರೀಗಳ ವಸತಿ ನಿಲಯದ ವಾರ್ಡನ್ ರಶ್ಮಿ, ಮಠದ ಮರಿಸ್ವಾಮಿಗಳಾದ ಬಸವಾದಿತ್ಯ, ಲಾಯರ್ ಗಂಗಾಧರಯ್ಯ ಮತ್ತು ಲೀಡರ್ ಪರಮಶಿವಯ್ಯ ಸಹಕರಿಸಿದ್ದರು ಎಂದು ಮೈಸೂರಿನ ಮಕ್ಕಳ ರಕ್ಷಣಾ ಸಮಿತಿಯ ಕಾನೂನು ಪರಿವೀಕ್ಷಕರಾದ ಸಿ.ಚಂದ್ರಕುಮಾರ್ ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಚಿತ್ರದುರ್ಗದಿಂದ ಮೈಸೂರಿನ ಒಡನಾಡಿ ಸೇವಾ ಸಂಸ್ಥೆಗೆ ಆಗಮಿಸಿದ್ದ ಈ ಇಬ್ಬರು ವಿದ್ಯಾರ್ಥಿನಿಯರಿಗೆ ಕೌನ್ಸಿಲಿಂಗ್ ನಡೆಸಿದಾಗ ಅವರು ಮುರುಘಾ ಮಠದಲ್ಲಿ ತಮ್ಮ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಬಗ್ಗೆ ವಿವರಿಸಿದ್ದಾರೆ. ನಂತರ ಒಡನಾಡಿ ಸೇವಾ ಸಂಸ್ಥೆಯವರು ಈ ಸಂಬಂಧ ಜಿಲ್ಲಾ ಮಕ್ಕಳ ಸಮಿತಿ ಗಮನಕ್ಕೆ ತಂದಿದ್ದು, ಸಮಿತಿಯು ನಡೆಸಿದ ಕೌನ್ಸಿಲಿಂಗ್ ವೇಳೆ ಇಬ್ಬರು ವಿದ್ಯಾರ್ಥಿನಿಯರು ತಮ್ಮ ಮೇಲೆ ಡಾ. ಶಿವಮೂರ್ತಿ ಮುರುಘಾ ಶರಣರು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ವಿವರಿಸಿದ್ದಾರೆ. ಸಮಿತಿಯು ನೀಡಿದ ಆದೇಶದ ಮೇರೆಗೆ ಸಮಿತಿಯ ಕಾನೂನು ಪರಿವೀಕ್ಷಕರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಪ್ರಕರಣ ಎಲ್ಲೇ ನಡೆದಿದ್ದರೂ, ದೂರು ದಾಖಲಿಸಿಕೊಂಡು ಪ್ರಕರಣವನ್ನು ಸಂಬಂಧಪಟ್ಟ ಠಾಣೆಗೆ ವರ್ಗಾಯಿಸಬೇಕು ಎಂಬ ಸುಪ್ರೀಂಕೋರ್ಟ್ ಆದೇಶದಂತೆ ನಜರ್‌ಬಾದ್ ಠಾಣಾ ಪೊಲೀಸರು ಶುಕ್ರವಾರ ರಾತ್ರಿ 10.30ರಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ಇಂದು ಬೆಳಿಗ್ಗೆ ಪ್ರಕರಣವನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾವಣೆ ಮಾಡಿದ್ದಾರೆ. ಆ ಠಾಣೆಯಲ್ಲಿ ತನಿಖೆ ನಡೆಯಬೇಕಾಗಿದ್ದು, ಸಂತ್ರಸ್ತ ಬಾಲಕಿಯರ ಮರು ಹೇಳಿಕೆ ಹಾಗೂ ಮಹಜರ್ ಮತ್ತು ವೈದ್ಯಕೀಯ ತಪಾಸಣೆ ನಡೆಸಬೇಕಾಗಿರುವುದರಿಂದ ತನಿಖೆಗಾಗಿ ಮೈಸೂರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯವರು ಸಂತ್ರಸ್ತ ಬಾಲಕಿಯರನ್ನು ಚಿತ್ರದುರ್ಗಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ತನಿಖೆ ಮುಗಿದ ನಂತರ ಬಾಲಕಿಯರನ್ನು ಮತ್ತೆ ಒಡನಾಡಿ ಸೇವಾ ಸಂಸ್ಥೆಗೆ ಕರೆತರಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

> **ಮುರುಘಾ ಮಠದ ಶ್ರೀಗಳ ವಿರುದ್ಧ ಲೈಂಗಿಕ ಕಿರುಕುಳದ ದೂರು ದಾಖಲಾಗಿರುವುದು ನನಗೆ ಆಶ್ಚರ್ಯ ತಂದಿದ್ದು, ಈ ಬಗ್ಗೆ ಐದಾರು ತಿಂಗಳ ಹಿಂದೆಯೇ ಹಲವಾರು ಬಾರಿ ಚರ್ಚೆಗಳು ನಡೆದಿವೆ. ಈ ವಿಚಾರದಲ್ಲಿ ಪ್ರಾರಂಭಿಕ ಹಂತದಲ್ಲೇ ಮುಂಜಾಗ್ರತೆ ವಹಿಸಬೇಕಿತ್ತು. ಈ ಪ್ರಕರಣ ಧಾರ್ಮಿಕ ಕ್ಷೇತ್ರದ ಮೇಲೆ ಬೇರೆ ಪರಿಣಾಮ ಬೀರಬಾರದು. ಈಗಾಗಲೇ ಒಂದು ಬಾರಿ ಹೊಸನಗರ ಶ್ರೀಗಳ ವಿರುದ್ಧವೂ ಆರೋಪ ಕೇಳಿಬಂದಿತ್ತು. ಈಗ ಮುರುಘಾ ಶ್ರೀಗಳ ವಿರುದ್ಧ ಆರೋಪ ಬಂದಿದೆ. ಏನೇ ಆಗಲಿ, ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆಯಾಗಬಾರದು. ಕಾನೂನು ಬಾಹಿರವಾಗಿ ಏನಾದರೂ ನಡೆದಿದ್ದರೆ ಅದರ ಬಗ್ಗೆ ಸರ್ಕಾರ ಒಂದು ತೀರ್ಮಾನ ಕೈಗೊಳ್ಳಬೇಕು.**
>
> **– ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ**

ಸಂಧಾನಕ್ಕೂ ಬದ್ಧ, ಕಾನೂನು ಸಮರಕ್ಕೂ ಸಿದ್ಧ

ನಡೆದಾಗ ನಾನೇ ಅವರಿಗೆ ಕೋರ್ಟ್ ಶುಲ್ಕ ಪಾವತಿಸಿದ್ದೇನೆ. ಈಗ ಕೆಲವರು ಸಂಧಾನ ಮಾಡುತ್ತಿದ್ದಾರೆ. ಅದು ವಿಫಲವಾದರೆ ಸಮರಕ್ಕೆ ಸಿದ್ಧವಾಗಬೇಕಾಗುತ್ತದೆ. ಸಾಧ್ಯವಾದರೆ ಸಮಸ್ಯೆ ಬಗೆಹರಿಸಿಕೊಳ್ಳೋಣ. ಇಲ್ಲವಾದರೆ ಹೋರಾಡೋಣ ಎಂದ ಶ್ರೀಗಳು, ಈ ವಿಚಾರದಲ್ಲಿ ತಾವು ಸಂಧಾನ ಹಾಗೂ ಕಾನೂನು ಸಮರ ಎರಡಕ್ಕೂ ಸಿದ್ಧ ಹಾಗೂ ಬದ್ಧರಾಗಿದ್ದು, ನೀವೆಲ್ಲಾ ನಮ್ಮ ಜೊತೆ ಇರುವುದು ದೊಡ್ಡ ಧೈರ್ಯ ತಂದಿದೆ. ಯಾರೂ ದುಃಖ ಮಾಡಿಕೊಳ್ಳಬೇಡಿ ಎಂದರು. ದೊಡ್ಡವರಿಗೆ ದೊಡ್ಡ ಕುತ್ತು ಬರುತ್ತದೆ ಎಂದ ಶ್ರೀಗಳು, ಅಂದು ಏಸುವನ್ನು ಶಿಲುಬೆಗೆ ಏರಿಸಿದ್ದು ಅದೇ ಧರ್ಮದವರು. ಬುದ್ಧನಿಗೆ ಹಂದಿ ಮಾಂಸದ ರಸ ಉಣಿಸಿದ್ದೂ ಅವರ ಜೊತೆ ಇದ್ದವರೇ. ಸಾಕ್ರಟೀಸ್ ಬದುಕಿನಲ್ಲಿ ಕೂಡ ನಿಕಟ ಶಿಷ್ಯ ಪ್ಲೇಟೋ ಇದ್ದ. ಅಂತಹ ಶಿಷ್ಯ ನನಗೆ ಸಿಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಶ್ರೀಗಳು, ಸಾಕ್ರಟೀಸ್ ಬದುಕಿನ ಕೊನೆಯ ಕ್ಷಣಗಳನ್ನು ನೆನೆದು, ಕೊನೇ ಘಳಿಗೆಯಲ್ಲಿ ಸಾಕ್ರಟೀಸ್ ವಿಷ ಕುಡಿದ ಪ್ರಸಂಗವನ್ನು ಮೆಲುಕು ಹಾಕಿದರು. ಮಹಾತ್ಮಗಾಂಧಿ, ಬಸವಣ್ಣನವರಂತಹವರಿಗೂ ನೋವಿನ ದಿನಗಳು ಬಂದಿದ್ದವು. ಅದರಲ್ಲಿ ನಾವೇನೂ ಹೊರತಲ್ಲ. ಜೀವನದಲ್ಲಿ ಯಾವ ನುಡಿಯೂ ಶಾಶ್ವತವಲ್ಲ, ನುಡಿಯೂ ಶಾಶ್ವತವಲ್ಲ ಎಂದು ಅವರು ಹೇಳಿದರು. ಈ ಸಭೆಯಲ್ಲಿ ವಿರಕ್ತ ಮಠದ ಬಸವ ಪ್ರಭು, ಒಳಗಿನ್ನಳಿ ಮಠದ ಕಿರಣಶ್ರೀಗಳು, ಹೆಬ್ಬಾಳು ಮಠದ ಮಹಂತ ರುದ್ರ ಸ್ವಾಮೀಜಿ, ಮಡಿವಾಳ ಸ್ವಾಮೀಜಿಗಳು, ಇಮ್ಮಡಿ ಸಿದ್ದೇಶ್ವರಸ್ವಾಮಿ ಸೇರಿದಂತೆ ಹಲವು ಮಠಾಧೀಶರು, ಜನಪ್ರತಿನಿಧಿಗಳು ಹಾಗೂ ಶ್ರೀಗಳ ಆಪ್ತ ಭಕ್ತರು ಭಾಗವಹಿಸಿದ್ದರು.

ಹಾಸ್ಟೆಲ್ ವಾರ್ಡನ್ ಕೇಸ್ ದಾಖಲು

ಮಠದ ವಿರುದ್ಧ ಷಡ್ಯಂತ್ರ ರೂಪಿಸಿದ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ. ಮೈಸೂರಲ್ಲಿ ದಾಖಲಾಗಿರುವ ಪೋಕ್ಸೋ ಕಾಯ್ದೆಯ 2ನೇ ಆರೋಪಿಯಾಗಿರುವ ಅಕ್ಕಮಹಾದೇವಿ ವಸತಿ ನಿಲಯದ ವಾರ್ಡನ್ ರಶ್ಮಿ ಅವರು ಈ ದೂರು ದಾಖಲಿಸಿದ್ದು, ಕಳೆದ ಜುಲೈ 24ರಂದು ಇಬ್ಬರು ವಿದ್ಯಾರ್ಥಿನಿಯರು ವೈಯಕ್ತಿಕ ಕಾರಣ ನೀಡಿ ಗೇಟ್ ಪಾಸ್ ಪಡೆದು ವಸತಿ ನಿಲಯದಿಂದ ಹೊರಗೆ ಹೋಗಿದ್ದಾರೆ. ನಂತರ ಅವರು ಬೆಂಗಳೂರಿಗೆ ತೆರಳಿದ್ದು, ಅವರನ್ನು ಕಾಟನ್‌ಪೇಟೆ ಪೊಲೀಸರು ವಶಕ್ಕೆ ಪಡೆದುಕೊಂಡು, ವಿದ್ಯಾರ್ಥಿನಿಯರನ್ನು ಹಾಸ್ಟೆಲ್‌ಗೆ ಕರೆದೊಯ್ಯುವಂತೆ ಅಂದು ರಾತ್ರಿ 12.30ರ ವೇಳೆಯಲ್ಲಿ ಕರೆ ಮಾಡಿ ತಿಳಿಸಿದ್ದಾರೆ. ತಾವು ಮರು ದಿನ ಬೆಳಿಗ್ಗೆ 8 ಗಂಟೆ ಸುಮಾರಿಗೆ ಠಾಣೆಗೆ ಹೋದಾಗ ವಿದ್ಯಾರ್ಥಿನಿಯರನ್ನು ಮಠದ ಆಡಳಿತಾಧಿಕಾರಿ ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ಬೆಳಿಗ್ಗೆ 5 ಗಂಟೆಗೆ ಕರೆದೊಯ್ದಿರುವುದಾಗಿ ಪೊಲೀಸರು ತಮಗೆ ತಿಳಿಸಿದರು ಎಂದು ದೂರಿನಲ್ಲಿ ರಶ್ಮಿ ತಿಳಿಸಿದ್ದಾರೆ.

ಜುಲೈ 25ರಂದು ಬಾಲಕಿಯರನ್ನು ಕರೆತಂದ ಬಸವರಾಜನ್ ಮತ್ತು ಸೌಭಾಗ್ಯ, ಅವರನ್ನು ಹಾಸ್ಟೆಲ್‌ಗೂ ಕರೆತರದೇ, ಪೋಷಕರ ವಶಕ್ಕೂ ನೀಡದೇ, ಜುಲೈ 27ರ ಮಧ್ಯಾಹ್ನದವರೆಗೆ ತಮ್ಮ ವಶದಲ್ಲೇ ಇರಿಸಿಕೊಂಡಿದ್ದಾರೆ. ಅಲ್ಲದೇ ಮಠದ ಗೌರವಕ್ಕೆ ಧಕ್ಕೆ ತರಲು ತಮ್ಮ ಬೆಂಬಲಿಗರೊಂದಿಗೆ ಸೇರಿ ಒಳಸಂಚು ನಡೆಸಿ ವಿದ್ಯಾರ್ಥಿನಿಯರು ಮತ್ತು ಅವರ ಕುಟುಂಬದವರನ್ನು ಎತ್ತಿಕಟ್ಟುವ ಪ್ರಯತ್ನ ಮಾಡಿದ್ದಾರೆ. ಬಸವರಾಜನ್ ಅವರು ಪದೇ ಪದೇ ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಪೋಷಕರ ವಿಳಾಸವನ್ನು ಕೇಳುತ್ತಿದ್ದರು. ತಾವು ಅದನ್ನು ನೀಡಲು ನಿರಾಕರಿಸಿದ್ದಾಗಿ ದೂರಿನಲ್ಲಿ ತಿಳಿಸಿರುವ ರಶ್ಮಿ, ತಮ್ಮ ಜೊತೆ ಬಸವರಾಜನ್ ಅನುಚಿತವಾಗಿ ವರ್ತಿಸುತ್ತಿದ್ದರು, ಅಶ್ಲೀಲವಾಗಿ ಮಾತನಾಡುತ್ತಿದ್ದರು. ಜುಲೈ 27ರಂದು ವಿದ್ಯಾರ್ಥಿಗಳು ನಿಲಯದಲ್ಲಿ ಇಲ್ಲದಿರುವ ಸಮಯ ಸಂಜೆ ಸುಮಾರು 6 ಗಂಟೆ ವೇಳೆಯಲ್ಲಿ ಬಸವರಾಜನ್ ತನ್ನ ಮೇಲೆ ಅತ್ಯಾಚಾರವೆಸಗಲು ಪ್ರಯತ್ನಿಸಿದರು ಎಂದು ದೂರಿನಲ್ಲಿ ತಿಳಿಸಿರುವ ರಶ್ಮಿ, ತನ್ನ ಇಚ್ಛೆಗೆ ಒಪ್ಪದಿದ್ದರೆ ಮಾಜಿ ಶಾಸಕನಾಗಿರುವ ತಾನು ತನ್ನ ಪ್ರಭಾವವನ್ನು ಬಳಸಿ ಜೀವ ತೆಗೆಯುವುದಾಗಿ ಬೆದರಿಕೆ ಹಾಕಿದ್ದರು. ಇಚ್ಛೆಗೆ ಸಹಕರಿಸಿದರೆ ಉತ್ತಮ ಹುದ್ದೆ ನೀಡುವುದಾಗಿ ಆಮಿಷವೊಡ್ಡಿದ್ದರು ಎಂದು ರಶ್ಮಿ ಅವರು ಶುಕ್ರವಾರ ಸಂಜೆ 6 ಗಂಟೆಗೆ ನೀಡಿದ ದೂರನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ವಿದ್ಯಾರ್ಥಿಗಳು ಅಧ್ಯಯನದೊಂದಿಗೆ ಕೌಶಲ್ಯ ಮೈಗೂಡಿಸಿಕೊಂಡರೆ

ಭಾರತ ಪ್ರಧಾನಿ ಮೋದಿ ಕನಸಿನ 'ವಿಶ್ವಗುರು' ಆಗಲು ಸಾಧ್ಯ

● ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ ● ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ ಪ್ರದಾನ



ಮೈಸೂರು, ಆ.27(ಎಸ್‌ಪಿಎನ್)– ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಜೊತೆಗೆ ಉದ್ಯೋಗ ಕೌಶಲ್ಯವನ್ನು ಬೆಳೆಸಿಕೊಂಡಾಗ ಮಾತ್ರ ಭಾರತ ಜಗತ್ತಿನ ರಾಷ್ಟ್ರಗಳ ಮುಂದೆ 'ವಿಶ್ವಗುರು'ವಾಗಲು ಸಾಧ್ಯ ಎಂದು ಕುವೆಂಪು ವಿವಿ ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಮರಿಮಲ್ಲಪ್ಪ ವಿದ್ಯಾಸಂಸ್ಥೆ ವತಿಯಿಂದ ಶ್ರೀ 'ಗುರಿಕಾರ್ ಮರಿಮಲ್ಲಪ್ಪ'ನವರ ಸಂಸ್ಮರಣೋತ್ಸವ–2022 ಅಂಗವಾಗಿ ವಿಜ್ಞಾನ ವಿಭಾಗದಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ 'ಗುರಿಕಾರ್ ಸ್ವರ್ಣ ಪದಕ', ಮರಿಮಲ್ಲಪ್ಪನವರ ಧರ್ಮಪತ್ನಿ 'ಮಲ್ಲಮ್ಮ'ನವರ ಸ್ಮರಣಾರ್ಥ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ 'ಮಾತೃಶ್ರೀ ಸ್ವರ್ಣಪದಕ', ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷ 'ಕೆ.ಎಸ್.ಶಿವಲಿಂಗಯ್ಯ'ನವರ ಸ್ಮರಣಾರ್ಥ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ 'ಭಾಗ್ಯಶಿಲ್ಪಿ ಸ್ವರ್ಣ ಪದಕ' ವಿತರಿಸಿ, ಮಾತನಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಆ.15ರಂದು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿದ್ದೇವೆ. ಇಲ್ಲಿಯವರೆಗೆ ದೇಶ ನಡೆದು ಬಂದ ಹಾದಿ ಬಗ್ಗೆ ಮೆಲುಕು ಹಾಕಿದ್ದೇವೆ. ಅದರಂತೆ ಮುಂದಿನ 25 ವರ್ಷಗಳಲ್ಲಿ ಜಗತ್ತಿನ ಮುಂದುವರೆದ ರಾಷ್ಟ್ರಗಳ ಸಾಲಿನಲ್ಲಿ ಭಾರತವನ್ನು ನೋಡಬೇಕಾದರೆ, ಇಂದಿನ ಯುವ ಪೀಳಿಗೆ ಓದಿನ ಜೊತೆಗೆ ಕೌಶಲ್ಯ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಆಗ ಮಾತ್ರ ಪ್ರಧಾನಿ ನರೇಂದ್ರ ಮೋದಿಯವರ 'ವಿಶ್ವಗುರು' ಕನಸು ನನಸಾಗಿಸಲು ಸಾಧ್ಯ ಎಂದರು.

ಪ್ರಧಾನಿ ಮೋದಿಯವರು ಭಾರತದ ಎಕಾನಮಿಯನ್ನು ಐದು ಟ್ರಿಲಿಯನ್ ತಲುಪಿಸುವ ಗುರಿ ಹೊಂದಿದ್ದಾರೆ. ಈ ಮೂಲಕ ಶಿಕ್ಷಣದಲ್ಲಿ ಬದಲಾವಣೆ, ತಂತ್ರಜ್ಞಾನದಲ್ಲಿ ಬದಲಾವಣೆ, ಕೈಗಾರಿಕೆಯಲ್ಲಿ ಹಾಗೂ ನೈತಿಕ ಗುಣಮಟ್ಟದಲ್ಲಿ ಬದಲಾವಣೆ, ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ ಹಾಗೂ ಸಮ ಸಮಾಜ ಸೃಷ್ಟಿಗೂ ಒತ್ತು ನೀಡುತ್ತಿದ್ದಾರೆ. ಪ್ರಧಾನಿ ಮೋದಿಯವರ ಈ ಕನಸು ನನಸಾಗಬೇಕಾದರೆ, ನೀವು ಗುಣಮಟ್ಟದ ಶಿಕ್ಷಣ ಪಡೆದು, ಭಾರತ ಪ್ರಗತಿ ಹಾದಿಯ ಹೊಸಹೊಸ ಚಿಂತನೆಗಳಿಗೆ ತೆರೆದುಕೊಳ್ಳಬೇಕು. ಸುಮಾರು 140 ವರ್ಷದ ಹಿಂದೆ ಮರಿಮಲ್ಲಪ್ಪನವರು ಬಡ ಮಕ್ಕಳ ವ್ಯಾಸಂಗಕ್ಕಾಗಿ ವಿದ್ಯಾಸಂಸ್ಥೆ ಸ್ಥಾಪಿಸಿ, ಸಾವಿರಾರು ಮಕ್ಕಳಿಗೆ ಶಿಕ್ಷಣ ನೀಡಿ, ದಾರಿದೀಪವಾಗಿದ್ದಾರೆ ಎಂದರು.

ವಿದ್ಯಾಸಂಸ್ಥೆಯ ಸಂಸ್ಥಾಪಕ ಗುರಿಕಾರ್ ಮರಿಮಲ್ಲಪ್ಪನವರ ಸ್ಮರಣಾರ್ಥ 2019–20ನೇ ಸಾಲಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಲಿಖಿತ್ ಕುಮಾರ್ (600/583), ಕವನ ಸಿ.ರಾಜ್(600/583) ಹಾಗೂ 2020–21ನೇ ಸಾಲಿನ ವಿದ್ಯಾರ್ಥಿಗಳಾದ ಎಂ.ಮನೋಜ್ಞ (600/600), ನಿಸರ್ಗ ಎಸ್.ಗೌಡ(600/600), ಬಿ.ಎಸ್.ರಶ್ಮಿ(600/600), ಎಸ್.ಬಿ.ಸಕೇತ್ ಗುಪ್ತ (600/600), ಸೈಯದ್ ಮಾಜ್ ರಿಯಾನ್(600/600), ಅಪರ್ಣ ಆಚಾರ್ಯ(600/589)ಅವರಿಗೆ 'ಗುರಿಕಾರ್ ಸ್ವರ್ಣಪದಕ', ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಮರಿಮಲ್ಲಪ್ಪನವರ ಧರ್ಮಪತ್ನಿ ಮಲ್ಲಮ್ಮನವರ ಸ್ಮರಣಾರ್ಥ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾದ ಬಿ. ಸಮನ್ವಿತ(600/590), ಇಲಾ ಸಿ.ರಾವ್(600/596), ಕೆ.ಎಚ್.ಹಂಸಿಣಿ(600/596), ಟಿ.ಎಸ್.ಸಿಂಚನ (600/589) ಅವರಿಗೆ 'ಮಾತೃಶ್ರೀ ಸ್ವರ್ಣ ಪದಕ', ನಗದು ನೀಡಿ ಗೌರವಿಸಲಾಯಿತು. ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿದ್ದ ಕೆ.ಎಸ್.ಶಿವಲಿಂಗಯ್ಯರವರ ಸ್ಮರಣಾರ್ಥ ಕಲಾ ವಿಭಾಗದ ವಿದ್ಯಾರ್ಥಿಗಳಾದ ಬಿ.ಎಸ್.ಸ್ಪಂದನ(600/582), ಮುನಾಜ (600/592), ಜೆ.ಕನ್ನಿಕಾ(600/581) ಅವರಿಗೆ ಭಾಗ್ಯ ಶಿಲ್ಪಿ ಸ್ವರ್ಣ ಪದಕ ವಿತರಿಸಿ, ನಗದು ಬಹುಮಾನ ವಿತರಿಸಲಾಯಿತು. 2021–22ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ 256 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಈ ವೇಳೆ ಡಿಡಿಪಿಯು ಶ್ರೀನಿವಾಸ ಮೂರ್ತಿ, ಮರಿಮಲ್ಲಪ್ಪ ಪಿಯು ಕಾಲೇಜು ಪ್ರಾಂಶುಪಾಲ ಬಿ.ಆರ್.ನೀಲಕಂಠ, ಉಪಪ್ರಾಂಶುಪಾಲೆ ಎಂ.ಎಸ್.ವಿಜಯ, ಆಡಳಿತಾಧಿಕಾರಿ ಮಂಗಳಾ ಮುದ್ದುಮಾದಪ್ಪ, ಕನ್ನಡ ಉಪನ್ಯಾಸಕರಾದ ಕಿರಣ್ ಕುಮಾರ್, ಡಾ.ಎಸ್.ವಿಶ್ವನಾಥ್, ಹೇಮಂತ್ ನಾಯಕ್, ಎಂ.ಪ್ರಸಾದ್ ಉಪಸ್ಥಿತರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯರ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪ

ರಂಗಾಯಣ ನಿರ್ದೇಶಕರ ಕ್ಷಮೆ ಯಾಚನೆಗೆ ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಆಗ್ರಹ



ಮೈಸೂರು,ಆ.27(ಪಿಎಂ)– ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕುರಿತಂತೆ ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್, ಕ್ಷಮೆ ಯಾಚನೆಗೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬ್ರಿಗೇಡ್ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಕೊಡಗು ಭೇಟಿ ವೇಳೆ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ ಕುರಿತಂತೆ ಬಿಜೆಪಿಯ ಹಿರಿಯ ನಾಯಕರು ವಿಷಾದ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಪರಿಸ್ಥಿತಿ ತಿಳಿಯಾಗಿದೆ. ಆದರೆ ಅಡ್ಡಂಡ ಸಿ.ಕಾರ್ಯಪ್ಪ ಅವರು ಫೇಸ್‌ಬುಕ್‌ನಲ್ಲಿ ಪ್ರಚೋದನಾಕಾರಿ ಹೇಳಿಕೆ ನೀಡುತ್ತಿರುವುದು ಖಂಡನೀಯ. ಈ ಕೂಡಲೇ ಅವರು ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಅವರನ್ನು ಟಿಪ್ಪು ಸುಲ್ತಾನ್‌ಗೆ ಹೋಲಿಸಿ, ಟಿಪ್ಪು ಸುಲ್ತಾನ್ ಪುಕ್ಕಲು, ಅವರ ತಮ್ಮನಾದ ಸಿದ್ದರಾಮಯ್ಯ ಸಹ ಟಿಪ್ಪುವಿನ ತರಹದ ಪುಕ್ಕಲ. ಒಂದು ಮೊಟ್ಟೆಗೆ ಹೆದರಿ ಕೊಡಗಿಗೆ ಬರದೇ ಪಲಾಯನಗೈದಿದ್ದಾರೆ ಎಂದು ಹೇಳುವ ಮೂಲಕ ಶಾಂತಿ–ಸುವ್ಯವಸ್ಥೆಗೆ ಧಕ್ಕೆ ತರುವ ಕಾರ್ಯ ಮಾಡಿದ್ದಾರೆ ಎಂದು ದೂರಿದರು.

ಮೈಸೂರು ರಂಗಾಯಣ ರಾಜ್ಯದಲ್ಲೇ ಹೆಸರುವಾಸಿಯಾಗಿದೆ. ಇದರ ನಿರ್ದೇಶಕರಾಗಿ ಕೆಲಸ ಮಾಡಿದ ಅನೇಕರು ಅದರ ಘನತೆಯನ್ನು ಹೆಚ್ಚಿಸಿದ್ದಾರೆ. ಹೀಗಿರುವಾಗ ಅಡ್ಡಂಡ ಸಿ.ಕಾರ್ಯಪ್ಪ ರಾಜಕಾರಣಿ ರೀತಿ ವರ್ತಿಸುತ್ತಿದ್ದಾರೆ. ಇವರು ಕೂಡಲೇ ಕ್ಷಮೆ ಯಾಚಿಸಬೇಕು. ಇಲ್ಲದಿದ್ದಲ್ಲಿ ರಂಗಾಯಣದ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಬ್ರಿಗೇಡ್ ಉಪಾಧ್ಯಕ್ಷ ಜೆ.ಮಹದೇವ್, ಕಾರ್ಯದರ್ಶಿ ಮಾಕನಹುಂಡಿ ಶಿವು, ಕೆಪಿಸಿಸಿ ಕಾನೂನು ಘಟಕದ ಕಾರ್ಯದರ್ಶಿ ಕವಿತಾ ಕಾಳೆ ಗೋಷ್ಠಿಯಲ್ಲಿದ್ದರು.

ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಿಂದ ಇಲ್ಲಸಲ್ಲದ ಆರೋಪ

ಯುವ ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಹರ್ಷವರ್ಧನ್ ರಮೇಶ್ ಕಿಡಿನುಡಿ



ಮೈಸೂರು,ಆ.27(ಪಿಎಂ)– ಶಾಸಕ ಹೆಚ್.ಪಿ.ಮಂಜುನಾಥ್, ಕೆಪಿಸಿಸಿ ಮಹಿಳಾ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಹಾಗೂ ಇವರ ಪತಿ ಹೆಚ್.ಪಿ.ಅಮರನಾಥ್ ಬಗ್ಗೆ ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರು ಇಲ್ಲಸಲ್ಲದ ಆರೋಪ ಹಾಗೂ ಬಾಲಿಶ ಹೇಳಿಕೆಗಳನ್ನು ನೀಡಿದ್ದಾರೆ. ಆ ಮೂಲಕ ಹಿಟ್ ಅಂಡ್ ರನ್ ರೀತಿಯಲ್ಲಿ ಇವರು ವರ್ತಿಸಿದ್ದಾರೆ ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಹರ್ಷವರ್ಧನ್ ರಮೇಶ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಿನ್ನೆ ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ ನಮ್ಮ ನಾಯಕರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಇವರ ಮುಖಂಡರ ವಿರುದ್ಧ ಆರೋಪ ಮಾಡುವ ಬಗ್ಗೆ ನಾವು ದಾಖಲೆ ಸಹಿತ ಮಾತನಾಡುತ್ತೇವೆ. ಬೇಕಿದ್ದರೆ ಬಹಿರಂಗ ಚರ್ಚೆಗೆ ಬರಲಿ ಎಂದು ಆಹ್ವಾನ ನೀಡಿದರು.

ಕೋವಿಡ್ ಸಂದರ್ಭದಲ್ಲಿ ಹೆಚ್.ಪಿ.ಮಂಜುನಾಥ್ ಅವರು ಸೋಂಕಿನಿಂದ ಸಂಕಷ್ಟಕ್ಕೆ ಒಳಗಾದ ಜನತೆಗಾಗಿ ಕೆಲಸ ಮಾಡುವಾಗ ಮೂರು ಬಾರಿ ಅವರೂ ಸೋಂಕಿಗೆ ಒಳಗಾಗಿದ್ದರು. ಆ ಕಾರಣಕ್ಕಾಗಿ ಅವರು ಮೂರು ಬಾರಿ ಆಸ್ಪತ್ರೆ ಸೇರಬೇಕಾಯಿತು. ಆದರೆ, ಇವರು ಹೆಚ್.ಪಿ.ಮಂಜುನಾಥ್ ಪಬ್ ಸಂಸ್ಕೃತಿಯಿಂದ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ಬಾಲಿಶ ಹೇಳಿಕೆ ನೀಡಿದ್ದಾರೆ. ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಉಂಟಾಗುವ ನ್ಯೂನತೆ ಬಗ್ಗೆ ಟೀಕೆ–ಆರೋಪ ಮಾಡಲಿ. ಆದರೆ ಆಸ್ಪತ್ರೆಗೆ ದಾಖಲಾದ ವಿಚಾರ ಪ್ರಸ್ತಾಪಿಸುತ್ತಾರೆ ಎಂದರೆ ಇವರ ನೈತಿಕ ಮಟ್ಟ ಎಲ್ಲಿಗೆ ತಲುಪಿರಬೇಕು ಎಂದು ಕಿಡಿಕಾರಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಅವರು ಪ್ರತಾಪ್ ಸಿಂಹ ಅವರದು ಪಬ್ ಸಂಸ್ಕೃತಿ ಎಂದು ಆರೋಪ ಮಾಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಚರ್ಚೆ ಆಗುತ್ತಿರುವ ಆಧಾರದಲ್ಲಿ ಡಾ.ಪುಷ್ಪಾ ಅಮರನಾಥ್ ಈ ಆರೋಪ ಮಾಡಿದ್ದಾರೆ. ಇವರ ಪತಿ ಹೆಚ್.ಪಿ.ಅಮರನಾಥ್ ಗೋವಾದಲ್ಲಿ ಹೋಟೆಲ್ ಹೊಂದಿದ್ದ ಹಿನ್ನೆಲೆಯಲ್ಲಿ ಅದರ ವ್ಯವಹಾರಕ್ಕಾಗಿ ಅವರು ಆಗಾಗ್ಗೆ ಅಲ್ಲಿಗೆ ಪ್ರಯಾಣ ಬೆಳೆಸುತ್ತಿದ್ದರು. ಈಗ ಸದರಿ ಹೋಟೆಲ್ ಮಾರಾಟ ಮಾಡಿರುವ ಹಿನ್ನೆಲೆಯಲ್ಲಿ ಅವರು ಗೋವಾಗೆ ಹೋಗುತ್ತಿಲ್ಲ. ಆದರೆ ಅದನ್ನೇ ಇವರು ಬೇರೆ ಅರ್ಥದಲ್ಲಿ ಟೀಕಿಸಿದ್ದು, ಇದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಯುವ ಕಾಂಗ್ರೆಸ್ ಮೈಸೂರು ಗ್ರಾಮಾಂತರ ಕಾರ್ಯದರ್ಶಿಗಳಾದ ಅನುಕುಮಾರ್‌ಗೌಡ, ಬಿಳಿಕೆರೆ ಸ್ವಾಮಿ, ಗುಣಿನಾಯಕ್ ಗೋಷ್ಠಿಯಲ್ಲಿದ್ದರು.

ಪಕ್ಷದಲ್ಲಿ ಎಲ್ಲಾ ಸ್ಥಾನಮಾನ ಪಡೆದ 'ಆಜಾದ್' ಕಷ್ಟ ಕಾಲದಲ್ಲಿ 'ಕೈ' ಬಿಟ್ಟಿದ್ದು ತರವಲ್ಲ

ವಿಪಕ್ಷ ನಾಯಕ ಸಿದ್ದರಾಮಯ್ಯ ಅಸಮಾಧಾನ

ಬೆಂಗಳೂರು, ಆ.27 (ಕೆಎಂಶಿ)– ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಗುಲಾಂ ನಬೀ ಆಜಾದ್ ಅವರು ಪಕ್ಷಕ್ಕೆ ರಾಜೀನಾಮೆ ನೀಡಿರುವುದು ವಿಷಾದನೀಯ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸುಮಾರು ಐದು ದಶಕಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯರಾಗಿದ್ದ ಆಜಾದ್ ಅವರು ಪಕ್ಷವನ್ನು ಕಟ್ಟಿ ಬೆಳೆಸಲು ನೀಡಿರುವ ಕೊಡುಗೆಯನ್ನು ಸ್ಮರಿಸುತ್ತಲೇ, ಅವರ ಈ ದಿಢೀರ್ ನಿರ್ಧಾರವನ್ನು ಖಂಡಿಸಬೇಕಾಗಿ ಬಂದಿದೆ. ಇತ್ತೀಚಿನ ಚುನಾವಣೆಗಳಲ್ಲಿನ ಹಿನ್ನಡೆಯಿಂದಾಗಿ ಕಾಂಗ್ರೆಸ್ ಪಕ್ಷ ಕಷ್ಟದ ದಿನಗಳಲ್ಲಿದೆ. ಇದಕ್ಕಿಂತಲೂ ಮುಖ್ಯವಾಗಿ ಸರ್ವಾಧಿಕಾರಿ ಪ್ರಭುತ್ವದಿಂದಾಗಿ ದೇಶ ನಲುಗುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಗಂಡಾಂತರದಲ್ಲಿದೆ. ಇಂತಹ ಸಂದರ್ಭದಲ್ಲಿ ಅವರು ಪಕ್ಷ ತೊರೆದಿರುವುದು ಸರಿಯಲ್ಲ ಎಂದಿದ್ದಾರೆ.

ದೇಶಾದ್ಯಂತ ದಲಿತರು, ಹಿಂದುಳಿದ ಜಾತಿಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿಯಾಗಿಟ್ಟುಕೊಂಡು ಹಲ್ಲೆ–ದೌರ್ಜನ್ಯಗಳು ನಡೆಯುತ್ತಿವೆ. ಈ ಸಮುದಾಯಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಂಡು ಅವರನ್ನು ದುರ್ಬಲರನ್ನಾಗಿ ಮಾಡಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಗುಲಾಂ ನಬೀ ಆಜಾದ್ ಅವರಂತಹ ಅಪಾರ ಅನುಭವ ಮತ್ತು ಸಂಘಟನಾ ಸಾಮರ್ಥ್ಯ ಹೊಂದಿರುವ ನಾಯಕರ ಅಗತ್ಯ ಖಂಡಿತ ಪಕ್ಷಕ್ಕೆ ಮಾತ್ರವಲ್ಲ ದೇಶಕ್ಕೂ ಕೂಡಾ ಇದೆ ಎನ್ನುವುದನ್ನು ನಿರಾಕರಿಸಲಾಗದು

ಸುಮಾರು ಐದು ದಶಕಗಳ ಸುದೀರ್ಘ ರಾಜಕೀಯ ಜೀವನವನ್ನು ಕಾಂಗ್ರೆಸ್ ಪಕ್ಷದಲ್ಲಿ ಕಳೆದಿರುವ ಗುಲಾಂ ನಬೀ ಆಜಾದ್ ಅವರಿಗೆ ಕಾಂಗ್ರೆಸ್ ನೀಡಿರುವ ಕೊಡುಗೆ ಅಪಾರವಾದುದು, ಅದೇ ರೀತಿ ಕಾಂಗ್ರೆಸ್ ಪಕ್ಷಕ್ಕೂ ಅವರ ಕೊಡುಗೆಯನ್ನು ಅಲ್ಲಗಳೆಯಲಾಗದು ಎಂದಿದ್ದಾರೆ.

ಒಬ್ಬ ಸಾಮಾನ್ಯ ಕಾರ್ಯಕರ್ತ ಪಕ್ಷದಿಂದ ಬಯಸುವ ಎಲ್ಲ ಹುದ್ದೆ ಮತ್ತು ಅವಕಾಶಗಳನ್ನು ಆಜಾದ್ ಅವರು ಪಡೆದಿದ್ದಾರೆ. ಅವರಷ್ಟೇ ದೀರ್ಘಕಾಲ ಕಾಂಗ್ರೆಸ್ ಪಕ್ಷದಲ್ಲಿದ್ದರೂ ಕೂಡ ಇಷ್ಟೊಂದು ಅವಕಾಶಗಳನ್ನು ಮತ್ತೊಬ್ಬರು ಪಡೆದಿರುವುದು ಅಪರೂಪ.

ಕಾಂಗ್ರೆಸ್ ಪಕ್ಷ ಖಂಡಿತ ಈಗ ಕಷ್ಟದ ಕಾಲದಲ್ಲಿದೆ. ಪಕ್ಷದ ಒಳ್ಳೆಯ ದಿನಗಳಲ್ಲಿ ಅದರ ಜೊತೆ ಗುರುತಿಸಿಕೊಂಡು ಎಲ್ಲ ಅವಕಾಶಗಳನ್ನು ಪಡೆದ ಯಾವನೇ ವ್ಯಕ್ತಿ ಪಕ್ಷದ ಕಷ್ಟದ ಕಾಲದಲ್ಲಿ ಅದರ ಜೊತೆಗೆ ನಿಲ್ಲಬೇಕಾಗಿರುವುದು ಕರ್ತವ್ಯವಾಗಿದೆ. ಆದರೆ ಆಜಾದ್ ಅವರು ಪಕ್ಷದ ಕಷ್ಟದ ಕಾಲದಲ್ಲಿಯೇ ಕುಂಟುನೆಪಗಳನ್ನು ಮುಂದಿಟ್ಟು ಪಕ್ಷವನ್ನು ತ್ಯಜಿಸಿ ಹೋಗಿರುವುದು ಅತ್ಯಂತ ದುರದೃಷ್ಟಕರ ಬೆಳವಣಿಗೆ.

ರಾಹುಲ್ ಗಾಂಧಿಯವರು ತಾವು ಸಚಿವರಾಗದೆ, ಹಿರಿಯರಾದ ಗುಲಾಂ ನಬಿ ಆಜಾದ್ ಅವರಂತಹವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದರು. ಈಗ ಇದೇ ಆಜಾದ್ ಅವರು ರಾಹುಲ್ ಗಾಂಧಿಯವರ ಮೇಲೆ ವೈಯಕ್ತಿಕ ಮಟ್ಟದ ದಾಳಿಗಿಳಿದಿರುವುದು ಖಂಡನೀಯ ಎಂದರು. ಒಬ್ಬ ವ್ಯಕ್ತಿಯ ನಿರ್ಗಮನದಿಂದ ವಿಚಲಿತರಾಗದೆ ದೇಶ ಉಳಿಸುವ ಕರ್ತವ್ಯವನ್ನು ನಾವೆಲ್ಲರೂ ಜವಾಬ್ದಾರಿಯಿಂದ, ಸಂಘಟಿತರಾಗಿ ನಿಭಾಯಿಸಲು ಕಾಂಗ್ರೆಸ್ ಪಕ್ಷದ ಎಲ್ಲ ನಾಯಕರು ಮತ್ತು ಕಾರ್ಯಕರ್ತರು ಕಟಿಬದ್ಧರಾಗಬೇಕೆಂದು ಮನವಿ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

ಏಷ್ಯಾಕಪ್: ಅಫ್ಘಾನಿಸ್ತಾನಕ್ಕೆ ಶುಭಾರಂಭ

ದುಬೈ, ಆ.27– ಫಜಲ್ ಹಕ್ ಫಾರೂಕಿ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಶ್ರೀಲಂಕಾ ವಿರುದ್ಧ ಅಫ್ಘಾನಿಸ್ತಾನ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಇಲ್ಲಿನ ದುಬೈ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 19.4 ಓವರ್‌ಗಳಲ್ಲಿ ಕೇವಲ 105ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಭಾನುಕ ರಾಜಪಕ್ಸೆ 38, ಚಮಿಕಾ ಕರುಣರತ್ನೆ 31, ಧನುಷ್ಕ ಗುಣತಿಲಕ 17ರನ್ ಗಳಿಸಿದರು. ಅಫ್ಘಾನ್ ಪರ ಫಜಲ್ ಹಕ್ ಫಾರೂಕಿ 3, ಮುಜೀಬ್ ಉರ್ ರೆಹಮಾನ್, ಮಹಮ್ಮದ್ ನಬೀ ತಲಾ 2, ನವೀನ್ ಉಲ್ ಹಕ್ 1 ವಿಕೆಟ್ ಪಡೆದರು. 106ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ ಕೇವಲ 10.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ ಗುರಿ ತಲುಪಿತ್ತು. ತಂಡ ಪರ ಹಜರತುಲ್ಲಾ ಝುಝೈ 37, ರಹಮಾನುಲ್ಲಾ ಗುರ್ಬಾಜ್ 40, ಇಬ್ರಾಹಿಂ ಜೋರ್ಡಾನ್ 15ರನ್ ಗಳಿಸಿದರು. ಲಂಕಾ ಪರ ವಾನಿಂದು ಹಸರಂಗ ಒಂದು ವಿಕೆಟ್ ಪಡೆದರು. ಫಜಲ್ ಹಕ್ ಫಾರೂಕಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಟ್ರಸ್ಟ್ ಕಾರ್ಯದರ್ಶಿಯಿಂದ ಅಕ್ರಮ ; ಫೆಡರೇಷನ್ ಆಫ್ ಮೈಸೂರು ಮುಸ್ಲಿಂ ಆರ್ಗನೈಜೇಷನ್ಸ್ ಆರೋಪ

ರಿಫಾ–ಉಲ್–ಮುಸ್ಲೀಮಿನ್ ಎಜುಕೇಷನಲ್ ಟ್ರಸ್ಟ್‌ಗೆ ಆಡಳಿತಾಧಿಕಾರಿ ನೇಮಿಸಲು ಆಗ್ರಹ

ಮೈಸೂರು,ಆ.27(ಪಿಎಂ)– ರಿಫಾ–ಉಲ್–ಮುಸ್ಲೀಮಿನ್ ಎಜುಕೇಷನಲ್ ಟ್ರಸ್ಟ್ ಅನ್ನು ತಮ್ಮ ವೈಯಕ್ತಿಕ ಆಸ್ತಿ ಎಂಬಂತೆ ದುರ್ಬಳಕೆ ಮಾಡಿಕೊಂಡು ಟ್ರಸ್ಟ್‌ನ ಕಾರ್ಯದರ್ಶಿ ತಾಜ್ ಮೊಹಮ್ಮದ್ ಖಾನ್ ಅಕ್ರಮಗಳನ್ನು ಎಸಗಿದ್ದಾರೆ. ಆ ಮೂಲಕ ಟ್ರಸ್ಟ್‌ನ ಶಿಕ್ಷಣ ಸಂಸ್ಥೆಗಳನ್ನು ಕ್ರಮೇಣವಾಗಿ ಮುಚ್ಚುವ ಹಂತಕ್ಕೆ ತಂದು ನಿಲ್ಲಿಸಿದ್ದಾರೆ. ಹಾಗಾಗಿ ಟ್ರಸ್ಟ್‌ಗೆ ಆಡಳಿತಾಧಿಕಾರಿ ನೇಮಿಸಿ, ತನಿಖೆಗೆ ಆದೇಶಿಸಬೇಕೆಂದು ಫೆಡರೇಷನ್ ಆಫ್ ಮೈಸೂರು ಮುಸ್ಲಿಂ ಆರ್ಗನೈಜೇಷನ್ಸ್, ಸರ್ಕಾರವನ್ನು ಆಗ್ರಹಿಸಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಫೆಡರೇಷನ್ ಸದಸ್ಯ ಎಂ.ಖಲೀಂ ಅಹಮ್ಮದ್, ರಿಫಾ–ಉಲ್–ಮುಸ್ಲೀಮೀನ್ ಎಜುಕೇಷನಲ್ ಸೊಸೈಟಿಯನ್ನು 1985ರಲ್ಲಿ ರಿಫಾ–ಉಲ್–ಮುಸ್ಲೀಮಿನ್ ಎಜುಕೇಷನಲ್ ಟ್ರಸ್ಟ್ ಆಗಿ ಬದಲಾಯಿಸಲಾಯಿತು. ಈ ಟ್ರಸ್ಟ್ ಅಧೀನದಲ್ಲಿ ಫಾರೂಖಿಯಾ ಹೆಸರಿನಲ್ಲಿ ಹಲವು ಸಂಸ್ಥೆಗಳು ನಡೆಯುತ್ತಿವೆ. ಸಮುದಾಯದ ಶಿಕ್ಷಣಕ್ಕೆ ನೀಡುವ ಸಲುವಾಗಿ ಸಮುದಾಯದ ಹಿರಿಯರ ದುಡಿಮೆಯ ಫಲ ಈ ಟ್ರಸ್ಟ್, ಆದರೆ ಟ್ರಸ್ಟ್ ಕಾರ್ಯದರ್ಶಿಗಳು ಅವ್ಯವಹಾರ ನಡೆಸುವ ಮೂಲಕ ಟ್ರಸ್ಟ್‌ನ ಶಿಕ್ಷಣ ಸಂಸ್ಥೆಗಳನ್ನು ಮುಳುಗಿಸಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಕಾರ್ಯದರ್ಶಿ ತಾಜ್ ಮೊಹಮ್ಮದ್ ಖಾನ್ ಸರ್ವಾಧಿಕಾರಿ ಧೋರಣೆ ಅನುಸರಿಸುವ ಮೂಲಕ ಟ್ರಸ್ಟ್ ಅನ್ನು ತಮ್ಮ ವೈಯಕ್ತಿಕ ಆಸ್ತಿಯಂತೆ ಮಾಡಿಕೊಂಡಿದ್ದಾರೆ. ಅಪಾರ ಅವ್ಯವಹಾರ ನಡೆಸಿ ಟ್ರಸ್ಟ್‌ನ ಆಸ್ತಿಯನ್ನು ಕಾನೂನುಬಾಹಿರವಾಗಿ ಬ್ಯಾಂಕ್‌ಗಳಲ್ಲಿ ಅಡವಿಟ್ಟಿದ್ದಾರೆ. ತಿಲಕನಗರದ ಈದ್ಗಾ ಮೈದಾನ ವಕ್ಫ್‌ಗೆ ಸೇರಿದ್ದು, ಇಲ್ಲಿ ಟ್ರಸ್ಟ್‌ನ ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ದುರಂತವೆಂದರೆ ವಕ್ಫ್‌ಗೆ ಸೇರಿದ ಈ ಜಾಗವನ್ನು ಅಡವಿಟ್ಟು ಬ್ಯಾಂಕಿನಲ್ಲಿ ಸಾಲ ಪಡೆಯಲಾಗಿದೆ. ವಕ್ಫ್‌ಗೆ ಸೇರಿದ ಜಾಗವನ್ನು, ಭದ್ರತೆ ಪಡೆದು ಬ್ಯಾಂಕಿನ ಅಧಿಕಾರಿಗಳು ಸಾಲ ನೀಡಿದ್ದು ಹೇಗೆ? ಎಂಬುದು ಅಚ್ಚರಿಯಾಗಿದೆ. ಇಲ್ಲಿ ಬ್ಯಾಂಕ್ ಅಧಿಕಾರಿಗಳು ಶಾಮೀಲಾಗಿರುವ ಶಂಕೆ ಇದೆ ಎಂದು ಸಂದೇಹ ವ್ಯಕ್ತಪಡಿಸಿದರು.

ಇದೇ ಟ್ರಸ್ಟ್‌ನ ಸಿಎ ನಿವೇಶನ ಉದಯಗಿರಿಯಲ್ಲಿದ್ದು, ಜೊತೆಗೆ 4 ಎಕರೆ ಜಮೀನು ಬೆಲವತ್ತ ಗ್ರಾಮದಲ್ಲಿದೆ. ಇವುಗಳನ್ನು ಬ್ಯಾಂಕ್ ಸಾಲಕ್ಕಾಗಿ ಭದ್ರತೆಗೆ ನೀಡಲಾಗಿದೆ. ಆದರೆ ಸಿಎ ನಿವೇಶನವನ್ನು ಅಡವಿಡಲು ಅವಕಾಶವಿಲ್ಲ. ಅಲ್ಲದೆ, ಸದರಿ 4 ಎಕರೆ ಜಮೀನನ್ನು ಕಾರ್ಯದರ್ಶಿ ತಾಜ್ ಮೊಹಮ್ಮದ್ ಖಾನ್ ತನ್ನ ಮಗನಿಗೆ ಗಿಫ್ಟ್ ಡೀಡ್ ಮೂಲಕ ವರ್ಗಾಯಿಸಿ ಅಲ್ಲಿ ಲೇಔಟ್ ನಿರ್ಮಿಸಿ 200 ನಿವೇಶನಗಳನ್ನು ಅಕ್ರಮವಾಗಿ ಮುಗ್ಧ ಜನರಿಗೆ ಮಾರಾಟ ಮಾಡಿದ್ದಾರೆ. ಜೊತೆಗೆ ಇದೇ ಜಮೀನನ್ನು ಬ್ಯಾಂಕಿನ ಸಾಲಕ್ಕೆ ಭದ್ರತೆ ನೀಡಿದ್ದಾರೆ ಎಂದು ದೂರಿದರು.

ಅಲ್ಲದೆ, ಟ್ರಸ್ಟ್‌ನ ಸಿಎ ನಿವೇಶನದ ಕಟ್ಟಡದಲ್ಲಿ ಕಾರ್ಯದರ್ಶಿ ತಾಜ್ ಮೊಹಮ್ಮದ್ ಖಾನ್ ತಮ್ಮ ಮಗನಿಗೆ ಸೇರಿದ ಟ್ಯಾಗೂರ್ ಪ್ರಾಥಮಿಕ ಶಾಲೆಯನ್ನು ಅಕ್ರಮವಾಗಿ ನಡೆಸುತ್ತಿದ್ದಾರೆ. ತಾಜ್ ಮೊಹಮ್ಮದ್ ಖಾನ್ ಮತ್ತು ಅವರ ಕುಟುಂಬದವರಿಗೆ ಸೇರಿದ ಆಸ್ತಿಯ ಬಗ್ಗೆ ತನಿಖೆ ನಡೆಸಬೇಕು. ಇವರು ಒಂದು ಕಡೆ ಶ್ರೀಮಂತರಾಗುತ್ತಿದ್ದರೆ, ಇನ್ನೊಂದು ಕಡೆ ಆರ್ಥಿಕವಾಗಿ ಸದೃಢವಾಗಿದ್ದ ಟ್ರಸ್ಟ್ ಅಧೋಗತಿಗೆ ತಲುಪುತ್ತಿದೆ. ಇವರ ಆಸ್ತಿ ಸಂಬಂಧ ತನಿಖೆ ನಡೆಸಿದರೆ ಟ್ರಸ್ಟ್‌ನ ಆರ್ಥಿಕ ದುರ್ಗತಿಗೆ ಕಾರಣ ತಿಳಿಯಲಿದೆ. ಈ ಸಂಬಂಧ ತನಿಖೆ ನಡೆಸಲು ಕೋರಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಆಮ್ ಆದ್ಮಿ ಪಕ್ಷದ ಮುಖಂಡ ಶಾಹಿದ್ ರೆಹಮಾನ್, ವಕೀಲ ಮುದಸಾರ್ ಅಲೀಖಾನ್, ಮುಖಂಡ ಅಜಿಜುಲ್ಲಾ (ಅಜ್ಜು), ಜೆಡಿಎಸ್ ಮುಖಂಡ ಅಬ್ದುಲ್ ಶಾಹಿದ್ ಖಾದರ್ ಗೋಷ್ಠಿಯಲ್ಲಿದ್ದರು.

ಆರೋಪವೆಲ್ಲವೂ ಶುದ್ಧ ಸುಳ್ಳು ; ತಾಜ್ ಮೊಹಮ್ಮದ್ ಖಾನ್

ಮೈಸೂರು,ಆ.27(ಪಿಎಂ)– ಫೆಡರೇಷನ್ ಆಫ್ ಮೈಸೂರು ಮುಸ್ಲೀಂ ಆರ್ಗನೈಜೇಷನ್ಸ್ ಮುಖಂಡರು ತಮ್ಮ ವಿರುದ್ಧ ಮಾಡಿರುವ ಎಲ್ಲಾ ಆರೋಪವೂ ಶುದ್ಧ ಸುಳ್ಳು ಎಂದು ರಿಫಾ–ಉಲ್–ಮುಸ್ಲೀಮಿನ್ ಎಜುಕೇಷನಲ್ ಟ್ರಸ್ಟ್‌ನ ಕಾರ್ಯದರ್ಶಿ ತಾಜ್ ಮೊಹಮ್ಮದ್ ಖಾನ್ ತಿಳಿಸಿದರು.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಇವರು ಯಾರು? ಇವರು ಸಮುದಾಯಕ್ಕೆ ಮಾಡಿರುವ ಸೇವೆ ಏನು? ಹೇಳಲಿ. ಜೊತೆಗೆ ಇವರ ಸಂಘಟನೆ ಅಧಿಕೃತವಾಗಿ ನೋಂದಣಿ ಆಗಿದೆಯೇ? ಇವರ ಹಿನ್ನೆಲೆಯೇನು? ಎಂದು ಪ್ರಶ್ನಿಸಿದ ಅವರು, ಇವರ ಆರೋಪಗಳ ಹಿಂದೆ ಏನೋ ದುರುದ್ದೇಶವಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಫಾರೂಖಿಯಾ ಶಿಕ್ಷಣ ಸಂಸ್ಥೆಗಳಿಂದ ಸಾವಿರಾರು ಮಂದಿ ವಿದ್ಯಾವಂತರಾಗಿದ್ದಾರೆ. ಅದರಲ್ಲಿ ವೈದ್ಯರು ಸೇರಿದಂತೆ ಹಲವು ಪದವಿಗಳನ್ನು ಸಾಕಷ್ಟು ಮಂದಿ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಫಾರೂಖಿಯಾ ಶಿಕ್ಷಣ ಸಂಸ್ಥೆಗಳ ಕೊಡುಗೆ ಏನೆಂದು ಇಡೀ ಸಮಾಜಕ್ಕೆ ಗೊತ್ತಿದೆ ಎಂದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಪ್ರತಿಮ ದೇಶಭಕ್ತ ವೀರ ಸಾವರ್ಕರ್

ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ



ತಿ.ನರಸೀಪುರ, ಆ.27– ವೀರ ಸಾವರ್ಕರ್ ಮಹಾನ್ ಕ್ರಾಂತಿಕಾರಿ, ಅಪ್ರತಿಮ ದೇಶಭಕ್ತ ಮತ್ತು ಶ್ರೇಷ್ಠ ಸಂಘಟಕ. ತಮ್ಮ ಜೀವನದುದ್ದಕ್ಕೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಸಾಹಸಿ ಎಂದು ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ ತಿಳಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ವೀರ ಸಾವರ್ಕರ್ ರಥಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಅಷ್ಟು ದೇಶಪ್ರೇಮಿಯಾಗಿದ್ದ ಸಾವರ್ಕರ್ ಬ್ರಿಟಿಷರಿಗೆ ಸಿಂಹಸ್ವಪ್ನರಾಗಿದ್ದರು. ಇವರ ಕೆಚ್ಚೆದೆಯ ಹೋರಾಟದ ಫಲವಾಗಿ ಅವರನ್ನು 50 ವರ್ಷಗಳ ಕಾಲ ಬಂಧನಕ್ಕೊಳಪಡಿಸಲಾಯಿತು. ವೀರ ಸಾವರ್ಕರ್ ದೇಶಪ್ರೇಮಕ್ಕೆ ಸಾಕ್ಷಿಯಾಗಿ ಲಂಡನ್‌ನಲ್ಲಿ ಅವರ ಹೆಸರಿನ ಸೂಚನಾ ಫಲಕವನ್ನು ಚಿನ್ನದ ಲೇಪನದಲ್ಲಿ ಹಾಕಲಾಗಿತ್ತು. ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಸಹ ಇವರ ದೇಶಪ್ರೇಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅವರ ಅಂಚೆ ಚೀಟಿ ಬಿಡುಗಡೆ ಮಾಡಿದ್ದರೆಂದರೆ ಕಾಂಗ್ರೆಸ್ಸಿಗರು ಇವರ ದೇಶಪ್ರೇಮ, ರಾಷ್ಟ್ರಭಕ್ತಿ ಬಗ್ಗೆ ತಿಳಿಯಬೇಕು ಎಂದರು.

ವೀರ ಸಾವರ್ಕರ್ 20ನೇ ಶತಮಾನದ ಅತಿದೊಡ್ಡ ಹಿಂದೂವಾದಿ ನಾಯಕರು. ಅವರು ಹಿಂದೂ ಪದದೊಂದಿಗೆ ಆಳವಾದ ಬಾಂಧವ್ಯ ಹೊಂದಿದ್ದರು. ನಿಜವಾಗಿಯೂ ಅವರು ಭಾರತ ಸ್ವಾತಂತ್ರ್ಯ ಹೋರಾಟದ ಮಹಾನ್ ಯೋಧ ಅವರೇ ಸೈನಿಕ ಹಾಗೂ ಕಮಾಂಡರ್ ಆಗಿದ್ದರು. ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ಮಾತ್ರವಲ್ಲ, ಜಗತ್ತಿನ ಯಾವುದೇ ದೇಶದ ಸ್ವಾತಂತ್ರ್ಯದ ಇತಿಹಾಸದಲ್ಲಿ ಅವರಂತಹ ಸ್ವಾತಂತ್ರ್ಯ ಹೋರಾಟಗಾರರು ಸಿಗುವುದು ವಿರಳ ಎಂದರು.

ವೀರ ಸಾವರ್ಕರ್ ಇತಿಹಾಸ ತಿಳಿದುಕೊಳ್ಳದೇ ಅವರನ್ನು ದೇಶಭಕ್ತರೇ ಎಂದು ಹೀಯಾಳಿಸುತ್ತಿರುವ ನಿಮಗೆ ಅವರ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಕಾಂಗ್ರೆಸ್ಸಿಗರ ವಿರುದ್ಧ ಕಿಡಿಕಾರಿದರು.

ಕಾಂಗ್ರೆಸ್ಸಿಗರು ಅವರ ಬಗ್ಗೆ ಎಷ್ಟೇ ಅಪಪ್ರಚಾರ ಮಾಡಿದರೂ, ಸಾವರ್ಕರ್ ಅವರು ಅಜರಾಮರ. ಅವರ ರಾಷ್ಟ್ರಪ್ರೇಮದ ಬಗ್ಗೆ ಯಾರೂ ಪ್ರಶ್ನೆ ಮಾಡುವಂತಿಲ್ಲ. ಪ್ರತಿಯೊಂದು ಹಳ್ಳಿಗಳಿಗೂ ರಥಯಾತ್ರೆ ತಲುಪಲಿದ್ದು, ಜನಸಾಮಾನ್ಯರಿಗೆ ಅವರ ವಿಚಾರಧಾರೆ ಮುಟ್ಟಿಸುವ ಕೆಲಸ ನಡೆಯುತ್ತದೆ ಎಂದರು.

ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸದಾನಂದ, ಜಿಪಂ ಮಾಜಿ ಅಧ್ಯಕ್ಷ ಸಿದ್ದವೀರಪ್ಪ, ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಎನ್.ಲೋಕೇಶ್, ರಾಜ್ಯ ಕಾರ್ಯಕಾರಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಪಿಎಸಿಸಿ ಅಧ್ಯಕ್ಷ ವೀರಭದ್ರಪ್ಪ, ಮಾಜಿ ಅಧ್ಯಕ್ಷ ನಟರಾಜು, ಪ್ರಕೋಷ್ಠ ಸುರೇಶ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ಆಶ್ರಯ ಸಮಿತಿ ಸದಸ್ಯೆ ಲಕ್ಷ್ಮಿ, ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣ ಶೆಟ್ಟಿ, ಯುವ ಮೋರ್ಚಾ ಕಾರ್ಯದರ್ಶಿ ನಂದನ್ ಕುಮಾರ್, ರಂಗೂ ನಾಯಕ, ಕೆಡಿಪಿ ಸದಸ್ಯ ಮಿಥುನ್, ಗಣೇಶ್, ದೀಪು, ಮಹದೇವ, ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಚೌಹಳ್ಳಿ ಸಿದ್ದರಾಜು. ವಾಟಾಳ್ ಮಹದೇವಪ್ಪ, ಶಿವಪ್ರಸಾದ್, ಮೋಹನ್, ತಿರುಮಕೂಡಲು ವಾಸು ಮತ್ತಿತರರಿದ್ದರು.

ಮಹದೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ



ಹೆಚ್.ಡಿ.ಕೋಟೆ, ಆ.27– ಅಮಾವಾಸ್ಯೆ ಅಂಗವಾಗಿ ಶನಿವಾರ ತಾಲೂಕಿನ ಅಂತರಸಂತೆ ಗ್ರಾಮದ ಮಹದೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಿತು. ಈ ವೇಳೆ ಸಾವಿರಾರು ಭಕ್ತರು ಮಹದೇಶ್ವರನ ದರ್ಶನ ಪಡೆದು ಪುನೀತರಾದರು.

ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಿದ್ದರು. ಇದೇ ವೇಳೆ ದೇವಸ್ಥಾನ ಸಮಿತಿಯಿಂದ ಡಾ.ಕೃಷ್ಣಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಅರ್ಚಕರಾದ ರಮೇಶ್, ದೇವಸ್ಥಾನ ಸಮಿತಿ ಅಧ್ಯಕ್ಷ ವಿ.ರಾಜಪ್ಪ, ಉಪಾಧ್ಯಕ್ಷ ವೇದಮೂರ್ತಿ, ದೇವಸ್ಥಾನ ಸಮಿತಿ ಸಂಚಾಲಕ ಕೃಷ್ಣ, ಅಂತರಸಂತೆ ಶಕ್ತಿ ಕೇಂದ್ರದ ಅಧ್ಯಕ್ಷ ಮಹದೇವಪ್ಪ, ತಾಲೂಕು ವೀರಶೈವ ಯುವ ಘಟಕದ ಅಧ್ಯಕ್ಷ ಅಭಿ, ಉಪಾಧ್ಯಕ್ಷ ಸೋಮಶೇಖರ್, ತಾಲೂಕು ರೈತ ಮೋರ್ಚಾ ಉಪಾಧ್ಯಕ್ಷ ಮಂಜುನಾಥ್, ಕುಮಾರ್, ತಾಲೂಕು ಬಿಜೆಪಿ ಉಪಾಧ್ಯಕ್ಷ ಸುಬ್ರಹ್ಮಣ್ಯ, ಮುಖಂಡರಾದ ಶಿವಕುಮಾರ್, ಹನುಮಂತ ನಾಯಕ, ಜಿಲ್ಲಾ ಸಾಮಾಜಿಕ ಜಾಲತಾಣಗಳ ಸಂಚಾಲಕ ರಾಜೇಶ್ ಹಾಜರಿದ್ದರು.

ಕಾಂಗ್ರೆಸ್ ಯಾರ ಪಿತ್ರಾರ್ಜಿತ ಆಸ್ತಿಯೂ ಅಲ್ಲ: ಹೆಚ್‌ಸಿಎಂ



ನಂಜನಗೂಡು, ಆ.27– ಕಾಂಗ್ರೆಸ್ ಪಕ್ಷ ಯಾರ ಪಿತ್ರಾರ್ಜಿತ ಆಸ್ತಿಯೂ ಅಲ್ಲ. ಪಕ್ಷ ಕಾರ್ಯಕರ್ತರಿಗೆ ಸೇರಿದ್ದು, ಇಲ್ಲಿ ನಾನೇ ಹೆಚ್ಚು ಎಂದು ಯಾರೂ ಹೇಳಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯ ತಮ್ಮ ನಿವಾಸದಲ್ಲಿ ಬೆಂಬಲಿಗರ ಸಭೆ ನಡೆಸಿ ಮಾತನಾಡಿದ ಅವರು, ನಾನು ಸಚಿವನಾಗಿದ್ದಾಗ ಕ್ಷೇತ್ರಕ್ಕೆ ಎಷ್ಟು ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ ಎಂದು ಕಾರ್ಯಕರ್ತರಿಗೆ ಚೆನ್ನಾಗಿ ಗೊತ್ತಿದೆ. ಆದರೆ ನನ್ನಿಂದ ಉಪಕಾರ ಪಡೆದವರೇ ನನ್ನನ್ನು ಮರೆತು ಪ್ರತಿಯೊಂದರಲ್ಲೂ ತಾರತಮ್ಯ ಮಾಡುತ್ತಿದ್ದಾರೆ. ಇದಕ್ಕೆ ಮುಂದಿನ ದಿನದಲ್ಲಿ ಉತ್ತರಿಸುತ್ತೇನೆ ಎಂದು ಪರೋಕ್ಷವಾಗಿ ಮಾಜಿ ಶಾಸಕರ ನಡೆಯನ್ನು ಟೀಕಿಸಿದರು.

ಚುನಾವಣೆಗೆ ಇನ್ನು 7 ರಿಂದ 8 ತಿಂಗಳಿದ್ದು, ಪಕ್ಷ ಸಂಘಟನೆಗೆ ಎಲ್ಲರೂ ಶ್ರಮಿಸಬೇಕು. ಬಿಜೆಪಿ ಸರ್ಕಾರದ ದುರಾಡಳಿತದ ಬಗ್ಗೆ ಕಾರ್ಯಕರ್ತರು ಪ್ರತಿಯೊಬ್ಬ ಮತದಾರರಿಗೂ ತಿಳಿಸಬೇಕು ಎಂದರು.

ಇದೇ ವೇಳೆ ಅಭಿಮಾನಿಗಳು ಇತ್ತೀಚೆಗೆ ನಡೆದ ಕಾಂಗ್ರೆಸ್ ಪಾದಯಾತ್ರೆಯಲ್ಲಿ ಯಾವ ಫ್ಲೆಕ್ಸ್‌ಗಳಲ್ಲೂ ನಿಮ್ಮ ಭಾವಚಿತ್ರ ಇರಲಿಲ್ಲ. ಕ್ಷೇತ್ರದಲ್ಲಿ ನಮ್ಮನ್ನು ಕಡೆಗಣಿಸಲಾಗುತ್ತಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಹದೇವಪ್ಪ, ಟಿಕೆಟ್ ನೀಡುವುದು ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು, ಆದರೆ ಪಕ್ಷವನ್ನು ಅಧಿಕಾರಕ್ಕೆ ತರಲು ಒಗ್ಗಟ್ಟಿನಿಂದ ಶ್ರಮಿಸೋಣ ಎಂದರು.

ಈ ವೇಳೆ ಮುಖಂಡ ಬುಲೆಟ್ ಮಹದೇವಪ್ಪ ಇಂಧನಬಾಬು, ಕೆಬಿ.ಸ್ವಾಮಿ, ಶ್ರೀನಿವಾಸ್, ಸಿದ್ದಲಿಂಗಪ್ಪ ಕೃಷ್ಣ ಸೇರಿದಂತೆ ಇತರರಿದ್ದರು.

ಟ್ರ್ಯಾಕ್ಟರ್ ಪಲ್ಟಿ: ಇಬ್ಬರು ಸ್ಥಳದಲ್ಲೇ ಸಾವು





ಹುಣಸೂರು, ಆ.27– ಟ್ರ್ಯಾಕ್ಟರ್ ಪಲ್ಟಿಯಾಗಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಗಾವಡಗೆರೆ ಹೋಬಳಿ ಜಾಬಗೆರೆ ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ನಿವಾಸಿ ಜಲೇಂದ್ರ(40) ಹಾಗೂ ಇವರ ಚಿಕ್ಕಪ್ಪನ ಮಗ ಚೇತನ್ (22) ಮೃತಪಟ್ಟ ದುರ್ದೈವಿಗಳು.

ವಿವರ: ಶನಿವಾರ ಮಧ್ಯಾಹ್ನ 3 ಗಂಟೆ ವೇಳೆ ಜಮೀನು ಉಳುಮೆ ಮಾಡಲು ತಮ್ಮ ಟ್ರ್ಯಾಕ್ಟರ್‌ನಲ್ಲಿ ಹಾರಂಗಿ ನಾಲೆ ಏರಿ ಮೇಲೆ ಜಲೇಂದ್ರ ಚೇತನ್ ಹಾಗೂ ಗಿರೀಶ್ ಎಂಬುವವರು ತೆರಳುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ ಪಲ್ಟಿಯಾಗಿದೆ. ಈ ವೇಳೆ ಗಿರೀಶ್ ಟ್ರ್ಯಾಕ್ಟರ್‌ನಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದರೆ, ಟ್ರ್ಯಾಕ್ಟರ್‌ನ ಇಂಜಿನ್ ಮತ್ತು ಸ್ಟೇರಿಂಗ್ ಜಲೇಂದ್ರ ಹಾಗೂ ಚೇತನ್ ಎದೆ ಮೇಲೆ ಬಿದ್ದಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗ್ರಾಮಸ್ಥರು, ಟ್ರ್ಯಾಕ್ಟರ್ ಮೇಲೆತ್ತಲು ಯತ್ನಿಸಿದ ವೇಳೆ ಡೀಸೆಲ್ ಹೊರಚೆಲ್ಲಿ ಬೆಂಕಿ ಹತ್ತಿಕೊಂಡು ಟ್ರ್ಯಾಕ್ಟರ್ ಬಹುತೇಕ ಸುಟ್ಟು ಹೋಗಿದೆ.

ಘಟನಾ ಸ್ಥಳಕ್ಕೆ ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ, ಎಸ್.ಐ.ಜಮೀರ್ ಅಹಮದ್ ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಿಷಯ ತಿಳಿದ ಶಾಸಕ ಹೆಚ್.ಪಿ.ಮಂಜುನಾಥ್ ಧಾವಿಸಿ ಕುಟುಂಬದವರಿಗೆ ಸಾಂತ್ವನ ಹೇಳಿ, ಸರ್ಕಾರದಿಂದ ಸಿಗುವ ಸೌಲಭ್ಯ ಕೊಡಿಸುವುದಾಗಿ ಭರವಸೆ ನೀಡಿದರು.

ಪ್ರೇಕ್ಷಕರೊಂದಿಗೆ 'ಕೌಟಿಲ್ಯ' ಸಿನಿಮಾ ವೀಕ್ಷಿಸಿದ ಅರ್ಜುನ್



ತಿ.ನರಸೀಪುರ, ಆ.27– ಶುಕ್ರವಾರ ಬಿಡುಗಡೆಯಾಗಿ ಯಶಸ್ವಿ ಪ್ರದರ್ಶನ ಕಾಣುತ್ತಿರುವ ಕೌಟಿಲ್ಯ ಸಿನಿಮಾವನ್ನು ಚಿತ್ರದ ನಾಯಕ ನಟ ಅರ್ಜುನ್ ರಮೇಶ್ ಪಟ್ಟಣದ ಮುರುಗನ್ ಚಿತ್ರಮಂದಿರದಲ್ಲಿ ಪ್ರೇಕ್ಷಕರೊಂದಿಗೆ ಕುಳಿತು ವೀಕ್ಷಿಸಿದರು.

ಅರ್ಜುನ್ ರಮೇಶ್ ಪ್ರಥಮ ಬಾರಿಗೆ ನಟರಾಗಿ ನಟಿಸಿರುವ, ಪ್ರಭಾಕರ್ ಶೇರ್ ಖಾನೆ ನಿರ್ದೇಶನದ ಕೌಟಿಲ್ಯ ಸಿನಿಮಾ ಪಟ್ಟಣದ ಶ್ರೀಮುರುಗನ್ ಚಿತ್ರಮಂದಿರದಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿದ್ದು, ಶನಿವಾರ ಮಧ್ಯಾಹ್ನ ಚಿತ್ರ ತಂಡದೊಂದಿಗೆ ಆಗಮಿಸಿದ ಅರ್ಜುನ್ ಪ್ರೇಕ್ಷಕರು ಹಾಗೂ ಅಭಿಮಾನಿಗಳೊಂದಿಗೆ ಕೆಲಕಾಲ ಚಿತ್ರ ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಅವರು, ಹಲವು ಧಾರಾವಾಹಿಯಲ್ಲಿ ಅಭಿನಯಿಸಿರುವ ನಾನು ಪ್ರಥಮ ಬಾರಿಗೆ ನಾಯಕ ನಟನಾಗಿ ಸಿನಿಮಾದಲ್ಲಿ ಅಭಿನಯಿಸಿದ್ದೇನೆ. ಸಿನಿಮಾ ಬಗ್ಗೆ ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಹೊಸ ಕಲಾವಿದರ ಸಿನಿಮಾ ಸಣ್ಣ ಮಟ್ಟದಲ್ಲಿ ಸದ್ದು ಮಾಡುತ್ತಿದೆ ಎಂದರೆ ಇಡೀ ಚಿತ್ರತಂಡ ಸಂತಸಪಡುವ ವಿಚಾರ. ಸಿನಿಮಾದಲ್ಲಿ ಬಹುತೇಕ ಎಲ್ಲಾ ಕಲಾವಿದರೂ ಹೊಸಬರಾದರೂ, ಅನುಭವಿಗಳಂತೆ ನಟಿಸಿ ಚಿತ್ರಕ್ಕೆ ಜೀವ ತುಂಬಿದ್ದಾರೆ. ಚಿತ್ರಕ್ಕೆ ನಿರೀಕ್ಷೆಗೂ ಮೀರಿದ ಬೆಂಬಲ ನೀಡುತ್ತಿರುವ ಪಟ್ಟಣದ ಜನತೆಗೆ ನಾನು ಆಭಾರಿಯಾಗಿದ್ದೇನೆ ಎಂದರು.

ಇದೇ ವೇಳೆ ಚಿತ್ರಮಂದಿರಕ್ಕೆ ಆಗಮಿಸಿದ ಚಿತ್ರತಂಡಕ್ಕೆ ಅಭಿಮಾನಿಗಳು ಪಟಾಕಿ ಸಿಡಿಸಿ, ಹೂಮಳೆಗೈದು ಅದ್ಧೂರಿ ಸ್ವಾಗತ ಕೋರಿದರು. ಈ ವೇಳೆ ನಿರ್ದೇಶಕ ಪ್ರಭಾಕರ ಶೇರ್‌ಖಾನೆ, ಖಳನಟರಾದ ಸೂರ್ಯ ಪ್ರವೀಣ್, ಲಕ್ಷ್ಮೀಶ್ ಭಟ್, ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಯೀದ್, ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ಆಲಗೂಡು ರಾಜು, ಸಿ.ಮಹದೇವ, ಬಿ.ಎಲ್. ಮಹದೇವ, ಶಂಕರ್ ಮತ್ತಿತರರಿದ್ದರು.

ತಾತನಹಳ್ಳಿ ಶಾಲೆಯಲ್ಲಿ ಪ್ರತಿಭಾ ಕಾರಂಜಿ



ಬೆಟ್ಟದಪುರ, ಆ.27– ಇಲ್ಲಿಗೆ ಸಮೀಪದ ತಾತನಹಳ್ಳಿ ಶಾಲೆಯಲ್ಲಿ ಆಯೋಜಿಸಿದ್ದ ಪಂಚವಳ್ಳಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಉದ್ಘಾಟಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಈರಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಚಂದ್ರು, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಸಿ.ಎನ್.ರವಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಕಾರ್ಯದರ್ಶಿ ಬಿ.ಎಸ್.ದಯಾನಂದ, ಶಾಲೆ ಮುಖ್ಯ ಶಿಕ್ಷಕಿ ಮಮತಾ, ಗ್ರಾಪಂ ಅಧ್ಯಕ್ಷ ಗೋವಿಂದರಾಜು, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ, ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ಅಧ್ಯಕ್ಷ ವೆಂಕಟೇಶ್, ಶಿಕ್ಷಣ ಇಲಾಖೆ ಅಧಿಕಾರಿ ಸೋಮಶೇಖರ್, ಬಿಆರ್‌ಪಿ ಶಿವಶಂಕರ್, ಸಿಆರ್‌ಪಿ ಗಣೇಶ್ ಕುಮಾರ್, ಪಿಡಿಓ ವೀರಭದ್ರ ಶೆಟ್ಟಿ, ಶಿಕ್ಷಕರ ಸಂಘ ವಿವಿಧ ಪದಾಧಿಕಾರಿಗಳಾದ ರಿಯಾಜ್, ಜೆ.ಸ್ವಾಮಿ, ನಟೇಶ್, ಕೆ.ಎಸ್.ಪದ್ಮಿನಿ, ಮಮತಾ, ತಬ್ಸುಮ್, ಎಸ್‌ಡಿಎಂಸಿ ಸದಸ್ಯರಾದ ಕೃಷ್ಣ, ಗಣೇಶ್, ಚಂದ್ರು, ಕೃಷ್ಣಯ್ಯ ಮತ್ತಿತರರಿದ್ದರು.

ಮಾನವ ಹಕ್ಕುಗಳನ್ನು ಎಲ್ಲರೂ ಗೌರವಿಸಿ: ನ್ಯಾಯಾಧೀಶ ಸತೀಶ್



ಸರಗೂರು, ಆ.27– ಮಾನವನ ರಕ್ಷಣೆಗಾಗಿ ಸಂವಿಧಾನ ನೀಡಿರುವ ಮಾನವ ಹಕ್ಕುಗಳನ್ನು ಎಲ್ಲರೂ ಗೌರವಿಸಬೇಕು ಎಂದು ಹೆಚ್.ಡಿ.ಕೋಟೆ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಕೆ.ಜಿ.ಸತೀಶ್ ಸಲಹೆ ನೀಡಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ, ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ವಕೀಲರ ಸಂಘ, ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ನಡೆದ ಮಾನವ ಹಕ್ಕುಗಳು ಮತ್ತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಘನತೆಯಿಂದ ಜೀವಿಸುವ ಹಕ್ಕಿದೆ. ಸಮಾಜದಲ್ಲಿ ಮನುಷ್ಯರು ಜೀವಿಸಲು ಬೇಕಾದ ಸೌಲಭ್ಯಗಳನ್ನು ಸಂವಿಧಾನದ ಆಶಯದ ಮೂಲಕ ನೀಡಲಾಗಿದೆ. ದೇಶಕ್ಕಾಗಿ ದುಡಿಯುತ್ತಿರುವ ಯೋಧರನ್ನು ಗೌರವಿಸಬೇಕಿದೆ. ಯಾರು ಯಾರನ್ನು ತಾರತಮ್ಯ ಮಾಡುವಂತಿಲ್ಲ. ಎಲ್ಲರನ್ನೂ ಸಮಾನತೆಯಿಂದ ಕಾಣಬೇಕಿದೆ ಎಂದರು.

ಹೆಚ್.ಡಿ.ಕೋಟೆ ಅಪರ ಸಿವಿಲ್ ನ್ಯಾಯಾಧೀಶ ಎಸ್.ಎನ್. ಸುರೇಶ್, ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಬಿ.ಸಿ.ಮಲ್ಲೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರಗೂರು ಠಾಣೆ ಎಸ್‌ಐ ಶ್ರವಣ್‌ದಾಸ್‌ರೆಡ್ಡಿ, ಮಾನವ ಹಕ್ಕುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ, ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ಉಪಾಧ್ಯಕ್ಷ ಎಸ್.ಉಮೇಶ್, ವಕೀಲರಾದ ನಾರಾಯಣಗೌಡ, ಸರಸ್ವತಿ, ರೋಜಾ, ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಹೆಚ್.ಎಸ್. ದಿನೇಶ್, ಸರಗೂರು ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ಅಧ್ಯಕ್ಷ ಎನ್.ಕುಮಾರ್, ಸುಪ್ರಿತ್ ಕುಮಾರ್ ಇನ್ನಿತರರರಿದ್ದರು.

ತಾಲೂಕಿನ ಕಾಡಂಚಿನ ಬಿ.ಮಟಕೆರೆ– ಹೀರೆಹಳ್ಳಿ ರಸ್ತೆಯಲ್ಲಿ ಎಂಎಸ್ಐಎಲ್ ಬಾರ್ ಇದ್ದು, ಕುಡುಕರ ಹಾವಳಿಯಿಂದ ಶಾಲಾ–ಕಾಲೇಜು ವಿದ್ಯಾರ್ಥಿನಿಯರು ರಸ್ತೆಯಲ್ಲಿ ತಿರುಗಾಡಲು ಸಾಧ್ಯವಾಗುತ್ತಿಲ್ಲ. ಬಾರ್ ತೆರವುಗೊಳಿಸುವಂತೆ ಗ್ರಾಮಸ್ಥರು ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಬಾರ್ ಸ್ಥಳಾಂತರ ಮಾಡಿ, ಇಲ್ಲ ಬಂದ್ ಮಾಡುವಂತೆ ವಿದ್ಯಾರ್ಥಿನಿಯೊಬ್ಬಳು ನ್ಯಾಯಾಧೀಶರ ಮುಂದೆ ಮನವಿ ಮಾಡಿದಳು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು ಸಾರ್ವಜನಿಕ ಹಿತಾಸಕ್ತಿ ಆಧಾರದ ಮೇಲೆ ಬಾರ್ ವಿರುದ್ಧ ಕ್ರಮ ವಹಿಸಲು ಕಾನೂನು ಸೇವಾ ಸಮಿತಿಗೆ ದೂರು ಸಲ್ಲಿಸುವಂತೆ ಹೇಳಿದರು.

ರಾಜ್ಯದಲ್ಲಿ ಬಲಿಜ ಜನಾಂಗಕ್ಕೆ ಅನ್ಯಾಯ: ಹೆಚ್.ಎ.ವೆಂಕಟೇಶ್ ವಿಷಾದ



ಕೆಆರ್.ನಗರ, ಆ.27– ರಾಜ್ಯದಲ್ಲಿ ಬಲಿಜ ಜನಾಂಗಕ್ಕೆ ಆಗಿರುವಷ್ಟು ಅನ್ಯಾಯ ಬೇರೆ ಯಾವುದೇ ಜನಾಂಗಕ್ಕೂ ಆಗಿಲ್ಲ. ಇದುವರೆಗೂ ಬಲಿಜ ಜನಾಂಗದ ಒಬ್ಬನೇ ಒಬ್ಬ ಸರ್ಕಾರಿ ಹುದ್ದೆ ಪಡೆಯಲಿಲ್ಲ. ರಾಜಕಾರಣದಲ್ಲಿ ಬೆಳೆಯಲಿಲ್ಲ ಎಂದು ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ವಿಷಾದಿಸಿದರು.

ಪಟ್ಟಣದಲ್ಲಿ ನಡೆದ ಎಡತೊರೆ ಬಲಿಜ (ಬಣಜಿಗ) ಸಂಘದ ಉದ್ಘಾಟನೆ ಹಾಗೂ ಸಮುದಾಯದ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಲಿಜ ಜನಾಂಗಕ್ಕೆ ಆಗಿರುವಷ್ಟು ಅನ್ಯಾಯ ಬೇರೆ ಜನಾಂಗಕ್ಕೆ ಆಗಿದ್ದರೆ ಬಹಳ ದೊಡ್ಡ ಕ್ರಾಂತಿಯೇ ನಡೆಯುತ್ತಿತ್ತು. ಜನಾಂಗಕ್ಕೆ 1994ರಲ್ಲಿ 2'ಎ' ಮೀಸಲಾತಿ ತೆಗೆದು ಹಾಕಿದ್ದರಿಂದ ಒಬ್ಬನೇ ಒಬ್ಬ ಸರ್ಕಾರಿ ಹುದ್ದೆ ಪಡೆಯಲಿಲ್ಲ ಹಾಗೂ ರಾಜಕಾರಣದಲ್ಲಿ ಬೆಳೆಯಲಿಲ್ಲ ಎಂದರು.


ರಾಜ್ಯದಲ್ಲಿ ಜನಾಂಗ ದೊಡ್ಡ ಮಟ್ಟದಲ್ಲಿದ್ದರೂ ಇದೂವರೆವಿಗೂ ಒಬ್ಬನೇ ಒಬ್ಬ ಕೆಪಿಎಸ್‌ಸಿ ಸದಸ್ಯರು ಆಗಿಲ್ಲ. ಗ್ರಾಪಂ ಸದಸ್ಯರಾಗಬೇಕಾದರೆ ಬಹಳ ಹರಸಾಹಸ ಪಡಬೇಕಾಗಿದೆ. ಬಲಿಷ್ಠ ಜನಾಂಗದವರ ಜೊತೆ ಪೈಪೋಟಿ ನೀಡಲು ಸಾಧ್ಯವಾಗದೇ ರಾಜಕೀಯವಾಗಿಯೇ ಜನಾಂಗದವರು ದೂರ ಉಳಿಯುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ನಿರ್ಲಕ್ಷಿಸಿದರೂ, ನಮ್ಮ ಸಮಾಜ ಎಲ್ಲಾ ಜಾತಿ–ಜನಾಂಗದವರ ಜೊತೆ ಪ್ರೀತಿ ವಿಶ್ವಾಸಗಳಿಸಿಕೊಂಡು ತನ್ನ ಅಸ್ತಿತ್ವ ಕಂಡುಕೊಂಡಿದೆ. ರಾಜ್ಯದ ಉದ್ದಗಲಕ್ಕೂ ವಿದ್ಯಾರ್ಥಿ ನಿಲಯ ಹೊಂದಿದೆ. ಮೈಸೂರು, ಹಾಸನ, ಬೆಂಗಳೂರು ಮುಂತಾದ ಕಡೆಗಳಲ್ಲಿ ಸಮಾಜದ ನೂರಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ಹಾಸ್ಟೆಲ್ ಪ್ರವೇಶ ಕಲ್ಪಿಸಿದೆ ಎಂದರು.

ಮೈಸೂರು ವಿವಿ ಕುಲಸಚಿವ ಪ್ರೊಆರ್.ಶಿವಪ್ಪ ಮಾತನಾಡಿ, ಸಮಾಜದ ಬಂಧುಗಳು ಸಂಘ ಕಟ್ಟಿ ಬೆಳೆಸುವುದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. 80ರ ದಶಕದಲ್ಲಿ ವಿದ್ಯಾಭ್ಯಾಸಕ್ಕೆ ಹತ್ತಾರು ಕಿಮೀ ನಡೆದು ಹೋಗಬೇಕಿತ್ತು. ಈಗ ಹೆಜ್ಜೆ, ಹೆಜ್ಜೆಗೂ ಶಾಲಾ ಕಾಲೇಜುಗಳಿವೆ. ಶಿಕ್ಷಣಕ್ಕೆ ಸರ್ಕಾರ ಹೆಚ್ಚಿನ ಸವಲತ್ತು ನೀಡುತ್ತಿದೆ. ಆದ್ದರಿಂದ ಎಲ್ಲರೂ ಉನ್ನತ ಶಿಕ್ಷಣ ಪಡೆದು ಸಮಾಜಕ್ಕೆ ಮಾದರಿಯಾಗಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ರಾಜ್ಯ ಶ್ರೀಕೃಷ್ಣದೇವರಾಯ ಬಲಿಜ ಸಂಘದ ಸಂಚಾಲಕ ಶಿರಾ ಡಾ.ಬಿ.ಗೋವಿಂದಪ್ಪ ಮಾತನಾಡಿ, 1994ರಲ್ಲಿ ಅಂದಿನ ಸರ್ಕಾರ ಹಿಂದುಳಿದ ನಮ್ಮನ್ನು 2'ಎ' ವರ್ಗದಿಂದ ತೆಗೆಯುವಾಗ ನಮ್ಮ ಜನಾಂಗದ ಮೂವರು ಶಾಸಕರು, ಒಬ್ಬರು ಸಚಿವರು ಇದ್ದರೂ ಚಕಾರವೆತ್ತದ ಇವರಿಂದ ಸಮಾಜ ಉದ್ಧಾರ ಆಗಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತೀರ್ಣರಾದ ಸಮಾಜದ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಲಾಯಿತು. ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ, ರಾಜ್ಯ ಬಲಿಜ ಸಂಘದ ಅಧ್ಯಕ್ಷ ಶ್ರೀನಿವಾಸ್ ಬಾಬು ಮಾತನಾಡಿದರು. ಮಾಜಿ ಎಂಎಲ್‌ಸಿ ಟಿ.ಕೆಚಿನ್ನಸ್ವಾಮಿ, ಬಾಲ್ಡ್ ವಿನ್ ಎಜುಕೇಷನ್ ಸೊಸೈಟಿ ಸಿಇಓ ರಾಜಶೇಖರ್, ಪಿರಿಯಾಪಟ್ಟಣ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಮೈಸೂರು ಬಲಿಜ ಸಂಘದ ನಿರ್ದೇಶಕರಾದ ಬಿ.ಕೆ.ಸುರೇಶ್, ವಿಜಯ್ ಕುಮಾರ್, ಎಂ.ಡಿ.ಶ್ರೀನಿವಾಸ್, ಲಿಂಗರಾಜು, ಹೇಮಂತ್, ಜಯರಾಂ, ಬಿ.ವಿ.ನಾಗೇಂದ್ರ, ಪ್ರಾಣೇಶ್ ಶೆಟ್ಟಿ, ಶಿರಾ ವಿರೂಪಾಕ್ಷ, ಜೈಪಾಲ್, ಮಿರ್ಲೆ ಗ್ರಾಪಂ ಸದಸ್ಯೆ ಸಿಂಧು, ಪಿಡಿಓ ಕೆ.ಎ.ಮಂಜುನಾಥ್, ಡಾ.ಟಿ.ಎನ್. ಲೋಕೇಶ್ವರಿ, ಸಿನಿಯರ್ ಜಿಯೋಲಿಸ್ಟ್ ಎಂ.ಎಸ್.ಆಶಾ, ಸಂಘದ ಅಧ್ಯಕ್ಷ ಟಿ.ಎನ್.ದಯಾನಂದ್, ಉಪಾಧ್ಯಕ್ಷ ಬಿ.ವಿ.ರಘುನಾಥ್, ಪ್ರಧಾನ ಕಾರ್ಯದರ್ಶಿ ಮಳಲಿ ರಾಘು, ಪದಾಧಿಕಾರಿಗಳಾದ ಭೇರ್ಯ ಮಹೇಶ್, ವಕೀಲ ನಾಗೇಶ್, ಮಂಜುನಾಥ್, ಆನಂದ, ವಸಂತ, ಅನ್ನಪೂರ್ಣಮ್ಮ, ಶ್ರೀನಿವಾಸ್ ಮೊದಲಾದವರಿದ್ದರು.




ಶನಿವಾರ 23ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ತಿ.ನರಸೀಪುರ ಯುವ ಉದ್ಯಮಿ ಕೆ.ವಿ.ಸುಹಾಸ್‌ಗೌಡರನ್ನು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮುಖಂಡರಾದ ದೊಡ್ಡಲಿಂಗೇಗೌಡ, ಚಾಮನಹಳ್ಳಿ ಎ.ಎನ್.ಸ್ವಾಮಿ, ಕಂಡಕ್ಟರ್ ಸುರೇಶ್, ಈರುಳ್ಳಿ ಮಹದೇವು, ಶ್ರೀಮಹದೇಶ್ವರ ಬಸ್ ಎಸ್‌ಪಿಎಲ್ ಮಹದೇವು, ಸೋಮಣ್ಣ, ಜಯಲಕ್ಷ್ಮಿ, ಬಸ್ ವೇಣು, ಎಸ್‌ಎಲ್‌ಎನ್ ಬಸ್ ಕುಮಾರ್, ನಾಗೇಶ್, ಶ್ರೀಕಂಠಸ್ವಾಮಿ, ರಾಮು ಅವರು ಆತ್ಮೀಯವಾಗಿ ಸನ್ಮಾನಿಸಿ, ಶುಭಾಶಯ ಕೋರಿದರು.



ಹೆಚ್.ಡಿ.ಕೋಟೆ ಸಮೃದ್ಧಿ ಸೇವಾ ಟ್ರಸ್ಟ್ ಹಾಗೂ ಬೆಂಗಳೂರಿನ ಕೇಂದ್ರಿಯ ಆಯುರ್ವೇದ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಪ್ರಭಾನಗರ ಹಾಡಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ 100ಕ್ಕೂ ಹೆಚ್ಚು ಮಂದಿಗೆ ವೈದ್ಯರು ಚಿಕಿತ್ಸೆ ನೀಡಿ, ಉಚಿತವಾಗಿ ಔಷಧಿ ವಿತರಿಸಿದರು. ಈ ವೇಳೆ ಸೇವಾ ಟ್ರಸ್ಟ್ ಅಧ್ಯಕ್ಷ ಚಲುವರಾಜು, ಉಪಾಧ್ಯಕ್ಷ ಭೈರಾಜು, ಕಾರ್ಯದರ್ಶಿ ಕುಮಾರ್, ಚಿಕ್ಕದೇವಪ್ಪ, ನಿರ್ದೇಶಕರಾದ ಪ್ರೇಮ್ ಕುಮಾರ್, ಸಿದ್ದರಾಜು, ಖಜಾಂಚಿ ಜೈರಾಮ್, ಕೇಂದ್ರಿಯ ಆಯುರ್ವೇದ ಸಂಶೋಧನಾ ಸಂಸ್ಥೆ ವೈದ್ಯೆ ಡಾ.ಸಿಂಧು, ಡಾ.ಅತಿಕ್ ಹಾಗೂ ಸಿಬ್ಬಂದಿ ವರ್ಗ, ಗ್ರಾಮಸ್ಥ ರವಿ, ಆಶಾ ಕಾರ್ಯಕರ್ತೆ ರೇಣುಕಾ ಇತರರಿದ್ದರು.

ಪಿ.ಎಂ. ಪ್ರಭುಸ್ವಾಮಿ ನಿಧನ



ಪಿರಿಯಾಪಟ್ಟಣ, ಆ.27– ಪಟ್ಟಣದ ದೊಡ್ಡಬೀದಿ ನಿವಾಸಿ ಪಿ.ಎಂ.ಪ್ರಭುಸ್ವಾಮಿ(67) ಶುಕ್ರವಾರ ನಿಧನರಾದರು. ಮೃತರು ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

ಸುಪ್ರೀಂಕೋರ್ಟ್‌ನ 49ನೇ ಮುಖ್ಯ ನ್ಯಾಯಮೂರ್ತಿಯಾಗಿ

ನ್ಯಾ. ಯು.ಯು.ಲಲಿತ್ ಪ್ರಮಾಣ ವಚನ ಸ್ವೀಕಾರ

ನವದೆಹಲಿ: ಸುಪ್ರೀಂ ಕೋರ್ಟ್‌ನ 49ನೇ ಮುಖ್ಯ ನ್ಯಾಯಮೂರ್ತಿ ನ್ಯಾ. ಉದಯ್ ಉಮೇಶ್ ಲಲಿತ್ ಇಂದು ಪ್ರಮಾಣ ವಚನ ಸ್ವೀಕರಿಸಿದ್ದಾರೆ.


ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಸುಪ್ರೀಂಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಗಳಿಗೆ ಪ್ರಮಾಣ ವಚನ ಬೋಧಿಸಿದರು. ನ್ಯಾಯಮೂರ್ತಿ ಎನ್.ವಿ. ರಮಣ ಅವರು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸ್ಥಾನದಿಂದ ನಿನ್ನೆಯಷ್ಟೇ ನಿವೃತ್ತರಾಗಿದ್ದರು.

ತಾವು ನಿರ್ಗಮಿಸುತ್ತಿರುವ ಹೊತ್ತಿನಲ್ಲಿ ಜಸ್ಟಿಸ್ ರಮಣ ಅವರು ಸಂಪ್ರದಾಯ ಮತ್ತು ಹಿರಿತನದ ಮಾನದಂಡಗಳಿಗೆ ಅನುಗುಣವಾಗಿ ನ್ಯಾಯಮೂರ್ತಿ ಲಲಿತ್ ಅವರನ್ನು ಉತ್ತರಾಧಿಕಾರಿಯಾಗಿ ಶಿಫಾರಸು ಮಾಡಿದ್ದರು. ನಂತರ ರಾಷ್ಟ್ರಪತಿಗಳು ನೂತನ ಸಿಜೆಐ ಆಗಿ ನ್ಯಾಯಮೂರ್ತಿ ಲಲಿತ್ ಅವರ ನೇಮಕವನ್ನು ದೃಢಪಡಿಸಿದರು.

ನ್ಯಾಯಮೂರ್ತಿ ಲಲಿತ್ ಅವರು ಭಾರತದ ನ್ಯಾಯಾಂಗ ವ್ಯವಸ್ಥೆಯ ಪರಮೋಚ್ಚ ಕೇಂದ್ರ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿ ಮುಂದಿನ 74 ದಿನಗಳ ಕಾಲ ಅಧಿಕಾರದಲ್ಲಿದ್ದು ನವೆಂಬರ್ 8 ರಂದು ನಿವೃತ್ತರಾಗಲಿದ್ದಾರೆ.

ನಿನ್ನೆ, ನ್ಯಾಯಮೂರ್ತಿ ರಮಣ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ, ಜಸ್ಟಿಸ್ ಲಲಿತ್ ಅವರು ಸುಮಾರು ಮೂರು ತಿಂಗಳ ತಮ್ಮ ಅಧಿಕಾರಾವಧಿಯಲ್ಲಿ ಮೂರು ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುವುದಾಗಿ ಹೇಳಿದ್ದರು. ಪ್ರಕರಣಗಳ ಪಟ್ಟಿಯನ್ನು ಸರಳ, ಸ್ಪಷ್ಟ ಮತ್ತು ಸಾಧ್ಯವಾದಷ್ಟು ಪಾರದರ್ಶಕವಾಗಿಸುವುದು ಅವರ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ.

ನ್ಯಾಯಮೂರ್ತಿ ಲಲಿತ್ ಅವರು ಸುಪ್ರೀಂಕೋರ್ಟ್‌ನ ಆಯಾ ಪೀಠಗಳ ಮುಂದೆ ಯಾವುದೇ ತುರ್ತು ವಿಷಯಗಳನ್ನು ಮುಕ್ತವಾಗಿ ಉಲ್ಲೇಖಿಸಬಹುದಾದ ಸ್ಪಷ್ಟ ಆಡಳಿತವನ್ನು ನೀಡುವುದಾಗಿ ಭರವಸೆ ನೀಡಿದ್ದಾರೆ. ಸುಪ್ರೀಂಕೋರ್ಟ್‌ನಲ್ಲಿ ವರ್ಷವಿಡೀ ಕನಿಷ್ಠ ಒಂದು ಸಂವಿಧಾನ ಪೀಠವಾದರೂ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದಾಗಿ ಹೇಳಿದ್ದರು.



ಅವರು ಆಗಸ್ಟ್ 13, 2014 ರಂದು ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಂಡರು. ನ್ಯಾಯಮೂರ್ತಿ ಲಲಿತ್ ಅವರು ವಕೀಲರ ಬಾರ್ ಕೌನ್ಸಿಲ್‌ನಿಂದ ನೇರವಾಗಿ ಸುಪ್ರೀಂಕೋರ್ಟ್ ಪೀಠಕ್ಕೆ ಏರಿದ ಎರಡನೇ ಸಿಜೆಐ ಆಗಲಿದ್ದಾರೆ.

ನ್ಯಾಯಮೂರ್ತಿ ಲಲಿತ್ ಅವರು ನವೆಂಬರ್ 9, 1957 ರಂದು ಮಹಾರಾಷ್ಟ್ರದ ಸೋಲಾಪುರದಲ್ಲಿ ಜನಿಸಿದರು. ಅವರ ತಂದೆ ಯು.ಆರ್. ಲಲಿತ್ ಅವರು ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠದಲ್ಲಿ ಹೆಚ್ಚುವರಿ ನ್ಯಾಯಾಧೀಶರಾಗಿದ್ದರು ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ವಕೀಲರಾಗಿದ್ದರು. ನ್ಯಾಯಮೂರ್ತಿ ಲಲಿತ್ ಅವರು ಜೂನ್ 1983 ರಲ್ಲಿ ವಕೀಲರಾಗಿ ನೋಂದಾಯಿಸಿಕೊಂಡರು. ಕ್ರಿಮಿನಲ್ ಕಾನೂನಿನಲ್ಲಿ ಪರಿಣತಿ ಪಡೆದಿದ್ದಾರೆ. 1983 ರಿಂದ 1985 ರವರೆಗೆ ಬಾಂಬೆ ಉಚ್ಚ ನ್ಯಾಯಾಲಯದಲ್ಲಿ ಅಭ್ಯಾಸ ಮಾಡಿದರು.

ಜನವರಿ 1986ರಲ್ಲಿ ತಮ್ಮ ವೃತ್ತಿಯನ್ನು ದೆಹಲಿಗೆ ವರ್ಗಾಯಿಸಿಕೊಂಡರು. 2004 ರಲ್ಲಿ ಅವರನ್ನು ಸುಪ್ರೀಂಕೋರ್ಟ್‌ನ ಹಿರಿಯ ವಕೀಲರಾಗಿ ನೇಮಿಸಲಾಯಿತು. ನಂತರ ಅವರನ್ನು 2ಜಿ ತರಂಗಾಂತರ ಹಂಚಿಕೆ ಪ್ರಕರಣದ ವಿಚಾರಣೆ ನಡೆಸಲು ಸಿಬಿಐಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಲಾಯಿತು.

ನ್ಯಾಯಮೂರ್ತಿ ಲಲಿತ್ ಅವರು ಬರುವ ನವೆಂಬರ್ 8 ರಂದು ನಿವೃತ್ತಿಯಾದ ನಂತರ, ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಭಾರತದ 50 ನೇ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ನಿರ್ಧರಿಸಲಾಗಿದೆ.

ಅಮೆರಿಕಾದ ಕಾವೇರಿ ಕನ್ನಡ ಸಂಘಕ್ಕೆ 50ರ ಸಂಭ್ರಮ

ಕನ್ನಡ ಸಾಹಿತ್ಯ ಶ್ರೀಮಂತಿಕೆ ಹೊಂದಿದೆ

ಮೈಸೂರು, ಆ.27–ಅಮೆರಿಕಾದಲ್ಲಿ ಕಾವೇರಿ ಕನ್ನಡ ಸಂಘ ಸ್ಥಾಪನೆಯಾಗಿ 50 ವರ್ಷ ಪೂರೈಸಿದೆ. ಹಾಗಾಗಿ ಕನ್ನಡ ಎಂಬುದು ಭಾಷೆಯಷ್ಟೇ ಅಲ್ಲ. ಅದು ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಸಾಹಿತ್ಯಕವಾಗಿಯೂ ಶ್ರೀಮಂತಿಕೆಯನ್ನು ಹೊಂದಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.



ಅಮೇರಿಕಾದ ಮೇರಿಲ್ಯಾಂಡ್‌ನಲ್ಲಿ ನಡೆದ ಕಾವೇರಿ ಕನ್ನಡ ಸಂಘದ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಕನ್ನಡ ಸರಳ ಮತ್ತು ಸುಂದರವಾದ ಭಾಷೆ. ಕಾವೇರಿ ನದಿ ತಲಕಾವೇರಿಯಲ್ಲಿ ಸಣ್ಣ ತೊರೆಯಾಗಿ ಉಗಮಿಸಿ, ನಂತರ ದೊಡ್ಡನದಿಯಾಗಿ ಹರಿದಂತೆ, ಅಮೆರಿಕದಲ್ಲಿ ಚಿಕ್ಕದಾಗಿ ಆರಂಭವಾದ ಈ ಸಂಘ ಇಂದು ದೊಡ್ಡದಾಗಿ ಬೆಳೆಯುವಲ್ಲಿ ಅನೇಕ ಮಹನೀಯರ ಕೊಡುಗೆಯಿದೆ. ಹಾಗಾಗಿ ಕಾವೇರಿ ಕನ್ನಡ ಸಂಘವೂ ಹೀಗೆ ಯಶಸ್ಸು ಸಾಧಿಸಿ, ಶತಮಾನೋತ್ಸವ ಆಚರಿಸುವಂತಾಗಲಿ ಎಂದರು.

ಭಾರತ ರಾಯಭಾರಿ ಕಚೇರಿಯ ಶೈಕ್ಷಣಿಕ ಮತ್ತು ಸಮುದಾಯ ವಿಭಾಗದ ಕೌನ್ಸಿಲರ್ ಅನ್ಸುಲ್ ಶರ್ಮಾ ಮಾತನಾಡಿ, ಭಾರತ ಅಮೃತ ಮಹೋತ್ಸವ ಆಚರಿಸುವ ವೇಳೆ, ಅಮೇರಿಕ ಕಾವೇರಿ ಕನ್ನಡ ಸಂಘ ಸ್ಥಾಪಿಸಿ 50 ವರ್ಷ ಪೂರೈಸಿರುವುದು ಸಂಭ್ರಮದ ಸಂಗತಿ. ಈ ಸಂಘ ಸಾಂಸ್ಕೃತಿಕ ಮತ್ತು ಸಾಹಿತ್ಯಕವಾಗಿ ಭಾರತ ಮತ್ತು ಅಮೆರಿಕ ಬಾಂಧವ್ಯವನ್ನು ವೃದ್ಧಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.

ರಾಬರ್ಟ್ ಹೆಚ್ ಬ್ಯುಸಿನೆಸ್ ಸ್ಕೂಲ್ ಡೀನ್ ಪ್ರಭುದೇವ ಕೋನಾನ ಮಾತನಾಡಿದರು.

ಈ ವೇಳೆ ಅಮೆರಿಕದ ಮಾಂಟೊಗೊಮರಿಯ ಕೌಂಟಿಯ ಕಾರ್ಯನಿರ್ವಾಹಕ ಮಾರ್ಕ್ ಎಲ್ರಿಚ್, ಕಾವೇರಿ ಕನ್ನಡ ಸಂಘದ ಸಂಸ್ಥಾಪಕ ಸದಸ್ಯೆ ಭಾರತಿಶೆಟ್ಟಿ ರಾಜಶೇಖರ್ ದೊಡ್ಡಣ್ಣ, ಕಾವೇರಿ ಕೃಷ್ಣಮೂರ್ತಿ, ಅಧ್ಯಕ್ಷ ಸತೀಶ್ ಬೆಳಗುತ್ತಿ ಮತ್ತು ಸಂಘದ ವಿವಿಧ ಸಮಿತಿಗಳ ಸದಸ್ಯರು ಉಪಸ್ಥಿತರಿದ್ದರು. ಅಮೆರಿಕದ ಕನ್ನಡಿಗರು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಉಷಾ ಝಾ ತಂಡದ ಕಲಾವಿದರು ರಾಷ್ಟ್ರಗೀತೆ ಹಾಗೂ ಪ್ರಾರ್ಥನೆ ಸಲ್ಲಿಸಿದರು.

ದೇಶದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ನ್ಯಾಯಾಧೀಶರಿಲ್ಲ

ಅಧಿವಕ್ತಾ ಪರಿಷತ್‌ನ ಕಾರ್ಯಾಗಾರ ಉದ್ಘಾಟಿಸಿ ಹೈಕೋರ್ಟ್ ನ್ಯಾಯಮೂರ್ತಿ ಕೆ.ಸೋಮಶೇಖರ್



ಮೈಸೂರು, ಆ.27(ಎಂಟಿವೈ)– ದೇಶದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ನ್ಯಾಯಾಧೀಶರಿಲ್ಲ ಆದರೂ ತಮ್ಮ ಪರಿಮಿತಿಯಲ್ಲಿ ನ್ಯಾಯದಾನ ಮಾಡುವ ಮಹತ್ತರ ಜವಾಬ್ದಾರಿಯನ್ನು ನ್ಯಾಯಾಧೀಶರು ನಿಭಾಯಿಸುತ್ತಿದ್ದಾರೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೆ.ಸೋಮಶೇಖರ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿಯ ವಿಜ್ಞಾನ ಭವನದಲ್ಲಿ ಅಧಿವಕ್ತಾ ಪರಿಷತ್ (ವಕೀಲರ ಸಂಘಟನೆ) ಮೈಸೂರು ಘಟಕ ವತಿಯಿಂದ ಪರಿಷತ್‌ನ ಸದಸ್ಯರಿಗಾಗಿ ಶನಿವಾರ ಹಮ್ಮಿಕೊಂಡಿದ್ದ 'ಪ್ರ-ಶಿಕ್ಷಾ ವರ್ಗ–2022–23' ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದೇಶದ ಜನಸಂಖ್ಯೆ 135 ಕೋಟಿ ಎನ್ನಲಾಗುತ್ತಿದೆ. ವಾಸ್ತವವಾಗಿ ಇದು 140 ಕೋಟಿ ತಲುಪಿದೆ. ಕರ್ನಾಟಕದಲ್ಲಿ 6.50 ಕೋಟಿ ಜನಸಂಖ್ಯೆ ಎಂದರೂ ಅದು 7 ಕೋಟಿ ತಲುಪಿದೆ. ಇನ್ನು ಬೆಂಗಳೂರಿನ ಜನಸಂಖ್ಯೆಯೇ 1.30 ಕೋಟಿ ಎಂದು ಹೇಳಲಾಗುತ್ತಿದ್ದರೂ ಅದು 1.50 ಕೋಟಿ ತಲುಪಿದೆ ಆದರೆ ದೇಶದ ಜನಸಂಖ್ಯೆಗೆ ಅನುಗುಣವಾಗಿ ನ್ಯಾಯಾಧೀಶರ ಸಂಖ್ಯೆ ಇಲ್ಲದಿರುವುದು ವಿಷಾದಕರ. ಎಷ್ಟೋ ಮಿಲಿಯನ್ ಪ್ರಕರಣಕ್ಕೆ ಓರ್ವ ನ್ಯಾಯಾಧೀಶರಿದ್ದಾರೆ. ತೀರ್ಪು ನೀಡಬೇಕಾದ ಪ್ರಕರಣಗಳು ಅಸಂಖ್ಯಾತವಾಗಿವೆ ಎಂದು ತಿಳಿಸಿದರು.

ವಿವಿಧ ನಿಯಮಗಳ ಬಗ್ಗೆ ತಿಳಿದುಕೊಳ್ಳಬೇಕು: ಉತ್ತಮ ವಕೀಲರು ಹಾಗೂ ನ್ಯಾಯಾಧೀಶರಾಗಿ ನಾವು ಸಮಾಜಕ್ಕೆ ಕೊಡುಗೆ ನೀಡುವ ಬಗ್ಗೆ ಚಿಂತಿಸಬೇಕು. ನಾಗರಿಕ ಕಾರ್ಯವಿಧಾನ ಸಂಹಿತೆ, ಸಿವಿಲ್ ಪ್ರೊಸಿಜರ್ ಕೋಡ್ ಹಾಗೂ ಹೊರಬಂದಿರುವ ಮಹತ್ವದ ಆದೇಶಗಳ ಬಗ್ಗೆ ತಿಳಿದುಕೊಳ್ಳಬೇಕು. 12ನೇ ಶತಮಾನದ ಅನುಭವ ಮಂಟಪದ ಪರಿಕಲ್ಪನೆಯಲ್ಲಿ ಇಂದಿನ ಪಾರ್ಲಿಮೆಂಟ್ ರೂಪತಾಳಿದೆ. ಬಸವಣ್ಣನವರ ಕಾಲದಲ್ಲಿ ಬುದ್ಧಿ ಜೀವಿಗಳು ಹಿತ ಚಿಂತಕರು ಸೇರಿ ಸಮಾಜದ ಒಳಿತಾಗಿ ಚಿಂತನೆ ಮಾಡಿ, ಸಮಾಜದ ಹಿತಕಾಯುವ ದೃಷ್ಟಿಯಿಂದ ಕೈಗೊಂಡ ಕ್ರಮದಂತೆ ಅಧಿವಕ್ತಾ ಪರಿಷತ್ ಕೆಲಸ ಮಾಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಬೆಂಚ್(ನ್ಯಾಯಪೀಠ) ಅಂಡ್ ಬಾರ್ (ವಕೀಲರ ಸಂಘ) ನಡುವಿನ ಸಂಬಂಧ ಉತ್ತಮವಾಗಿರುವಂತೆ ಅಧಿವಕ್ತಾ ಪರಿಷತ್ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ, ಸಂವಿಧಾನದ ಪ್ರಸ್ತಾವನೆಯಂತೆ ನ್ಯಾಯದಾನ, ಸಾಮಾಜಿಕ ಆರ್ಥಿಕ, ರಾಜಕೀಯ ಸಮಾನತೆ ಸೇರಿದಂತೆ ಎಲ್ಲವನ್ನು ಪರಿಗಣಿಸಿ ನ್ಯಾಯ ಒದಗಿಸುವುದನ್ನು ಪ್ರತಿಪಾದಿಸುತ್ತದೆ. ಕರ್ತವ್ಯದ ವೇಳೆ ಹೃದಯವಂತಿಕೆ, ಬುದ್ಧಿವಂತಿಕೆ ಬೇಕು. ನ್ಯಾಯವಾದಿಗಳು ಪ್ರೈಮರಿ ಹಾಗೂ ಸೆಕೆಂಡರಿ ಡಾಕ್ಯುಮೆಂಟ್ ಸಲ್ಲಿಸುವ ಬಗ್ಗೆ ತಿಳಿದುಕೊಳ್ಳಬೇಕು. ಸಾಮಾನ್ಯ ಜನರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಅದಕ್ಕಾಗಿ ನಿರಂತರ ಅಧ್ಯಯನ ಅಗತ್ಯ ಎಂದು ಸಲಹೆ ನೀಡಿದರು.

ಪ್ರಳಯ ಆಗುತ್ತೆ: ಬ್ರಹ್ಮ-ವಿಷ್ಣು-ಮಹೇಶ್ವರ ಮೂವರು ಒಂದಾದರೆ ಪ್ರಳಯವಾಗುತ್ತದೆ. ಅದೇ ಮಾದರಿಯಲ್ಲಿ ಪ್ರಸ್ತುತ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ವ್ಯವಸ್ಥೆಯೂ ಮೂರೂ ಒಂದಾದರೆ ಪ್ರಳಯ ಆಗುತ್ತದೆ. ಅದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಡಿಜೆ, ಡಿಸಿ, ಎಸ್ಪಿ ಇರುತ್ತಾರೆ. ತಾಲೂಕು ಮಟ್ಟದಲ್ಲಿ ತಹಶೀಲ್ದಾರ್, ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಮ್ಯಾಜಿಸ್ಟ್ರೇಟರ್ ಇರುತ್ತಾರೆ ಎಂದು ವಿಶ್ಲೇಷಿಸಿದರು.

78ರಲ್ಲಿ 5 ಅಂಗ ಪ್ರಮುಖ: ಮಾನವನ ದೇಹದಲ್ಲಿ ಒಟ್ಟು 78 ಅಂಗಾಂಗಗಳಿವೆ. ಅವುಗಳಲ್ಲಿ 5 ಪ್ರಮುಖವಾದವು. ಅವು ನಿಷ್ಕ್ರಿಯಗೊಂಡರೆ ಜೀವ ಹೋದಂತೆ. ಮೆದುಳು, ಹೃದಯ, ಶ್ವಾಸಕೋಶ, ಕಿಡ್ನಿ, ಲಿವರ್ ಆ ಪ್ರಮುಖ ಅಂಗಾಂಗವಾಗಿವೆ. ಇತ್ತೀಚೆಗೆ ಹೃದಯ ಮತ್ತು ಕಿಡ್ನಿಯನ್ನು ಮರು ಜೋಡಣೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಈ ಪ್ರಕ್ರಿಯೆಯಲ್ಲಿ ಒಬ್ಬರು ಮೃತಪಟ್ಟರೆ, ಮತ್ತೊಬ್ಬರು ಬದುಕುವಂತಾಗಿದೆ. ಇದೇ ಮಾದರಿಯಲ್ಲಿ ಯಾವುದಾದರೂ ಕೇಸ್‌ಗಳು ವಜಾ ಆದಾಗ ಮತ್ತೊಂದು ಪಿಟಿಷನ್ ಹಾಕಬಹುದು. ವಕೀಲರು ಯಾವ ಯಾವ ನಿಯಮ ಏನು ಹೇಳುತ್ತದೆ. ಸೂಟ್ ಯಾವಾಗ ಹಾಕಬೇಕು. ಅವುಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಹಿರಿಯ ವಕೀಲರಾದ ಪಿ.ಡಿ.ಮೇದಪ್ಪ ಎ.ಎಸ್.ನಟರಾಜು, ಓ.ಶ್ಯಾಂಭಟ್, ಕೆ.ಆರ್.ಶಿವಶಂಕರ್, ಸಿ.ಅಪ್ಪಾಜಿಗೌಡ, ವಿ.ಮೈಥಿಲಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಧಿವಕ್ತಾ ಪರಿಷತ್ ಮೈಸೂರು ಘಟಕದ ಅಧ್ಯಕ್ಷೆ ವಿ.ಶಾರದ ಪೂರ್ವ ಅಸಿಸ್ಟೆಂಟ್ ಸಾಲಿಸಿಟರಲ್ ಜನರಲ್ ಆಫ್ ಇಂಡಿಯಾದ ಸಿ.ಶಶಿಕಾಂತ್, ಅಧಿವಕ್ತಾ ಪರಿಷತ್ ಚಾಮರಾಜನಗರ ಘಟಕದ ಅಧ್ಯಕ್ಷ ಕೆ.ಯೋಗೇಶ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪಣಿಚೇತನ್ ಮತ್ತಿತರರು ಹಾಜರಿದ್ದರು.

ಶ್ರೀ ವೈಷ್ಣವ ಸಭಾ (ರಿ)
ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು–570009

ಸರ್ವ ಸದಸ್ಯರ ಸಭೆ

ದಿನಾಂಕ 18.09.2022ನೇ ಭಾನುವಾರದಂದು ಬೆಳಿಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಗೋಪಾಲ ಅಯ್ಯಂಗಾರ್‌ರವರ ಘನ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ಸಭೆಯನ್ನು (ಜನರಲ್ ಬಾಡಿ ಮೀಟಿಂಗ್) ನಡೆಸಲು ತೀರ್ಮಾನಿಸಲಾಗಿದೆ. ಸ್ಥಳ: ಶ್ರೀ ವೈಷ್ಣವ ಸಭಾ, ಸರಸ್ವತಿಪುರಂ, ಮೈಸೂರು ಆದ್ದರಿಂದ ಮಾನ್ಯ ಸದಸ್ಯರುಗಳು ತಮ್ಮಲ್ಲಿರತಕ್ಕಂತಹ ದಾಖಲಾತಿಗಳೊಂದಿಗೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಸಹಿ/– ವರದರಾಜ್, ಕಾರ್ಯದರ್ಶಿ

23ನೇ ವರ್ಷದ ಸವಿನೆನಪು



ಶಿವಮ್ಮ ಆರ್.ಮಹದೇವಪ್ಪ

ನಾವು ನಿಮ್ಮನ್ನು ಅಗಲಿ 23ನೇ ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ರಂಗಸ್ವಾಮಿ, ನಾಗರತ್ನ ಮತ್ತು ಆರ್.ದೊಡ್ಡಸ್ವಾಮಿ ಹಾಗೂ ಯರಗನಹಳ್ಳಿ, ಗ್ರಾಮಸ್ಥರು ಮತ್ತು ಭುಗತಗಳ್ಳಿ ಗ್ರಾಮಸ್ಥರು ಹಾಗೂ ಕುಟುಂಬವರ್ಗದವರು

13ನೇ ವರ್ಷದ ಪುಣ್ಯಸ್ಮರಣೆ



ಬಿ.ವಿ.ಪುಟ್ಟನಂಜಮ್ಮ

ಸದಾ ನಿಮ್ಮ ನೆನಪಿನಲ್ಲಿರುವ ವಿಜಯೇಂದ್ರಕುಮಾರ, ವೀಣಾ, ಶಿಲ್ಪಶ್ರೀ.ವಿ, ಆದರ್ಶಬಾಬು.ವಿ ಮತ್ತು ಕುಟುಂಬ

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

23ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 23 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿರುತ್ತದೆ.

ಆರ್.ಮಹದೇವಪ್ಪ
(ಮೈಸೂರು ನಗರ ರೆವಿನ್ಯೂ ಬಡಾವಣೆಗಳ ಒಕ್ಕೂಟದ ಅಧ್ಯಕ್ಷರು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು, ತಾಲೂಕು ಪಂಚಾಯಿತಿ ಸದಸ್ಯರು ಮತ್ತು ಮಂಡಲ್ ಪಂಚಾಯಿತಿ ಸದಸ್ಯರು ಹಾಗೂ ಟಿಎಪಿಸಿಎಂಎಸ್ ಸದಸ್ಯರು)

ಇಂತಿ
36ನೇ ವಾರ್ಡಿನ ಜನತೆ, ಯರಗನಹಳ್ಳಿ, ಭುಗತಗಳ್ಳಿ ಗ್ರಾಮಸ್ಥರು ಹಾಗೂ ಕುಟುಂಬ ವರ್ಗದವರಿಂದ ಗೌರವ ನಮನ



ಶ್ರೀರಂಗಪಟ್ಟಣ ತಾ॥ ಪಾಲಹಳ್ಳಿ, ಗ್ರಾಮಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ
ಶ್ರೀಮತಿ ರೇಖಾ.ಎಂ ದಿನೇಶ್‌ರವರಿಗೆ
ಅಭಿನಂದನೆಗಳು
ಶುಭಕೋರುವವರು
ಎಳೆನೀರು ರಾಮಣ್ಣ, ಜಿ.ಕುಮಾರಗೌಡರು, ಎ.ಟಿ.ಎಂ ಮಂಜು, ಬಾಲರಾಜು ವಕೀಲರು, ಕೇಬಲ್ ಶಂಭಣ್ಣ ವಿಕಾಸ್‌ಗೌಡ, ವೇಣು, ಉದಯ್‌ಗೌಡ, ಪ್ರದೀಪ್‌ಗೌಡ, ದೀಲಿಪ್ ಗೌಡ, ರಾಹುಲ್ ಗೌಡ, ರೀಷಿಕ ಗೌಡ, ಅನ್ವಿಕ್ ಗೌಡ
ಕೆ.ಜಿ.ಕೊಪ್ಪಲ್, ಮೈಸೂರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.

2021–22 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭಾ ಸೂಚನ ಪತ್ರ

ಒಕ್ಕೂಟದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ: 28.08.2022ರ ಭಾನುವಾರ ಬೆಳಗ್ಗೆ 11.00 ಗಂಟೆಗೆ ಶ್ರೀ ಬಂದತಮ್ಮ ಕಾಳಮ್ಮ ಸಮುದಾಯ ಭವನ, ಕುವೆಂಪುನಗರ, ಮೈಸೂರು** ಇಲ್ಲಿ ಒಕ್ಕೂಟದ **ಅಧ್ಯಕ್ಷರಾದ ಶ್ರೀ ಪಿ.ಎಂ. ಪ್ರಸನ್ನ ರವರ ಅಧ್ಯಕ್ಷತೆಯಲ್ಲಿ** ಏರ್ಪಡಿಸಲಾಗಿದ್ದು, ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳು ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸಭಾ ಸೂಚನಾ ಪತ್ರವನ್ನು ಎಲ್ಲಾ ಸದಸ್ಯ ಸಂಘಗಳಿಗೂ ಮುದ್ದಾಂ ಮೂಲಕ ಕಳುಹಿಸಲಾಗಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/–
ಬಿ.ಎನ್.ವಿಜಯಕುಮಾರ್
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಮೈಸೂರು
ದಿನಾಂಕ: 16.08.2022

ಉಚಿತ ತರಬೇತಿ ಕಾರ್ಯಕ್ರಮಗಳು
ಪ್ರಾಯೋಜಕರು
ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು (ಭಾರತೀಯ ರಿಸರ್ವ್ ಬ್ಯಾಂಕ್ ನ ಅಂಗ ಸಂಸ್ಥೆ)
BRBNMPL CIPET

ಕೇಂದ್ರಿಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್)
ಕೌಶಲ್ಯ ಮತ್ತು ತಾಂತ್ರಿಕ ನೆರವು ಕೇಂದ್ರ (ಸಿ.ಎಸ್.ಟಿ.ಎಸ್), ಮೈಸೂರು, ಭಾರತ ಸರ್ಕಾರ

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು ಸಂಸ್ಥೆಯು 2022–23ನೇ ಸಾಲಿನಲ್ಲಿ ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ (CSR) ಯೋಜನೆಯಡಿ ಮೈಸೂರಿನಲ್ಲಿರುವ ಭಾರತ ಸರ್ಕಾರದ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್) – ಸೆಂಟರ್ ಫಾರ್ ಸ್ಕಿಲ್ಲಿಂಗ್ ಅಂಡ್ ಟೆಕ್ನಿಕಲ್ ಸಪೋರ್ಟ್ (CSTS) ಸಂಸ್ಥೆಯ ಮೂಲಕ 03 ತಿಂಗಳ ಉಚಿತ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ ಹಿಂದುಳಿದ / ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಊಟ ಹಾಗೂ ವಸತಿಗಳೊಂದಿಗೆ ಆಯೋಜಿಸಲಾಗಿದೆ. ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ. 1,000/– ಶಿಷ್ಯವೇತನ ನೀಡಲಾಗುವುದು. ತರಬೇತಿ ಹಾಗೂ ಅರ್ಹತೆ ವಿವರ ಈ ಕೆಳಗಿನಂತಿದೆ

ತರಬೇತಿಯ ಹೆಸರು	ಅವಧಿ	ವಿದ್ಯಾರ್ಹತೆ	ಫಲಾನುಭವಿಗಳ ಸಂಖ್ಯೆ
ಮಷಿನ್ ಆಪರೇಟರ್ ಅಸಿಸ್ಟೆಂಟ್ ಪ್ಲಾಸ್ಟಿಕ್ಸ್ ಪ್ರೋಸೆಸಿಂಗ್ (MoA-PP)	03 ತಿಂಗಳು	8th standard pass	100 ಎಲ್ಲಾ ವರ್ಗದ ಹಿಂದುಳಿದ / ನಿರುದ್ಯೋಗಿ ಯುವಕ ಯುವತಿಯರುಗಳಿಗೆ
ಮಷಿನ್ ಆಪರೇಟರ್ ಅಸಿಸ್ಟೆಂಟ್ ಇಂಜೆಕ್ಷನ್ ಮೌಲ್ಡಿಂಗ್ (MoA-IM)			

ವಯೋಮಿತಿ: General/EWS–18 ರಿಂದ 30 ವರ್ಷಗಳು, OBC–18 ರಿಂದ 33 ವರ್ಷಗಳು, SC/ST–18 ರಿಂದ 35ವರ್ಷಗಳು

ಕಾರ್ಯಕ್ರಮದ ವಿಶೇಷತೆಗಳು:
- ತರಬೇತಿಯು ಊಟ, ವಸತಿಗಳೊಂದಿಗೆ ಸಂಪೂರ್ಣವಾಗಿ ಉಚಿತವಾಗಿದ್ದು, ಯಾವುದೇ ಶುಲ್ಕವಿರುವುದಿಲ್ಲ (No Fees)
- Uniform, Shoes, Course materials ಮತ್ತು Training Kit ಗಳನ್ನು ಉಚಿತವಾಗಿ ನೀಡಲಾಗುವುದು.
- ಕಾರ್ಯಕ್ರಮದ ಜೊತೆಗೆ Spoken English ಮತ್ತು Basic computer training ತರಗತಿಗಳನ್ನೂ ನಡೆಸಲಾಗುವುದು.
- ತರಬೇತಿಯನ್ನು ಪೂರ್ಣಗೊಳಿಸಿದ ನಂತರ ಉದ್ಯೋಗ ಅವಕಾಶಕ್ಕೆ ನೆರವು ನೀಡಲಾಗುವುದು.

ಆಯ್ಕೆಯ ವಿಧಾನ: ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ಸ್ವವಿವರ (Bio-Data) ಹಾಗೂ ವಿದ್ಯಾರ್ಹತೆಗೆ ಸಂಭಂದಿಸಿದ ದಾಖಲೆ ಆಧಾರ್ ಪ್ರತಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಸಂಬಂಧಿಸಿದ ಎಲ್ಲಾ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಲು ಸೂಚಿಸಲಾಗಿದೆ. ಅಥವಾ ಎಲ್ಲಾ ಒರಿಜಿನಲ್ ದಾಖಲೆಗಳು, 06 ಕಲರ್ ಫೋಟೊಗಳೊಂದಿಗೆ **ಮೈಸೂರಿನ ಸಿಪೆಟ್ ಸಂಸ್ಥೆ** ನಡೆಸುವ ನೇರ ಸಂದರ್ಶನ ಮತ್ತು ದಾಖಲಾತಿಗಾಗಿ ಹಾಜರಾಗಲು ಸೂಚಿಸಲಾಗಿದೆ.

ತರಬೇತಿ ಸಂಸ್ಥೆಯ ವಿಳಾಸ :
ಕೇಂದ್ರಿಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್)
437/ಎ, ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾ, ಮೈಸೂರು - 570 016

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
93807 56024, 90666 48466, 0821-2510619, 97890 10015